ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 45 | ನವೆಂಬರ್ 5-11, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

'ಜಿ ಹುಜೂರ್' ಗೂ ಮಿತಿ ಇದೆ
ಎಂದ ಆರ್.ಬಿ.ಐ. ಗವರ್ನರ್
ಊರ್ಜಿತ್ ಪಟೇಲ್





ಸಾರ್ವತ್ರಿಕ ಮುಷ್ಕರಕ್ಕೆ ಸಜ್ಜಾಗುತ್ತಿರುವ ಕಾರ್ಮಿಕ ವರ್ಗ



ಶಾ ಗೆ ಸಂವಿಧಾನ ಪಾಠ ಬೇಕು




ಕಸಾಯಿಖಾನೆ ಮತ್ತು ಕೇಸರಿ ಭಯೋತ್ಪಾದನೆ



ಬ್ರೆಜಿಲ್ : ಆತಂಕಕಾರಿ ಬೆಳವಣಿಗೆ

ಎರಡು ಮಾದರಿಗಳು



ಆಳುವ ಪಕ್ಷದ ಅಧ್ಯಕ್ಷರಿಂದಲೇ ಸುಪ್ರಿಂ ಕೋರ್ಟ್ ತೀರ್ಪಿನ ಅತ್ಯಂತ ನಿರ್ಲಜ್ಜ ಗೇಲಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಬಿಜೆಪಿ ಅಧ್ಯಕ್ಷ ಅಮಿತ್ ಷಾ ಕೇರಳದಲ್ಲಿ ಮಾಡಿದ ಭಾಷಣದಲ್ಲಿ ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ಕುರಿತ ಸುಪ್ರಿಂ ಕೋರ್ಟ್ ಆದೇಶಕ್ಕೆ ಸವಾಲು ಹಾಕಿದ್ದಾರೆ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸುವಂತೆ ತಮ್ಮ ಪಕ್ಷದ ಸದಸ್ಯರಿಗೆ ಕುಮ್ಮಕ್ಕು ನೀಡಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ. ಹೀಗೆ ಮಾಡುವಾಗ ಅವರು ಶಬರಿಮಲೆಯಲ್ಲಿ ಮಹಿಳೆಯರ ಪ್ರವೇಶದ ವಿರುದ್ಧದ ಹಿಂಸಾತ್ಮಕ ಪ್ರತಿಭಟನೆಯ ಹಿಂದಿರುವ ನಿಜವಾದ ಕೈಗಳು ಯಾರದ್ದು ಎಂಬುದನ್ನು ಬಲಯಲಿಗೆಳೆದಿದ್ದಾರೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಇಂತಹ ಕುಮ್ಮಕ್ಕಿನಿಂದಾಗಿಯೇ ಸ್ವಾಮಿ ಸಂದೀಪಾನಂದ ಗಿರಿಯುವರ ಆಶ್ರಮದಲ್ಲಿ ಬೆಂಕಿ ಹಚ್ಚಿರುವ ಅತ್ಯಂತ ಖಂಡನೀಯ ಘಟನೆ ನಡೆಯುವಂತಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಆಳುವ ಪಕ್ಷದ ಅಧ್ಯಕ್ಷರೇ ಸುಪ್ರಿಂ ಕೋರ್ಟ್ ತೀರ್ಪನ್ನು ಇಷ್ಟೊಂದು ನಿರ್ಲಜ್ಜೆಯಿಂದ ಗೇಲಿ ಮಾಡುತ್ತಿರುವುದು ಸಂವಿಧಾನ ಮತ್ತು ಸುಪ್ರಿಂ ಕೋರ್ಟ್ ಬಗ್ಗೆ ಆರೆಸ್ಸೆಸ್–ಬಿಜೆಪಿ ಹೊಂದಿರುವ ತುಚ್ಛೀಕಾರದ ಭಾವನೆಗೆ ಅನುಗುಣವಾಗಿಯೇ ಇದೆ. ಕೇರಳ ರಾಜ್ಯ ಸರಕಾರ ಸುಪ್ರಿಂ ಕೋರ್ಟ್ ತೀರ್ಪನ್ನು ಎತ್ತಿ ಹಿಡಿಯುವುದನ್ನು ಮುಂದುವರೆಸಿದರೆ ಅದನ್ನು ಉರುಳಿಸಲಾಗುವುದು ಎಂಬ ಬೆದರಿಕೆ ಆತನ ಎಂದಿನ ಪ್ರಜಾಪ್ರಭುತ್ವ–ವಿರೋಧಿ, ಸರ್ವಾಧಿಕಾರಶಾಹಿ ನಿಲುವಿನ ಮತ್ತೊಂದು ಪ್ರದರ್ಶನ ಎಂದು ಟೀಕಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇರಳದ ಜನತೆ ಸಮಾಜವನ್ನು ಹಿಂದಕ್ಕೆ ತಳ್ಳುವ ಮತ್ತು ಛಿದ್ರಗೊಳಿಸುವ ಬಿಜೆಪಿ ಮತ್ತು ಆರೆಸ್ಸೆಸ್‌ನ ರಾಜಕೀಯವನ್ನು ತಿರಸ್ಕರಿಸುತ್ತಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದೆ.

ಬಿಜೆಪಿಯು ಮಹಿಳಾ–ವಿರೋಧಿ ಮತ್ತು ಪಿತೃಪ್ರಧಾನ ಮೇಲ್ಜಾತಿ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ನಿಲುವನ್ನು ಸಿಪಿಐ(ಎಂ) ದೇಶಾದ್ಯಂತ ಬಯಲಿಗೆಳೆಯುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಎಲ್‌ಡಿಎಫ್ ಸರಕಾರ ಸುಪ್ರಿಂ ಕೋರ್ಟ್ ತೀರ್ಪನ್ನು ವಿರೋಧಿಸುತ್ತಿದ್ದೇವೆ ಎನ್ನುವವರ ಹಿಂಸಾಚಾರ ಮತ್ತು ಗೂಂಡಾಗಿರಿಯನ್ನು ನಿಲ್ಲಿಸಲು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದೆ.

ಯದ್ವಾತದ್ವಾ ಅನಾಗರಿಕ ವಾದಗಳು–ಮುಖ್ಯಮಂತ್ರಿ ವಿಜಯನ್ ಬಲವಾದ ತಿರುಗೇಟು

ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೇ ಬೆದರಿಕೆ ಹಾಕಿರುವ ಬಿಜೆಪಿ ಅಧ್ಯಕ್ಷರಿಗೆ ಬಲವಾದ ತಿರುಗೇಟು ನೀಡಿದ್ದಾರೆ.

"ನೀವು ಸುಪ್ರಿಂ ಕೋರ್ಟಿಗೇ ಬೆದರಿಕೆ ಹಾಕುತ್ತಿದ್ದೀರಾ? ದೇಶದ ಆಳುವ ಪಕ್ಷದ ಮುಖ್ಯಸ್ಥನ ಬಾಯಿಂದ ಬರುವ ಮಾತುಗಳೇ ಇವು? ಆಳುವ ಪಕ್ಷದ ಒಬ್ಬ ಮುಖಂಡ ಇಂತಹ ಪ್ರಜಾಪ್ರಭುತ್ವ–ವಿರೋಧಿ ನಿಲುವನ್ನು ಪ್ರದರ್ಶಿಸಬಹುದೇ?" ಎಂದು ಅವರು ಖಾರವಾಗಿ ಪ್ರಶ್ನಿಸಿದ್ದಾರೆ. "ನಿಮಗೆ ಈ ಮಣ್ಣಿನಲ್ಲಿ ಜಾಗ ಇಲ್ಲ ಎಂಬುದನ್ನು ನೆನಪಿಡಿ" ಎಂದು ಎಚ್ಚರಿಸಿದ್ದಾರೆ.

ಕಣ್ಣೂರಿನಲ್ಲಿ ಬಿಜೆಪಿ ಅಧ್ಯಕ್ಷರ ಹೇಳಿಕೆಗಳು ಸುಪ್ರಿಂ ಕೋರ್ಟ್, ಸಂವಿಧಾನ ಮತ್ತು ನಮ್ಮ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಡೆಸಿರುವ ದಾಳಿ. ನ್ಯಾಯಾಲಯಗಳು ಸುಲಭವಾಗಿ ಜಾರಿಗೆ ತರಬಹುದಾದ ತೀರ್ಪುಗಳಿಗಷ್ಟೇ ತಮ್ಮನು ಸೀಮಿತಗೊಳಿಸಿಕೊಳ್ಳಬೇಕು ಎಂದು ತಾಕೀತು ಮಾಡಿರುವುದು ನಮ್ಮ ಸಂವಿಧಾನ ಭರವಸೆ ನೀಡಿರುವ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಅವರ ಪಕ್ಷದ ಸರಕಾರಕ್ಕೆ ಏನೇನೂ ಆಸಕ್ತಿಯಿಲ್ಲ ಎಂಬುದನ್ನು ತೋರಿಸುತ್ತದೆ, ಈ ಷಾ ಹೇಳಿಕೆಗಳು ಆರೆಸ್ಸೆಸ್‌ನ ನಿಜಸ್ವರೂಪವನ್ನು ಹೊರಗೆಡಹಿವೆ ಎಂದು ಪಿಣರಾಯಿ ವಿಜಯನ್ ಉದ್ಗರಿಸಿದ್ದಾರೆ.

ಮಹಿಳಾ ಸಮಾನತೆಯನ್ನು ದೇವಸ್ಥಾನ ಪ್ರವೇಶ ಕಾನೂನುಗಳ ಮೂಲಕ ಜಾರಿಗೆ ತರಬಾರದು ಎಂಬ ಅವರ ತರ್ಕ ಜಾತಿ ಆಧಾರಿತ ತಾತರತಮ್ಯಗಳನ್ನು ಕಾನೂನುಗಳ ಮೂಲಕ ರದ್ದು ಮಾಡಬಾರದು ಎಂಬ ತರ್ಕಕ್ಕೆ ಹಾಕಿರುವ ಪೀಠಿಕೆ ಎಂದು ಮುಖ್ಯಮಂತ್ರಿಗಳು ವರ್ಣಿಸಿದ್ದಾರೆ. ಆತನ ಈ ಯದ್ವಾತದ್ವಾ ಮಾತುಗಳು ಮನುಸ್ಮೃತಿ ಪ್ರತಿಪಾದಿಸಿದ್ದ ಲಿಂಗ ಅಸಮಾನತೆಯ ಹಳಸಲು ಕಣ್ಣೋಟಕ್ಕೆ ಆಳುವ ಪಕ್ಷ ಎಷ್ಟು ಬದ್ಧರಾಗಿದೆ ಎನ್ನುವುದನ್ನು ಹೊರಗೆಡಹುತ್ತವೆ ಎಂದು ಬಲವಾಗಿ ಟೀಕಿಸುತ್ತ ಇಂತಹ ಅನಾಗರಿಕ ಸಿದ್ಧಾಂತಗಳ ವಿರುದ್ಧ ನಾಗರಿಕ ಸಮಾಜ ಎದ್ದು ನಿಲ್ಲಬೇಕು ಎಂದು ವಿಜಯನ್ ಹೇಳಿದ್ದಾರೆ.

ತಮ್ಮ ರಾಜ್ಯ ಸರಕಾರವನ್ನು ಉರುಳಿಸುವ ಬೆದರಿಕೆ ಹಾಕಿರುವ ಅಮಿತ್ ಷಾ ಈ ಸರಕಾರ ಅಧಿಕಾರಕ್ಕೆ ಬಂದಿರುವುದು ಬಿಜೆಪಿಯ ಕೃಪೆಯಿಂದ ಅಲ್ಲ, ಬದಲಿಗೆ ಈ ರಾಜ್ಯದ ಜನಗಳ ಬೆಂಬಲದಿಂದ ಎಂಬುದನ್ನು ನೆನಪಿಟ್ಟುಕೊಳ್ಳಬೇಕು ಎಂದು ಎಚ್ಚರಿಸಿದ ಅವರು ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರಕ್ಕೆ ಅದು ತನ್ನ ಸಂವಿಧಾನಿಕ ಕರ್ತವ್ಯಗಳಿಗೆ ಬದ್ಧವಾಗಿದೆ ಎಂಬ ಕಾರಣಕ್ಕಾಗಿ ಉರುಳಿಸುವ ಬೆದರಿಕೆ ಒಡ್ಡಲಾಗುತ್ತಿದೆ ಎಂಬ ಸಂಗತಿಯತ್ತವೂ ಗಮನ ಸೆಳೆದಿದ್ದಾರೆ. ಅದು ಅವರಿಂದ ಖಂಡಿತಾ ಸಾಧ್ಯವಿಲ್ಲ, ಈಗಾಗಲೇ ಕೇರಳದ ಜನತೆ ಅವರು ಎಲ್‌ಡಿಎಫ್ ವಿರುದ್ಧ ತಮ್ಮ 'ಜನರಕ್ಷಾ ಯಾತ್ರೆ'ಗೆ ಜನಗಳ ಉಪೇಕ್ಷೆಯನ್ನು ಕಂಡು ಯಾತ್ರೆ ಹೊರಟ ಮರದಿನವೇ ದಿಲ್ಲಿಗೆ ಹಿಂದಿರುಗಿದ್ದನ್ನು ಕಂಡಿದ್ದಾರೆ ಎಂದು ಗೇಲಿ ಮಾಡಿದರು.

ಕಣ್ಣೂರು ವಿಮಾನ ನಿಲ್ದಾಣವನ್ನು ಇನ್ನೂ ತೆರೆಯಲಾಗಿಲ್ಲ. ಅದರೂ ಅಮಿತ್ ಷಾಗೆ ಅಲ್ಲಿ ಇಳಿಯಲು ಅನುಮತಿ ನೀಡಲಾಗಿದೆ. ಇದು ನಮ್ಮ ಅತಿಥಿ ಸತ್ಕಾರದ ಪರಂಪರೆ. ಆದರೆ ಆತ ಕೇರಳ ಸರಕಾರವನ್ನೇ ಉರುಳಿಸುವ ಬೆದರಿಕೆ ಹಾಕಿದ್ದಾರೆ. ಇಂತಹ ಟೊಳ್ಳು ಬೆದರಿಕೆಗಳಿಗೆ ನಾವೇನೂ ಸೊಪ್ಪು ಹಾಕುವದಿಲ್ಲ. ಕೆಲವು ಅಸೆಂಬ್ಲಿ ಸೀಟುಗಳನ್ನು ಗೆದ್ದು ನೋಡಿ. ನಿಮ್ಮ ಹತಾಶೆ ನಮಗೆ ಅರ್ಥವಾಗುತ್ತದೆ" ಎಂದು ಕೇರಳದ ಹಣಕಾಸು ಮಂತ್ರಿ ಡಾ. ಐಸಾಕ್ ಥಾಮಸ್ ವ್ಯಂಗ್ಯವಾಡಿದ್ದಾರೆ.

ಕೇರಳದ, ಇಡೀ ದೇಶದ ಜನತೆ ಅಮಿತ್ ಷಾ ಮತ್ತು ಅವರ ಅಧ್ಯಕ್ಷತೆಯ ಪಕ್ಷಕ್ಕೆ ಸಂವಿಧಾನಿಕ ಮೌಲ್ಯಗಳ ಪಾಟ ಕಲಿಯಲು ನೆರವಾಗಬೇಕಾಗಿದೆ – ಬೃಂದಾ ಕಾರಟ್ ಚಾಟಿಯೇಟು

ಕೇರಳದಲ್ಲಿ ಬಿಜೆಪಿ ಅಧ್ಯಕ್ಷರ ಬಾಲಿಶ ಮಾತುಗಳು ಅವರ ಎಂದಿನ ಸ್ಕೂಲ್ ಹುಡುಗನ ದುಂಡಾವರ್ತನೆಯನ್ನು ಪ್ರದರ್ಶಿಸಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ವರ್ಣಿಸಿದ್ದಾರೆ. ಆತ ಶಬರಿಮಲೆ ತೀರ್ಪಿನ ಬಗ್ಗೆ ಹೇಳುತ್ತಿದ್ದರೂ ವಾಸ್ತವವಾಗಿ ಅದು "ನಾವು ಬಯಸುವಂತೆ ಮಾಡಿ, ಇಲ್ಲವಾದರೆ ನಿಮ್ಮ ಆದೇಶಗಳ ತಿರಸ್ಕಾರಕ್ಕೆ ಸಿದ್ಧವಾಗಿರಿ" ಎಂದು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಹಾಕಿರುವ ನೇರ ಪ್ರಹಾರ ಎಂದು ಅವರು ಎನ್‌ಡಿಟಿವಿ. ಕಾಂ (ಅಕ್ಟೋಬರ್29)ನಲ್ಲಿ ಬರೆದ ಲೇಖನದಲ್ಲಿ ಹೇಳಿದ್ದಾರೆ.

ಮೋದಿ ಸರಕಾರದ ಆಳ್ವಿಕೆಯಲ್ಲಿ ಅಮಿತ್ ಷಾ ಅಧ್ಯಕ್ಷತೆಯ ಆಳುವ ಪಕ್ಷದ ಮುಖಂಡರುಗಳು ಭಾರತೀಯ ಸಂವಿಧಾನದ ವಿರುದ್ಧ, ದೇಶದ ಆಡಳಿತ ಸಂಸ್ಥೆಗಳ ಸ್ವಾಯತ್ತತೆಯ ವಿರುದ್ಧ ದಾಳಿ ಮಾಡುವಲ್ಲಿ, ಸಂವಿಧಾನಿಕ ಸಂಸ್ಥೆಗಳನ್ನು ಆಳುವ ಪಕ್ಷದ ಹಿತಾಸಕ್ತಿಗಳಿಗಾಗಿ ಬುಡಮೇಲು ಮಾಡುವುದರಲ್ಲಿ ನೇತೃತ್ವ ವಹಿಸಿರುವುದನ್ನು ನೋಡಿದ್ದೇವೆ. ಇದರ ಇತ್ತೀಚಿನ ಆಘಾತಕಾರಿ ಮತ್ತು ಅತ್ಯಂತ ಲಜ್ಜಾಹೀನ ಉದಾಹರಣೆಯೆಂದರೆ ಸಿಬಿಐನ ಬೆಳವಣಿಗೆಗಳು, ಅದನ್ನು ಆಳುವ ಪಕ್ಷದ ಅಗತ್ಯಗಳಿಗೆ ಒಳಪಡಿಸುವ ಪ್ರಯತ್ನಗಳು. ತಾವು ಏನು ಮಾಡಿದರೂ ನಡೆಯುತ್ತದೆ ಎಂಬ ಭಂಡತನವನ್ನು ಇವರು ಪ್ರದರ್ಶಿಸುತ್ತಿದ್ದಾರೆ.

ಪುಟ 7 ನೋಡಿ

ಹೊಸ ಪೆನ್ಶನ್ ಯೋಜನೆಯಲ್ಲಿ ನಿವೃತ್ತಿದಾರರ ಸೌಲಭ್ಯಗಳನ್ನು ಕಡಿತ ಮಾಡಿರುವದನ್ನು ರದ್ದು ಮಾಡಿ–ಮೋದಿ ಸರಕಾರಕ್ಕೆ ಸಿಐಟಿಯು ಆಗ್ರಹ

ಅಕ್ಟೋಬರ್ 12 ರಂದು ಕೇರಳ ಹೈಕೋರ್ಟ್ ನೌಕರರ ಪೆನ್ಶನ್ ಯೋಜನೆ (ಇಪಿಎಸ್), 1995ಕ್ಕೆ ತಂದಿರುವ ಹೆಚ್ಚಿನ ನೌಕರ–ವಿರೋಧಿ ತಿದ್ದುಪಡಿಗಳನ್ನು ರದ್ದು ಮಾಡಿರುವ ತೀರ್ಪನ್ನು ನೀಡಿದೆ. ನಿವೃತ್ತಿದಾರರು ಮತ್ತು ಅವರ ಸಂಘಟನೆಗಳ ಅರ್ಜಿಗಳನ್ನು ಪರಿಶೀಲಿಸಿದ ನ್ಯಾಯಾಲಯ ಈ ತೀರ್ಪನ್ನು ನೀಡಿದೆ.

ಮೋದಿ ಸರಕಾರ ಈ ತೀರ್ಪನ್ನು ಗೌರವಿಸುವ ಬದಲು, ಎಂದಿನಂತೆ, ಈ ಇಡೀ ವಿಷಯವನ್ನು ಮತ್ತಷ್ಟು ವ್ಯಾಜ್ಯಗಳತ್ತ ತಳ್ಳುವತ್ತ ಸಾಗಿದೆ ಎಂದು ಸಿಐಟಿಯು ಖಂಡಿಸಿದೆ.

1995ರಲ್ಲಿ ನೌಕರರ ಕೊನೆಯ ವೇತನದ ಆಧಾರದಲ್ಲಿ ಪೆನ್ಶನ್ ಮೊತ್ತ ನಿಗದಿ ಪಡಿಸುವ ಬದಲು, ನೌಕರರ ದೇಣಿಗೆಗಳ ಆಧಾರದಲ್ಲಿ ಪೆನ್ಶನ್ ನಿಗದಿ ಪಡಿಸುವ ಹೊಸ ಪೆನ್ಶನ್ ಯೋಜನೆಯನ್ನು ತಂದಿತು. ಇದು ನೌಕರರಿಗೆ ಪ್ರಯೋಜನಕಾರಿಯಲ್ಲ, ಅವರ ಸೌಲಭ್ಯಗಳನ್ನು ಕಡಿತ ಮಾಡುತ್ತದೆ ಎಂದು ಆಗ ಸಿಐಟಿಯು ಸುಮಾರು ಏಕಾಂಗಿಯಾಗಿಯೇ ಇದನ್ನು ವಿರೋಧಿಸಿತ್ತು. ವಿಷಯ ಸುಪ್ರಿಂ ಕೋರ್ಟಿನ ವರೆಗೂ ಹೋಯಿತು. ಅಲ್ಲಿ ಸರಕಾರ ಈ ಸ್ಕೀಮಿನಲ್ಲಿ ಬಹಳಷ್ಟು ಹೆಚ್ಚಿನ ಪ್ರಯೋಜನಗಳನ್ನು ಒದಗಿಸಲಾಗುವುದು, ನಿವೃತ್ತಿ ವೇತನದ ಮೂರನೇ ಒಂದಂಶವನ್ನು ನಗದಾಗಿ ಕೊಡುವುದು, ಬಂಡವಾಳವನ್ನು ಹಿಂದಿರುಗಿಸುವುದು ಇತ್ಯಾದಿ. ಈ ಆಧಾರದಲ್ಲಿ ಆಗ ಸುಪ್ರಿಂ ಕೋರ್ಟ್ ಇದಕ್ಕೆ ಮಂಜೂರಾತಿ ನಿಡಿತು.

ಆದರೆ ಸರಕಾರ ಈ ಎಲ್ಲ ಸೌಲಭ್ಯಗಳನ್ನು ಒಂದೊಂದಾಗಿ ರದ್ದು ಮಾಡುತ್ತ ಬಂತು. ಅದಕ್ಕಾಗಿ ಇಪಿಎಸ್ ಕಾಯ್ದೆ, 1995ಕ್ಕೆ ತಿದ್ದುಪಡಿಗಳನ್ನು ಹೇರುತ್ತ ಬಂದಿದೆ.

ಸರಕಾರದ ಉದ್ಧಟತನ ಎಲ್ಲಿಯ ವರೆಗೆ ಹೋಗಿದೆಯೆಂದರೆ, ಪಿಂಚಣಿಯ ಮೂರನೇ ಒಂದಂಶವನ್ನು ನಗದಾಗಿ ಪಡೆಯುವ ಸೌಲಭ್ಯವನ್ನು ರದ್ದು ಪಡಿಸಿದ ಮೇಲೆ, ಅದು ಜಾರಿಯಲ್ಲಿದ್ದಾಗ ಅದನ್ನು ಪಡೆದ ಪೆನ್ಶನ್‌ದಾರರಿಂದ ಅದನ್ನು ವಸೂಲಿ ಮಾಡಿತು, ಅಷ್ಟೇ ಅಲ್ಲ, ಮರುಪಾವತಿಯಾದ ಮೇಲೂ ಅವರ ಅಲ್ಪ ಪ್ರಮಾಣದ ಪೆನ್ಶನ್‌ನಿಂದ ಕಡಿತ ಮಾಡುವುದನ್ನು ಮುಂದುವರೆಸಿದೆ.

ಬಹಳಷ್ಟು ಆಗ್ರಹಗಳ ನಂತರ 2014ರಲ್ಲಿ ಕನಿಷ್ಟ ಪೆನ್ಶನ್ 1000ರೂ. ನಿಗದಿ ಮಾಡಲಾಯಿತು. ಅದರೆ ಈಗಲೂ ಅದನ್ನು ಜಾರಿ ಮಾಡಿಲ್ಲ. ನಿವೃತ್ತಿದಾರರಿಗೆ ಸೌಲಭ್ಯಗಳನ್ನು ಕಡಿತ ಮಾಡಲು ನವೀನ ತಂತ್ರಗಳನ್ನು ಹುಡುಕುವುದರಲ್ಲೇ ಸರಕಾರ ಸಕ್ರಿಯವಾಗಿದೆ ಎಂದು ಸಿಐಟಿಯು ಟೀಕಿಸಿದೆ. ಇದನ್ನು ನಿಲ್ಲಿಸಬೇಕು ಎಂದು ಅದು ಆಗ್ರಹಿಸಿದೆ.

ಈಗ ಈ ಯೋಜನೆ ಹಿಂದಿದ್ದ ಯೋಜನೆಗಿಂತ ಹೆಚ್ಚು ಪ್ರಯೋಜನಕಾರಿ ಖಂಡಿತಾ ಅಲ್ಲ, ನೌಕರರ ದೇಣಿಗೆಗಳನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸುವ ಮೂಲಕ ಮಾಲಕರಿಗಷ್ಟೇ ಪ್ರಯೋಜನಕಾರಿ ಎಂಬುದು ಎಲ್ಲರ ಗಮನಕ್ಕೆ ಬಂದಿದೆ.

ಸರಕಾರ ಮತ್ತು ಇಪಿಎಫ್‌ಒ ಕೇರಳ ಹೈಕೋರ್ಟಿನ ತೀರ್ಪನ್ನು ಸ್ವೀಕರಿಸಬೇಕು, ಎಲ್ಲರಿಗೂ, ವಿನಾಯ್ತಿ ಇರುವ ವಲಯಗಳಲ್ಲೂ ಹೆಚ್ಚಿನ ಪೆನ್ಶನ್ ನೀಡುವ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೆ ತರಬೇಕು, ಏಕಪಕ್ಷೀಯವಾಗಿ ಹಿಂತೆಗೆದುಕೊಂಡ ಎಲ್ಲ ಸೌಲಭ್ಯಗಳನ್ನು ಮರುಸ್ಥಾಪಿಸಬೇಕು ಮತ್ತು ಪೆನ್ಶನ್‌ದಾರರಿಗೆ ಪ್ರಯೋಜನಕಾರಿಯಾದ ಸಿಬಿಟಿ ನಿರ್ಧಾರಗಳನ್ನು ಜಾರಿಗೆ ತರಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ಕೃಷಿಯಲ್ಲಿ 100% ಎಫ್‌ಡಿಐ, ಗುತ್ತಿಗೆ ಕೃಷಿ ಪ್ರೋತ್ಸಾಹಿಸುವ ಬದಲು ಕಾಫಿ ಬೆಳೆಗಾರರ ಸಹಕಾರಿಗಳಿಗೆ ಬೆಂಬಲ ಒದಗಿಸಿ –ಕಾಫಿ ಬೆಳೆಗಾರರ ಸಮಾವೇಶದ ಆಗ್ರಹ

ಅಕ್ಟೋಬರ್ 22 ರಂದು ನಡೆದ ಅಖಿಲ ಭಾರತ ಕಾಫಿ ಬೆಳೆಗಾರರ ಸಮಾವೇಶ ಬೆಳೆಗಾರರು ತಮ್ಮ ಉತ್ಪನ್ನಗಳನ್ನು ದೇಶಿ ಮತ್ತು ವಿದೇಶಿ ಮಾರುಕಟ್ಟೆಗಳಲ್ಲೂ ಮಾರಲು ಅನುಕೂಲವಾಗುವಂತೆ ಬೆಳಗಾರರ ಸಹಕಾರಿಗಳನ್ನು ಪ್ರೋತ್ಸಾಹಿಸಬೇಕು, ಕೃಷಿ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ಬದಲು, ಗುತ್ತಿಗೆ ಕೃಷಿಗೆ ಉತ್ತೇಜನೆ ಕೊಡುವ ಬದಲು ಕಾಫಿ ಬೆಳೆಗಾರರ ಸಹಕಾರಿಗಳಿಗೆ ಹಣಕಾಸು ಬೆಂಬಲ ಒದಗಿಸಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸಿದೆ. ಬ್ರು, ನೆಸ್ಲ್, ಹಿಂದುಸ್ತಾನ್ ಲಿವರ್, ಟಾಟಾದಂತಹ ಕೆಲವೇ ದೊಡ್ಡ ಕಂಪನಿಗಳು ಕಾಫಿ ಮಾರುಕಟ್ಟೆಯ ಮೇಲೆ ಗುತ್ತೇದಾರಿಕೆ ಹೊಂದಿರುವುದನ್ನು ಹೋಗಲಾಡಿಸಬೇಕು ಎಂದು ಸಮಾವೇಶ ಒತ್ತಾಯಿಸಿದೆ. ಕಾಫಿ ಬೇಸಾಯದ ಪರಿಸರ ತಾಳಿಕೆಗೆ, ಹವಾಮಾನ ಬದಲಾವಣೆಯ ಪರಿಣಾಮಗಳನ್ನು ನಿವಾರಿಸುವ ಕ್ರಮಗಳಿಗೆ ಅನುವು ಮಾಡಿ ಕೊಡಬೇಕು, ಕಾಫಿ ಪ್ರದೇಶದಲ್ಲಿ ಮರ ನೆಡುವುದಕ್ಕೆ ಪ್ರೋತ್ಸಾಹ ನೀಡಬೇಕು ಎಂದೂ ಸಮಾವೇಶ ಆಗ್ರಹಿಸಿದೆ.

ಕಳೆದ ಸಂಚಿಕೆಯಲ್ಲಿ ವರದಿಯಾಗಿರುವಂತೆ, ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಉದ್ಘಾಟಿಸಿದ ಈ ಸಮಾವೇಶ 10 ಅಂಶಗಳ ಆಗ್ರಹ ಪಟ್ಟಿಯನ್ನು ಅಂಗೀಕರಿಸಿತು.

ಈ ಸಮಾವೇಶ ಫೆಬ್ರುವರಿ 1ರಂದು ಅಖಿಲಭಾರತ ಬೇಡಿಕೆ ದಿನಾಚರಣೆ ಮತ್ತು ಫೆಬ್ರುವರಿ 15 ರಂದು ಎಲ್ಲ ಜಿಲ್ಲಾ ಮುಖ್ಯಾಲಯಗಳಲ್ಲಿ ಧರಣಿ ನಡೆಸಲು ನಿರ್ಧರಿಸಿತು. ಇದರ ಮೊದಲು ಜನವರಿ 30 ರೊಳಗೆ ಜಿಲ್ಲಾ ಮತ್ತು ರಾಜ್ಯ ಸಮಾವೇಶಗಳನ್ನು ನಡೆಸಲು ನಿರ್ಧರಿಸಲಾಗಿದೆ.

ದಿಲ್ಲಿಯಲ್ಲಿ ಕನಿಷ್ಟ ಕೂಲಿ ಜಾರಿಗೆ ಮಧ್ಯಂತರ ಅವಕಾಶಕ್ಕೆ ಸುಪ್ರಿಂ ಕೋರ್ಟ್ ಆದೇಶ: ಸಿಐಟಿಯು ಸ್ವಾಗತ

ದಿಲ್ಲಿ ಸರಕಾರ ಹೊರಡಿಸಿದ ಮೇ 31, 2017 ರಂದು ಹೊರಡಿಸಿದ ಆದೇಶದಂತೆ ಮೂರು ತಿಂಗಳ ಕಾಲ ಕನಿಷ್ಟ ಕೂಲಿಗಳನ್ನು ನೀಡಬೇಕು ಎಂದು ಸುಪ್ರಿಂ ಕೋರ್ಟ್ ಮಧ್ಯಂತರ ಆದೇಶ ನೀಡಿರುವುದನ್ನು ಸಿಐಟಿಯು ದಿಲ್ಲಿ ರಾಜ್ಯ ಸಮಿತಿ ಸ್ವಾಗತಿಸಿದೆ. ನ್ಯಾಯಾಲಯ ಕೊಟ್ಟಿರುವ ಮುಂದಿನ ಮೂರು ತಿಂಗಳ ಅವಧಿಯೊಳಗೆ ಕನಿಷ್ಟ ಕೂಲಿ ಕಾಯ್ದೆ, 1948ರ ವ್ಯಾಪ್ತಿಯೊಳಗೆ ಎಲ್ಲ ಶೇಡ್ಯೂಲ್ಡ್ ಉದ್ಯೋಗಗಳಿಗೆ ಅನ್ವಯವಾಗುವ ಕನಿಷ್ಟ ಕೂಲಿಗಳ ಅಂತಿಮ ದರವನ್ನು ರೂಪಿಸಲು ಶ್ರದ್ಧೆಯಿಂದ ಪ್ರಯತ್ನಿಸಬೇಕು ಎಂದು ಸಿಐಟಿಯು ದಿಲ್ಲಿ ಸರಕಾರಕ್ಕೆ ಮನವಿ ಮಾಡಿದೆ. ಸುಪ್ರಿಂ ಕೋರ್ಟ್ ಈ ಕೇಸಿನಲ್ಲಿ ಸಿಐಟಿಯುನ ಮಧ್ಯಪ್ರವೇಶಕ್ಕೆ ಅವಕಾಶ ನೀಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸಂಪಾದಕೀಯ

ರಾಜ್ಯೋತ್ಸವ ಅರ್ಥಪೂರ್ಣವಾಗುವುದು ಯಾವಾಗ?

"ಕನ್ನಡ ಅಂದ್ರೆ ಸಾಮರಸ್ಯ, ಕನ್ನಡ ಅಂದ್ರೆ ಪ್ರಗತಿ, ಕನ್ನಡ ಅಂದ್ರೆ ಜ್ಞಾನ, ಕನ್ನಡ ಅಂದ್ರೆ ಪರಂಪರೆ, ಕನ್ನಡ ಅಂದ್ರೆ ಸಮೃದ್ಧಿ, ಕನ್ನಡ ಅಂದ್ರೆ ಬದುಕು, ಕನ್ನಡ ಅಂದ್ರೆ ಸದವಕಾಶ", "ನವ ಕರ್ನಾಟಕ ನಿರ್ಮಾಣಕ್ಕೆ, ಸದಾ ಸಿದ್ಧ ಸರ್ಕಾರ", "ಕನ್ನಡ ನಮ್ಮ ಅಸ್ಮಿತೆ, ಕನ್ನಡ ನಮ್ಮ ಅನನ್ಯತೆ, ಕನ್ನಡವೇ ನಮ್ಮ ಆದ್ಯತೆ" – ಇದು ಕರ್ನಾಟಕ ಸರಕಾರ ಕಳೆದ ವರ್ಷದ ರಾಜ್ಯೋತ್ಸವಕ್ಕೆ ಟಿವಿ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಜಾಹೀರಾತಿನ ಆಕರ್ಷಕ ಸಾಲುಗಳು. ಇವು ಯಾವುವೂ ಇನ್ನೂ ನನಸಾಗಿಲ್ಲ ಎಂಬುದಂತೂ ಸ್ಪಷ್ಟ. ಈಗ ಇರುವುದು ಹೊಸ ಸರಕಾರ ಎಂದಾದರೂ, ಕಾಂಗ್ರೆಸ್ ಮೈತ್ರಿಕೂಟದ ಭಾಗವಾಗಿದ್ದು ಈ ಬಗ್ಗೆ ಏನೂ ಮಾಡಿದ್ದೀರಿ ಎಂದು ಕೇಳುವುದು ಕರ್ನಾಟಕದ ಪ್ರಜೆಗಳ ಹಕ್ಕು, ಕರ್ತವ್ಯ ಕೂಡಾ. ನವೆಂಬರ್ ನಲ್ಲಿ ಕೆಂಪು–ಹಳದಿ ಧ್ವಜ ಹಾರಾಡಿಸಿ ಸಂಭ್ರಮಿಸುವುದಕ್ಕೆ, ಬೋರ್ಡುಗಳಲ್ಲಿ ಕನ್ನಡ ಬರೆಯಲು ಬಲವಂತ ಮಾಡುವುದಕ್ಕೆ, ಅನ್ಯಭಾಷಿಕರಿಗೆ ಕನ್ನಡ ಕಲೀಬೇಕು ಎಂದು ಬೆದರಿಸಲು ಮಾತ್ರ ಕನ್ನಡಾಭಿಮಾನ ಸೀಮಿತವಾಗಿರಬೇಕೆ?

ಸರಕಾರಿ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವುದನ್ನು ಘೋಷಿಸುವುದು, ಆ ಮೇಲೆ ಹಿಂತೆಗೆಯುವ ಸರಕಾರದ ಕಣ್ಣಾಮುಚ್ಚಾಲೆ ಮುಂದುವರೆದಿದೆ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗವಿಲ್ಲ, ಮನ್ನಣೆಯಿಲ್ಲ ಎಂಬ ಪರಿಸ್ಥಿತಿ ಮುಂದುವರೆದಿರುವಾಗ ಇಂಗ್ಲಿಷ್ ಖಾಸಗಿ ಶಾಲೆಗಳು ಇನ್ನಷ್ಟು ಬೆಳೆದಿರುವುದರಲ್ಲಿ ಆಶ್ಚರ್ಯವಿಲ್ಲ. ರಾಜ್ಯದ ಸಿಇಟಿ ನಶಿಸುತ್ತಾ ಹೋಗಿ ಕೇಂದ್ರೀಯ ನೀಟ್ ಕೈಮೇಲಾಗುತ್ತಿದ್ದು ಉನ್ನತ ಶಿಕ್ಷಣದಲ್ಲಿ ರಾಜ್ಯದ ವಿದ್ಯಾರ್ಥಿಗಳಿಗಿದ್ದ ಅವಕಾಶಗಳು ಸೊರಗುತ್ತಿವೆ. ಹಲವಾರು ಕೇಂದ್ರೀಯ ಪ್ರವೇಶ ಪರೀಕ್ಷೆಗಳಿಗೆ ಕನ್ನಡದಲ್ಲಿ ಈಗಲೂ ಬರೆಯುವಂತಿಲ್ಲ. ಇಂಗ್ಲಿಷ್ ಮಾತ್ರವಲ್ಲ, ಹಿಂದಿ ಯಿಂದಲೂ ಕನ್ನಡ ಸಂಕಷ್ಟಕ್ಕೊಳಗಾಗಿದೆ. ಕನಿಷ್ಠ ಶಾಲಾಮಟ್ಟದಲ್ಲಿ ಕನ್ನಡದಲ್ಲಿ ಗುಣಮಟ್ಟದ ಶಿಕ್ಷಣ ಸಾರ್ವತ್ರಿಕವಾಗಿ ಕಡ್ಡಾಯವಾಗಿ ಜಾರಿಯಾಗುವರೆಗೆ ಯಾವುದೇ ಕನ್ನಡದ ಘೋಷಣೆಗಳಿಗೆ ಅರ್ಥವಿಲ್ಲ

ಕನ್ನಡ ಎಲ್ಲಾ ಮಟ್ಟದಲ್ಲೂ ಆಡಳಿತಾಂಗ, ನ್ಯಾಯಾಂಗ, ಶಾಸಕಾಂಗದಲ್ಲಿ ಅಧಿಕೃತ ಭಾಷೆಯಾಗಬೇಕು ಎಂಬುದು ಸಹ ಮೇಲೆ ಹೇಳಿದ ಎಲ್ಲಾ ಆಶಯಗಳಿಗೆ ಆಧಾರಭೂತವಾಗಿರಬೇಕಾದ್ದು. ಶಾಸಕಾಂಗದಲ್ಲಿ ಸ್ವಲ್ಪ ಮಟ್ಟಿಗೆ, ಆಡಳಿತಾಂಗದಲ್ಲಿ ಕೆಳ ಹಂತಗಳಲ್ಲಿ ಮಾತ್ರ ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬಂದಿದೆ. ರಾಜ್ಯ ಸರಕಾರದ ಮಟ್ಟದಲ್ಲಿ ಬಹುತೇಕ ಇಂಗ್ಲಿಷೇ ಆಡಳಿತ ಭಾಷೆಯಾಗಿ ಮುಂದುವರೆದಿದೆ. ಕಾನೂನುಗಳು, ಸರಕಾರಿ ಆಜ್ಞೆಗಳು, ವರದಿಗಳು, ಮಾಹಿತಿ, ಸೂಚನೆಗಳು, ಎಲ್ಲಾ ಕಚೇರಿಗಳಲ್ಲಿ ಫಾರಂಗಳು ಈಗಲೂ ಲಭ್ಯವಿಲ್ಲ. ಸರಕಾರದ, ಸರಕಾರಿ ಸಂಸ್ಥೆಗಳ ವೆಬ್ ಸೈಟು ಬಹುಭಾಗ ಕನ್ನಡದಲ್ಲಿ ಲಭ್ಯವಿಲ್ಲ. ಬ್ಯಾಂಕು ಮುಂತಾದ ಸಾರ್ವಜನಿಕರು ವ್ಯವಹರಿಸುವ ಸಂಸ್ಥೆಗಳಲ್ಲಿ ಕನ್ನಡದ ಬಳಕೆ ಹಿಂದಿಗಿಂತಲೂ ಕೆಳಮಟ್ಟಕ್ಕೆ ಹೋಗಿದೆ. ಕೋರ್ಟುಗಳಲ್ಲಂತೂ ಕೆಳ ಹಂತದಲ್ಲೂ ವಾದಗಳನ್ನು ಮಾಡಬಹುದು ಎಂದು ಬಿಟ್ಟರೆ ತೀರ್ಪು, ಆಜ್ಞೆಗಳು ಕನ್ನಡದಲ್ಲಿ ನಡೆಯುವುದಿಲ್ಲ. ಮೇಲು ಹಂತಗಳಲ್ಲಂತೂ ಕೋರ್ಟುಗಳಲ್ಲಿ ಕನ್ನಡ ವ್ಯವಹಾರ ಅಪರೂಪ.

ಕರ್ನಾಟಕದ ರಾಜಧಾನಿ ಬೆಂಗಳೂರು ಐಟಿ ರಾಜಧಾನಿ ಎಂಬ ಹೆಗ್ಗಳಿಕೆ ಪಡೆದಿದ್ದರೂ ಕನ್ನಡದಲ್ಲಿ ಐಟಿ ಬಳಕೆ ಉಳಿದ ದಕ್ಷಿಣದ ಭಾಷೆಗಳಿಗಿಂತಲೂ ಹಿಂದಿದೆ. ಈಗಲೂ ಸಾರ್ವತ್ರಿಕ ಅಂಗೀಕೃತ ಯುನಿಕೋಡ್ ಇಲ್ಲ. ಈಗ ಇಲೆಕ್ಟ್ರಾನಿಕ್ ರೂಪದಲ್ಲಿರುವ ಕನ್ನಡ ಮಾಹಿತಿ ವಿವಿಧ ಸಾರ್ವತ್ರಿಕವಲ್ಲದ ರೂಪಗಳಲ್ಲಿ ಇದೆ. ಇದರಿಂದ ಕನ್ನಡದ ಆಧುನೀಕರಣ ಸಹ ಹಿಂದುಳಿದಿದೆ. ಇನ್ನು ವಿಜ್ಞಾನ–ತಂತ್ರಜ್ಞಾನದ ಭಾಷೆಯಾಗುವುದು ದೂರವೇ ಉಳಿಯಿತು. ಪ್ರಾಕೃತಿಕ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯವಾಗಬೇಕಾದ ಮಟ್ಟದ ಪುಸ್ತಕಗಳೂ ಎಲ್ಲಾ ಜ್ಞಾನಶಾಖೆಗಳಲ್ಲಿ ಇಲ್ಲ. ಸಾಮಾಜಿಕ ವಿಜ್ಞಾನಗಳಲ್ಲೂ ಇದರ ತೀವ್ರ ಕೊರತೆಯಿದೆ. ಇನ್ನೂ ಸತತವಾಗಿ ವಿಶ್ವವ್ಯಾಪಿಯಾಗಿ ಸೃಷ್ಟಿಯಾಗುತ್ತಿರುವ ಜ್ಞಾನವನ್ನು ಕನ್ನಡದಲ್ಲಿ ಲಭ್ಯ ಮಾಡುವ ಮಾತಂತೂ ದೂರವೇ ಉಳಿಯಿತು.

ಕನ್ನಡವನ್ನು ಶಾಲಾ ಶಿಕ್ಷಣ, ಉನ್ನತ ಶಿಕ್ಷಣ, ಜ್ಞಾನದ ಭಾಷೆಯಾಗಿಸದೆ ಆಡಳಿತದ ಭಾಷೆಯಾಗಿಸುವತ್ತ ಗಂಭಿರ ಕ್ರಮ ಕೈಗೊಳ್ಳದೆ ರಾಜ್ಯೋತ್ಸವದ ಸಂಭ್ರಮಗಳೆಲ್ಲ ಅರ್ಥಹೀನ. ಈ ಬಗ್ಗೆ ಗಂಭಿರ ಕ್ರಮ ಕೈಗೊಳ್ಳದಿರುವುದಕ್ಕೆ ಆ ಮೂಲಕ ಪ್ರಜಾಪ್ರಭುತ್ವ ಸಮಾನತೆ ಸಮೃದ್ಧಿ ಸಾಮರಸ್ಯ ಕ್ಕೆ ಹಾದಿ ಮಾಡದಿರುವುದಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ. ಇದಕ್ಕೆ ಆಳುವ ವರ್ಗಗಳ ಸೀಮಿತ ಹಿತಾಸಕ್ತಿಯೇ ಕಾರಣ. ಇವುಗಳಿಗೆ ಸವಾಲು ಹಾಕದೆ ಕನ್ನಡ ಅಂದ್ರೆ ಸಾಮರಸ್ಯ, ಕನ್ನಡ ಅಂದ್ರೆ ಪ್ರಗತಿ, ಕನ್ನಡ ಅಂದ್ರೆ ಜ್ಞಾನ, ಕನ್ನಡ ಅಂದ್ರೆ ಪರಂಪರೆ, ಕನ್ನಡ ಅಂದ್ರೆ ಸಮೃದ್ಧಿ, ಕನ್ನಡ ಅಂದ್ರೆ ಬದುಕು, ಕನ್ನಡ ಅಂದ್ರೆ ಸದವಕಾಶ", ಬರಿಯ ಸದಾಶಯಗಳು ಪೊಳ್ಳು ಘೋಷಣೆಗಳು ಆಗಿರುತ್ತವೆ.

ಕಸಾಯಿಖಾನೆ ಮತ್ತು ಕೇಸರಿ ಭಯೋತ್ಪಾದನೆ

ವಾಸುದೇವ ಉಚ್ಚಿಲ

ಮಂಗಳೂರಿನ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕುದ್ರೋಳಿಯ ವಧಾಗೃಹದ ಆಧುನೀಕರಣ ಪ್ರಸ್ತಾವವನ್ನು ಸೇರಿಸಿರುವುದು ಕೇಸರಿ ಭಯೋತ್ಪಾದಕರಿಗೆ, ಬಾಲ ಸಿಕ್ಕಿಕೊಂಡ ಮಂಗದಂತೆ ಅರಚಾಡುವುದಕ್ಕೆ ಒಂದು ನೆವ ಒದಗಿಸಿದೆ. ಇರುವ ವಧಾಗೃಹ ಮುಚ್ಚಿ, ಬೇರೊಂದು ನಿರ್ಮಾಣವಾಗುವ ವರೆಗೆ ವಧಾಗೃಹವೇ ಬೇಡ ಎಂಬ ಬೇಜವಾಬ್ದಾರಿ ಈ ಬಿಜೆಪಿ ಪಾಲಿಕೆ ಸದಸ್ಯರದು ಹಾಗೂ ಕೇಸರಿ ಪಡೆಗಳದು. ಕುದ್ರೋಳಿಯ ವಧಾಗೃಹವನ್ನು ಮುಚ್ಚಬಾರದು; ಅದನ್ನು ಆಧುನೀಕರಿಸಬೇಕು. ಜಿಲ್ಲಾಡಳಿತ ಮತ್ತು ನಗರಪಾಲಿಕೆಗಳು ಕೋಮುವಾದಿಗಳ ಪ್ರಚೋದನೆಗೆ ಈಡಾಗಬಾರದೆಂಬ ಬೇಡಿಕೆಗಳೊಂದಿಗೆ ದ.ಕ.ಜಿಲ್ಲೆಯ ಸಮಾನಮನಸ್ಕ ಮತಾತೀತ ಪಕ್ಷಗಳು ಹಾಗೂ ಸಂಘಟನೆಗಳು, "ಆಹಾರದ ಹಕ್ಕು ಸಂರಕ್ಷಣಾ ಹೋರಾಟ ಸಮಿತಿ"ಯನ್ನು ರಚಿಸಿಕೊಂಡಿವೆ. 2018 ನವಂಬರ್ 5 ರಂದು ಸಮಿತಿಯ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ನಡೆದು ಬಳಿಕ ಸಾರ್ವಜನಿಕ ಸಭೆ ಏರ್ಪಡಿಸಲಿದೆ.

ಮುಸ್ಲಿಮರಿಗೆ ಸಂಬಂಧಪಟ್ಟ ಯಾವುದಾದರೂ ವಿಷಯ ಚಲಾವಣೆಯಲ್ಲಿದ್ದರೆ, ಆ ಬಗ್ಗೆ ಕ್ಯಾತೆ ತೆಗೆದು 'ಮುಸ್ಲಿಮರ ತುಷ್ಟೀಕರಣ', 'ಕಾನೂನು ಬಾಹಿರ ಕೃತ್ಯಕ್ಕೆ ಮುಸ್ಲಿಮರಿಗೆ ಸೆಕ್ಯುಲಾರ್‌ವಾದಿಗಳ ಬೆಂಬಲ', 'ಮುಸ್ಲಿಂ ಭಯೋತ್ಪಾದನೆಗೆ ಕುಮ್ಮಕ್ಕು' ಇತ್ಯಾದಿ ಪದಪ್ರಯೋಗವನ್ನು ಜೋರಾದ ಗಂಟಲಲ್ಲಿ ಅರಚಿ ಕಿರುಚಾಡುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಘಪರಿವಾರದ ಸಂಘಟನೆಗಳ ನಿತ್ಯದ ಚಟುವಟಿಕೆಯಾಗಿದೆ. ಅದರಲ್ಲೂ ಗೋಸಾಗಾಟ, ಗೋಮಾಂಸ ಉತ್ಪಾದನೆ ಹಾಗೂ ಮಾರಾಟ, ಗೋಮಾಂಸ ಸೇವನೆ – ಇವು ಕೇವಲ ಮುಸಲ್ಮಾನರು ಮಾಡುವ ಚಟುವಟಿಕೆ ಎಂದೂ, ಗೋಸಂಬಂಧವಾದ ಮೇಲಿನ ಚಟುವಟಿಕೆಗಳು ಹೀನ ಕೃತ್ಯಗಳು ಎಂದು ನಿರೂಪಿಸುತ್ತಾ, ಅಂಥ ಹೀನ ಕೃತ್ಯ ಮಾಡುವವರಾದ ಮುಸಲ್ಮಾನರು ತಿರಸ್ಕಾರ ಹಾಗೂ ದಂಡನೆಗೆ ಯೋಗ್ಯರಾದವರು ಎಂದು ಸಭೆ ಸಮಾರಂಭಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ಈ ಹಿಂದುತ್ವ ಪರಿವಾರದವರು ಘಂಟಾಘೋಷವಾಗಿ ಆರ್ಭಟಿಸುತ್ತಿರುತ್ತಾರೆ. ಮಂಗಳೂರಿನ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕುದ್ರೋಳಿಯ ವಧಾಗೃಹದ ಆಧುನೀಕರಣ ಪ್ರಸ್ತಾವವನ್ನು ಸೇರಿಸಿರುವುದು ಈ ಕೇಸರಿ ಭಯೋತ್ಪಾದಕರಿಗೆ, ಬಾಲ ಸಿಕ್ಕಿಕೊಂಡ ಮಂಗದಂತೆ ಅರಚಾಡುವುದಕ್ಕೆ ಒಂದು ನೆವ ಒದಗಿಸಿದೆ.

ಮಂಗಳೂರು ನಗರ ಮತ್ತು ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದ ಜನತೆಗೆ ಮಾಂಸಾಹಾರ ಒದಗಿಸುವಲ್ಲಿ ಮಂಗಳೂರು ನಗರದ ಕುದ್ರೋಳಿ ವಧಾಗೃಹ ಬಹುಮುಖ್ಯ ಪಾತ್ರವನ್ನು ದಶಕಗಳಿಂದಲೂ ವಹಿಸುತ್ತಾ ಬಂದಿದೆ. ವಧಾಗೃಹದ ನಿರ್ವಹಣೆಯನ್ನು ಆಸಕ್ತ ಮಾಂಸೋದ್ಯಮಿಗಳಿಗೆ ಕಾಲಾವಧಿಯಲ್ಲಿ ಹರಾಜು ನಡೆಸುತ್ತಾ ಬರುತ್ತಿರುವುದರಿಂದ ಮಂಗಳೂರು ಮಹಾನಗರಪಾಲಿಕೆಗೆ ಒಂದೆಡೆಯಲ್ಲಿ ರೆವಿನ್ಯೂ ಲಭಿಸುವುದಾದರೆ, ಇನ್ನೊಂದೆಡೆಯಲ್ಲಿ ಅಲ್ಲಿಂದ ಪಡಕೊಂಡ ಸಂಸ್ಕರಿತ ಆಡು, ಕುರಿ, ದನಗಳ ಮಾಂಸವನ್ನು ಪೂರೈಕೆ ಮಾಡುವ ಸಣ್ಣ ವ್ಯಾಪಾರಿಗಳು ನಗರದಾದ್ಯಂತ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗಿದೆ. ಬಹಳ ಕಾಲದಿಂದಲೂ ಹೆಚ್ಚಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಉದ್ಯಮಿಗಳು ಇದನ್ನು ವಹಿಸಿಕೊಳ್ಳುತ್ತಿದ್ದಾರೆ, ಹಾಗೂ ಎಲ್ಲ ಮತಗಳ ಮಾಂಸಾಪೇಕ್ಷಿ ನಾಗರಿಕರ ಬಯಕೆಯನ್ನು ತಣಿಸುತ್ತಿದ್ದಾರೆ.

ಇತ್ತೀಚೆಗೆ ಕುದ್ರೋಳಿ ವಧಾಗೃಹವನ್ನು ಮುಚ್ಚಬೇಕೆಂದು ಆಗ್ರಹಿಸಿ ಕೆಲವು ಕೋಮುವಾದಿ ಸಂಘಟನೆಗಳು ಆಗ್ರಹಿಸುತ್ತಾ ಬರುತ್ತಿವೆ. ವಧಾಗೃಹಲ್ಲಿ ಕೇವಲ ದನಗಳ ಮಾಂಸವನ್ನು ಮಾತ್ರ ಉತ್ಪಾದಿಸುತ್ತಿದ್ದಾರೆ ಎಂದು ಸುಳ್ಳು ಆರೋಪ ಮಾಡಿ, ಮುಸ್ಲಿಂ ಸಮುದಾಯದ ವಿರುದ್ಧವಾಗಿ ಅವರನ್ನು ಗೋಹತ್ಯಾಕಾರರು ಹಾಗೂ ಭಯೋತ್ಪಾದಕರು ಎಂಬಂತೆ ನಿಂದಿಸಿ ಅಪಪ್ರಚಾರ ಮಾಡಿ, ಕೋಮುದ್ವೇಷವನ್ನು ಹುಟ್ಟು ಹಾಕುತ್ತಿದ್ದಾರೆ. ಕುದ್ರೋಳಿ ವಧಾಗೃಹವನ್ನು ಮುಚ್ಚಿದ್ದೇ ಆದರೆ ಅದರಿಂದ ಮಂಗಳೂರು ನಗರದ ಮಾಂಸಪ್ರಿಯರಿಗೆ ಗೋಮಾಂಸ ಬಿಡಿ, ಆಡು ಕುರಿಗಳ ಆಹಾರವೂ ಇಲ್ಲವಾಗುತ್ತದೆಂಬ ಸತ್ಯ ದ್ವೇಷಪ್ರಚೋದಕರಿಗೆ ಗೊತ್ತಿಲ್ಲ. ನಿಜವಾಗಿ ಕುದ್ರೋಳಿಯ ಕಸಾಯಿಖಾನೆ ಆಧುನೀಕರಣಗೊಳ್ಳಬೇಕಾಗಿದೆ, ಅಲ್ಲವಾದರೆ ಬೇರೊಂದು ಆಧುನಿಕ ಮಾದರಿಯ ವಧಾಗೃಹ ಮಂಗಳೂರಿನ ಹೊರವಲಯದಲ್ಲಿ ಸ್ಥಾಪನೆಯಾಗಬೇಕಾಗಿದೆ.



ಕೇಂದ್ರ ಸರಕಾರವು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಮಂಗಳೂರಿನ ಅಭಿವೃದ್ಧಿಗೆ ಹಲವು ಪ್ರಸ್ತಾವಕ್ಕೆ ಅವಕಾಶ ಮಾಡಿದೆ. ಅದರಲ್ಲಿ ರೂ.15 ಕೋಟಿ ವೆಚ್ಚದ ಆಧುನಿಕ ವಧಾಗೃಹವೂ ಒಂದು. ಬಿಜೆಪಿ ಸದಸ್ಯರನ್ನೂ ಒಳಗೊಂಡ ಮಂಗಳೂರು ಮಹಾನಗರ ಪಾಲಿಕೆ ಅಂಥದೊಂದು ಪ್ರಸ್ತಾಪವನ್ನು ಅಂಗೀಕರಿಸಿದೆ. ಇದೀಗ ಬಿಜೆಪಿ ಪಕ್ಷದ ಬೆಂಬಲಿಗರೂ ಹಾಗೂ ಸಂಘಪರಿವಾರದ ಕೆಲ ಮುಖಂಡರೂ ಆಧುನಿಕ ವಧಾಗೃಹ ಮುಸ್ಲಿಮರ ತುಷ್ಟೀಕರಣದ ಯೋಜನೆ ಎಂಬಂತೆ ಟೀಕಿಸುತ್ತಿದ್ದಾರೆ. ಮಂಗಳೂರು ನಗರಕ್ಕೆ ವಧಾಗೃಹದ ಅಗತ್ಯವೇ ಇಲ್ಲವೆಂಬ ಇವರುಗಳ ಧೋರಣೆ ಖಂಡನೀಯ.

ಕುದ್ರೋಳಿ ಜಾನುವಾರು ವಧಾಗೃಹ ವಿರುದ್ಧ ಸಂಘ ಪರಿವಾರ ಕತ್ತಿ ಜಳಪಿಸುತ್ತಿರುವುದು ಇದೇ ಮೊದಲಲ್ಲ. ಇಂದಿಗೆ 11 ವರ್ಷಗಳ ಹಿಂದೆಯೇ ಮಂಗಳೂರಿನ ಏಕೈಕ ವಧಾಗೃಹವನ್ನು ಮುಚ್ಚಬೇಕೆಂದು ಒಂದು ವಿಕೃತ ಚಳುವಳಿಯನ್ನೇ ಅವರು ಆರಂಭಿಸಿದ್ದರು. ಹೆಚ್ಚು ಕಡಿಮೆ ಕಳೆದ 30 ವರ್ಷಗಳಿಂದಲೂ ದಕ್ಷಿಣ ಕನ್ನಡದಲ್ಲಿ (ಉಡುಪಿ ಜಿಲ್ಲೆಯೂ ಸೇರಿ) ಗೋಸಾಗಾಟ ಹಾಗೂ ಗೋ ಮಾರಾಟದಂಥ ಕಾನೂನು ಬಾಹಿರ(?) ಕೃತ್ಯಗಳನ್ನು ಜಿಲ್ಲೆಯ ಮುಸಲ್ಮಾನರು ಮಾಡುತ್ತಿದ್ದಾರೆಂಬ

ಪುಟ 4 ಕ್ಕೆ

ಸುರತ್ಕಲ್ ಟೋಲ್‌ಗೇಟ್: 11 ದಿನಗಳ ಅನಿರ್ದಿಷ್ಟಾವಧಿ ಧರಣಿ ಮುಕ್ತಾಯ

ವಾ. ಉ.

ಕೇವಲ 15 ಕಿ.ಮೀ.ಗಳೊಳಗಾಗಿ ಹೆಜಮಾಡಿ ಎಂಬಲ್ಲಿ ಟೋಲ್‌ಗೇಟ್ ಇದ್ದರೂ ಸುರತ್ಕಲ್‌ನಲ್ಲಿ ಟೋಲ್‌ಗೇಟ್ ಮಾಡಿ ಸುಂಕ ವಸೂಲಿ ಮಾಡುತ್ತಿರುವುದು ಅಕ್ರಮವಾಗಿದ್ದು, ಸದ್ರಿ ಟೋಲ್‌ಗೇಟನ್ನು ಮುಚ್ಚಿ ಹೆಜಮಾಡಿ ಗೇಟಿನಲ್ಲಿ ವಿಲೀನಗೊಳಿಸಬೇಕೆಂದು ಆಗ್ರಹಿಸಿ, ಸುರತ್ಕಲ್‌ನಲ್ಲಿ 11 ದಿನಗಳಿಂದ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಹಗಲು ರಾತ್ರಿ ಅನಿರ್ದಿಷ್ಟಾವಧಿ ಧರಣಿ ನಡೆದಿತ್ತು.



ರಾಷ್ಟ್ರೀಯ ಹೆದ್ದಾರಿಯು ಕೇಂದ್ರ ಸರಕಾರವು ನಿರ್ವಹಿಸುವ ಯೋಜನೆಯಾಗಿದ್ದು, 2 ಅವಧಿಗಳಲ್ಲಿ ಸಂಸದರಾಗಿರುವ ಬಿಜೆಪಿ ಪಕ್ಷದ ನಳಿನ್ ಕುಮಾರ್ ಕಟೀಲು ಈ ಬಗ್ಗೆ ಜನಾಭಿಪ್ರಾಯವನ್ನು ಅರ್ಥಮಾಡಿಕೊಳ್ಳದೆ ಮೌನ ತಳೆದಿದ್ದಾರೆ ಎಂದು ಈ ಹೋರಾಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ರಾಜಕೀಯ ಹಾಗೂ ಸಾರ್ವಜನಿಕ ಮುಖಂಡರು ಟೀಕಿಸಿದ್ದಾರೆ. ಜಿಲ್ಲೆಯ ಕಾಂಗ್ರೆಸ್, ಜೆಡಿ(ಎಸ್), ಸಿಪಿಐ(ಎಂ), ಸಿಪಿಐ ಪಕ್ಷಗಳಲ್ಲದೆ ಡಿವೈಎಫ್‌ಐ, ದಸಂಸ ಇತ್ಯಾದಿ ಸಂಘಟನೆಗಳು ಈ ಚಳುವಳಿಗೆ ಬೆಂಬಲಿಸಿವೆ. ಮಾಜಿ ಮಂತ್ರಿಗಳಾದ ಬಿ.ರಮಾನಾಥ ರೈ, ಜೆಡಿಎಸ್‌ನ ಅಮರನಾಥ ಶೆಟ್ಟಿ, ಮಾಜಿ ಶಾಸಕರಾದ ವಿಜಯಕುಮಾರ್ ಶೆಟ್ಟಿ, ಶಕುಂತಳಾ ಶೆಟ್ಟಿ, ಮಂಗಳೂರು ಮೇಯರ್ ಭಾಸ್ಕರ ಮೊಯಿಲಿ, ಸಿಪಿಐ(ಎಂ) ಮುಖಂಡರಾದ ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಭೇಟಿ ನೀಡಿ ಚಳುವಳಿಗೆ ಬೆಂಬಲ ಸೂಚಿಸಿ ಮಾತನಾಡಿದ್ದಾರೆ. ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಹಾಗೂ ಸ್ಥಳೀಯ ಕಾಂಗ್ರೆಸ್ ಪಾಲಿಕೆ ಸದಸ್ಯರಾದ ರೇವತಿ ಪುತ್ರನ್, ಪುರುಷೋತ್ತಮ ಚಿತ್ರಾಪುರ, ಸಿಪಿಐ(ಎಂ) ಪಾಲಿಕೆ ಸದಸ್ಯ ದಯಾನಂದ ಶೆಟ್ಟಿ ಈ ಇಡೀ ಹೋರಾಟದಲ್ಲಿ ಸಂಪೂರ್ಣ ತೊಡಗಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಹೋರಾಟವನ್ನು ಬೆಂಬಲಿಸಿ ಆಗೀಗ ಬಂದು ಭಾಗವಹಿಸಿದ್ದಾರೆ.

ಅಕ್ಟೋಬರ್ 31 ರಂದು ಮಂಗಳೂರು ನಗರ ಪಾಲಿಕೆ ತನ್ನ ಮಾಸಿಕ ಸಭೆಯಲ್ಲೂ ಸುರತ್ಕಲ್ ಟೋಲ್‌ಗೇಟನ್ನು ಮುಚ್ಚಬೇಕೆಂದು ಆಗ್ರಹಿಸಿ ನಿರ್ಣಯ ಕೈಗೊಂಡಿದೆ.

11 ದಿನಗಳಿಂದ ಸುರತ್ಕಲ್‌ನಲ್ಲಿ ನಡೆಯುತ್ತಿದ್ದ ರಾತ್ರಿ ಹಗಲು ಧರಣಿಯನ್ನು ದ.ಕ.ಜಿಲ್ಲಾ ಉಸ್ತುವಾರಿ ಸಚಿವರ ಮಧ್ಯಪ್ರವೇಶದ ಬಳಿಕ ಮುಕ್ತಾಯ ಮಾಡಲಾಗಿದೆ. ನವಂಬರ್ 1 ರಂದು ಧರಣಿ ಸ್ಥಳಕ್ಕೆ ಭೇಟಿ ನೀಡಿದ ಸಚಿವ ಯು.ಟಿ.ಖಾದರ್ ಧರಣಿ ನಿರತರೊಂದಿಗೆ ಸಂಧಾನ ನಡೆಸಿದರು. ತಾನು ನವಂಬರ್ 2 ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸಿ ಬಳಿಕ ಹೋರಾಟಗಾರರ ಬೇಡಿಕೆಗಳನ್ನು ವಾರದೊಳಗೆ ರಾಜ್ಯ ಮಟ್ಟದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಮುಂದೆ ದೆಹಲಿಗೆ ನಿಯೋಗ ಕರೆದೊಯ್ಯಲಾಗುವುದು ಎಂದೂ, ಸುರತ್ಕಲ್ ಅಕ್ರಮ ಟೋಲ್‌ಗೆ ಶಾಶ್ವತ ಮುಕ್ತಿ ನೀಡುವುದಾಗಿಯೂ ಸಚಿವ ಯು.ಟಿ.ಖಾದರ್ ಭರವಸೆ ನೀಡಿದರು.

ಸಚಿವರು ನೀಡಿದ ಆಶ್ವಾಸನೆಯನ್ನು ಅಂಗೀಕರಿಸಿ, ಸುರತ್ಕಲ್ ನಾಗರಿಕ ಹೋರಾಟ ಸಮಿತಿ 11 ದಿನಗಳಿಂದ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಧರಣಿಯನ್ನು ಮುಕ್ತಾಯಗೊಳಿಸಲಾಯಿತು.

ಡಿಪೋಗಳ ಮುಂದೆ ಮುಂದುವರಿಯಲಿದೆ ಬೀಡಿ ಕಾರ್ಮಿಕರ ಪ್ರತಿಭಟನೆ

ಕಾರ್ಮಿಕರು ಕಟ್ಟುವ 1000 ಬೀಡಿಗೆ ಸರಕಾರೀ ಆದೇಶದಂತೆ 2018 ಎಪ್ರಿಲ್ 1 ರಿಂದ ರೂ.210 ಕನಿಷ್ಠ ಕೂಲಿ ನೀಡಬೇಕೆಂದು, ಅದೇ ರೀತಿ ಸರಕಾರದ ಆದೇಶದಂತೆ 2015 ಎಪ್ರಿಲ್ 1ರಿಂದ 1000 ಬೀಡಿಗೆ ರೂ.12.75 ರಂತೆ ಬಾಕಿ ಇರುವ ತುಟ್ಟಿಭತ್ತೆಯನ್ನು ನೀಡಬೇಕೆಂದು ಆಗ್ರಹಿಸಿ ಅಕ್ಟೋಬರ್ 23ರಂದು ಆರಂಭವಾಗಿದ್ದ ಅನಿರ್ದಿಷ್ಟ ಮುಷ್ಕರವನ್ನು ಮಾಲಕರು ಹೈಕೋರ್ಟಿಗೆ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಅದೇ ದಿನವೇ ಹಿಂತೆಗೆದುಕೊಳ್ಳಲಾಯಿತು.

ಕೆಲಸ ಸ್ಥಗಿತಗೊಳಿಸಿ ಮುಷ್ಕರ ಕೈಗೊಳ್ಳುವಂತಿಲ್ಲವಾದರೂ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಆಗ್ರಹಿಸುವುದು ಹಾಗೂ ಪ್ರತಿಭಟಿಸುವುದು ಅವರ ಹಕ್ಕು ಆಗಿದೆ. ಅದರಂತೆ ಅಕ್ಟೋಬರ್ 23, 24, 25 ರಂದು ಅನಿರ್ದಿಷ್ಟ ಮುಷ್ಕರಕ್ಕೆ ಕುಳಿತಿದ್ದ – ಮಂಗಳೂರಿನ ಭಾರತ್ ಬೀಡಿ ವರ್ಕ್ಸ್ ಕಚೇರಿ ಎದುರು ಸ್ಥಳದಲ್ಲೇ 3 ದಿನ ಕಾಲ ಹಗಲು ರಾತ್ರಿ ಧರಣಿ ಸತ್ಯಾಗ್ರಹ ನಡೆಸಿ ಒಂದು ಹಂತದ ಹೋರಾಟವನ್ನು ಸ್ಥಗಿತಗೊಳಿಸಲಾಯಿತು.

ಬೀಡಿ ಕಾರ್ಮಿಕರು ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಶನ್ನಿನ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮತ್ತೆ ಧರಣಿ ಸತ್ಯಾಗ್ರಹ ಹಾಗೂ ಪ್ರತಿಭಟನೆಯನ್ನು ಮುಂದುವರಿಸಲಿದ್ದಾರೆ. ನವಂಬರ್ ತಿಂಗಳಿಂದ ಆರಂಭಿಸಿ ಬೇಡಿಕೆಗಳು ಈಡೇರುವವರೆಗೆ ಅಲ್ಲಲ್ಲಿ ಬೇರೆ ಬೇರೆ ಕಂಪೆನಿಯ ಬೀಡಿ ಡಿಪೋಗಳ ಎದುರು ಆಯಾ ಪ್ರದೇಶದ ಬೀಡಿ ಕಾರ್ಮಿಕರು ನಡೆಸುವ ಪ್ರತಿಭಟನೆ ಮುಂದುವರಿಯಲಿದೆ.

ಕಸಾಯಿಖಾನೆ ಮತ್ತು ಕೇಸರಿ ಭಯೋತ್ಪಾದನೆ.... ಪುಟ 3 ರಿಂದ

ಅಪಪ್ರಚಾರ ವ್ಯಾಪಕವಾಗಿ ಸಂಘಪರಿವಾರಗಳಿಂದ ನಡೆಯುತ್ತಲೇ ಇದೆ. ಬಿಜೆಪಿ ಪಕ್ಷವೂ ಅದರಿಂದ ಹೊರತಾಗಿಲ್ಲ. ದನ ಸಾಗಾಟಗಾರರು ಹಿಂದೂಗಳೇ ಇರಲಿ, ಮುಸ್ಲಿಮರೇ ಇರಲಿ ಅವರ ಸಾಗಾಟ ವಾಹನಗಳನ್ನು ಕೇಸರಿ ಪಡೆಗಳು ಅಟ್ಟಿಕೊಂಡು ಹೋಗಿ ಹೊಡೆದು ಬಡೆದುದು ಹಾಗೂ ಕೊಂದು ಹಾಕಿದ ಉದಾಹರಣೆಗಳು ಈ ಜಿಲ್ಲೆಗಳಲ್ಲಿವೆ. ಬಹುಶ: ಅವುಗಳಲ್ಲಿ ಮಾಧ್ಯಮದಲ್ಲಿ ಪ್ರಚಾರಕ್ಕೆ ಬಂದ ಮೊದಲ ಘಟನೆ ಆದಿ ಉಡುಪಿಯಲ್ಲಿ ದನದ ವ್ಯಾಪಾರಿಗಳಾದ ಹಾಜಬ್ಬ ಹಸನಬ್ಬ ಅವರನ್ನು ಬತ್ತಲೆಗೊಳಿಸಿದ ಪ್ರಕರಣ. ಸಾಕಷ್ಟು ಸಾಕ್ಷ್ಯಗಳಿಲ್ಲದೆ ಅಥವಾ ಸಾಕ್ಷಿ ಹೇಳಲು ಭಯಭೀತರಾದ ಜನರಿಂದಾಗಿ, ಇತ್ತೀಚೆಗೆ ಪ್ರಕರಣದ ದಾಳಿಕೋರರು ಆರೋಪ ಮುಕ್ತರಾಗಿದ್ದಾರೆ. ಆದರೆ ಅನಂತರವೂ ಗೋ ಸಾಗಾಟದ ವೇಳೆ ಸಂಘಪರಿವಾರದಿಂದ ನಡೆದ ದಾಳಿಗಳು ಅನೇಕವು ವರದಿಯಾಗಿದೆ.

ಈ ಹಿನ್ನೆಲೆಯಲ್ಲಿ 11 ವರ್ಷಗಳ ಹಿಂದೆ, ಮಂಗಳೂರಿನ ಕುದ್ರೋಳಿ ವಧಾಗೃಹದಲ್ಲಿ ಕೇವಲ ಗೋಮಾಂಸ ಮಾತ್ರ ಮಾಡಲಾಗುತ್ತಿದೆ; ಆದುದರಿಂದ ಅದರ ಗುತ್ತಿಗೆ ನವೀಕರಿಸಬಾರದು ಎಂದು ಕೇಸರಿ ಬಳಗ ದೊಡ್ಡ ಅಪಪ್ರಚಾರ ಆರಂಭಿಸಿತ್ತು. ಸರಕಾರ ಅವರ ಒತ್ತಡಕ್ಕೆ ಮಣಿಯದುದರಿಂದ, ಅವರು ತಂತ್ರ ಬದಲಾಯಿಸಿ, ಅದೇ ವರ್ಷ ಅವರಲ್ಲೊಬ್ಬರ ಹೆಸರಿನಲ್ಲಿ ವಧಾಗೃಹದ ಗುತ್ತಿಗೆ ವಹಿಸಿಕೊಂಡರು. ಅವರು ವಹಿಸಿಕೊಂಡ ಬಳಿಕ ಆಡು, ಕುರಿ, ಗೋವು– ಯಾವುದರ ಮಾಂಸವನ್ನೂ ಉತ್ಪಾದಿಸಲಿಲ್ಲ. ಆಡು, ಕುರಿ ಮಾಂಸವೂ ನಗರದಲ್ಲಿ ಸಿಗದಾದ ಪರಿಸ್ಥಿತಿ ನಿರ್ಮಾಣವಾಯಿತು. ತಮಗೆ ವಧಾಗೃಹ ನಿರ್ವಹಣೆ ಲಾಭದಾಯಕವಲ್ಲ ಎಂದು ಅವರು ಕೈಚೆಲ್ಲಿ ವಾರದೊಳಗಾಗಿ ಮಹಾನಗರ ಪಾಲಿಕೆಗೆ ಹಿಂದಕ್ಕೆ ಒಪ್ಪಿಸಿಬಿಟ್ಟರು. ನಗರಪಾಲಿಕೆ ನಗರದ ಜನರ ಮಾಂಸ ಆಹಾರ ಪೂರೈಕೆ ಜವಾಬ್ದಾರಿಯಲ್ಲಿ ಕೂಡಲೇ ಪರ್ಯಾಯ ವ್ಯವಸ್ಥೆಯನ್ನು ಮಾಡಿತು. ಅಲ್ಲಿಂದೀಚೆಗೆ 11 ವರ್ಷಗಳಿಂದಲೂ ವಧಾಗೃಹದ ನಿರ್ವಹಣೆಯ ಹರಾಜು ಕಾಲಾವಧಿಯಲ್ಲಿ ನಡೆಯುತ್ತಿದ್ದು, ಅದನ್ನು ಹರಾಜಿನಲ್ಲಿ ಪಡೆದುಕೊಳ್ಳುತ್ತಿರುವ ಮುಸ್ಲಿಂ ಬಾಂಧವರು ಮಂಗಳೂರು ಹಾಗೂ ಆಸುಪಾಸಿನ ಜನರಿಗೆ ಮಾಂಸ ಪೂರೈಕೆ ಮಾಡುತ್ತಲೇ ಇದ್ದಾರೆ.

ಇನ್ನು ಏಳೆಂಟು ತಿಂಗಳಲ್ಲಿ ಲೋಕಸಭಾ ಚುನಾವಣೆಗಳು ನಡೆಯಲಿಕ್ಕಿವೆ. ತಮ್ಮ ನಾಲ್ಕೂವರೆ ವರ್ಷಗಳ ಆಳ್ವಿಕೆಯಲ್ಲಿ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರದ ಸಾಧನೆಗಳು ಏನೆಂದು ಜನ ಪ್ರಶ್ನಿಸುತ್ತಿದ್ದಾರೆ. ಬಿಜೆಪಿ ಸಾಧನೆ, ಆಶ್ವಾಸನೆಕೊಟ್ಟ ಅಭಿವೃದ್ಧಿ, ಅಚ್ಚೇ ದಿನಗಳ ಬಗ್ಗೆ ಹೇಳಲಿಕ್ಕೆ ಸಂಘಪರಿವಾರಕ್ಕೆ ಏನೂ ಸರಕು ಇಲ್ಲ. ಈ ಹಿನ್ನೆಲೆಯಲ್ಲಿ ಪ್ರತೀ ಮುಖ್ಯ ಚುನಾವಣೆಯ ಸಂದರ್ಭ ಮಾಡುವಂತೆ ಹಿಂದೂ–ಮುಸ್ಲಿಂ ಧ್ರುವೀಕರಣ ತೀವ್ರ ಗತಿಯಿಂದ ನಡೆಸಲು ಸಂಘಪರಿವಾರ ಮುಂದಾಗಿದೆ. ಇದರ ಭಾಗವಾಗಿ ಕುದ್ರೋಳಿ ವಧಾಗೃಹವನ್ನು ಮುಚ್ಚಿಸುವ ಬಗ್ಗೆ ಅಭಿಯಾನ ಶುರುಮಾಡಿದ್ದಾರೆ.

ಈ ಅಭಿಯಾನದಲ್ಲೂ ಅವರೇ ಎಡವಟ್ಟಿಗೆ ಸಿಲುಕಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯ ಕಮೀಷನರ್ ಪಾಲಿಕೆಯ ಅಕ್ಟೋಬರ್ ಕೊನೆಯ ಮಾಸಿಕ ಸಭೆಯಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. ಮಂಗಳೂರು ಪಾಲಿಕೆಯ 'ಸ್ಮಾರ್ಟ್ ಸಿಟಿ ಯೋಜನಾ ಪ್ರಸ್ತಾವ'ದ ಮೊದಲ ಸಭೆಯಲ್ಲಿ ಕುದ್ರೋಳಿ ವಧಾಗೃಹವನ್ನು ರೂ.15 ಕೋಟಿ ವೆಚ್ಚದಲ್ಲಿ ಆಧುನೀಕರಿಸುವ ಪ್ರಸ್ತಾವಕ್ಕೆ ಯಾವೊಬ್ಬ ಬಿಜೆಪಿ ಸದಸ್ಯನೂ ಆಕ್ಷೇಪವನ್ನಾಗಲೀ ಭಿನ್ನಮತವನ್ನಾಗಲೀ ಸೂಚಿಸಿಲ್ಲವೆಂದು ಅವರು ಹೇಳಿದರು. ಕೆಲ ದಿನಗಳಿಂದ ಕೇಸರಿ ಸಂಘಟನೆಗಳು ವಧಾಗೃಹವನ್ನು ಮುಚ್ಚಲು ಆಗ್ರಹಿಸುವ ಪ್ರಚಾರಗಳನ್ನು ಆರಂಭಿಸಿದ ಮೇಲೆ, ತೀರಾ ಇತ್ತೀಚೆಗಿನ ಸಭೆಯಲ್ಲಿ ಕೆಲವು ಬಿಜೆಪಿ ಸದಸ್ಯರು, ಭಿನ್ನಮತ ಆಕ್ಷೇಪ ಹೇಳುತ್ತಿದ್ದಾರೆ ಎಂದು ಕಮಿಷನರ್ ಅವರೇ ದಾಖಲೆ ಮುಂದಿಟ್ಟು, ಬಿಜೆಪಿ ಸದಸ್ಯರ ದ್ವಿಮುಖ ನೀತಿಯನ್ನು ವಿವರಿಸಿದರು. ಇದರಿಂದ ಸಂಘಪರಿವಾರಕ್ಕೆ ಬೇಕಾಗಿರುವುದು ವಧಾಗೃಹ ಹೇಗೆ ಇರಬೇಕು ಎಂಬುದಕ್ಕಿಂತಲೂ, ಅದನ್ನು ಹರಾಜಿಗೆ ನಿರ್ವಹಿಸುತ್ತಿರುವ ಮುಸ್ಲಿಮ್ ಉದ್ಯಮಿಗಳಿಗೆ ಮತ್ತು ಮಾಂಸ ವ್ಯಾಪಾರಿಗಳಿಗೆ ಉದ್ಯೋಗ ಇಲ್ಲದಂತಾಗಬೇಕು ಎಂಬುದೊಂದೇ ಆಗಿದೆ. ಅಲ್ಲದೆ ಕುದ್ರೋಳಿಯ ವಧಾಗೃಹ ಆಧುನೀಕರಣ ಆಗಬೇಕು ಎಂಬ ಪ್ರಸ್ತಾವ ಬರುವಾಗ, ಬಿಜೆಪಿ ಪಾಲಿಕೆ ಸದಸ್ಯರು ಕುದ್ರೋಳಿಯ ವಧಾಗೃಹ ಕೇವಲ 40 ಸೆಂಟ್ಸ್ ಮಾತ್ರವಿದ್ದು ನಗರದ ಒಳಗಡೇ ಇದೆ, ನಗರದ ಹೊರವಲಯದಲ್ಲಿ ಹತ್ತಾರು ಎಕ್ರೆ ಭೂಮಿ ಲಭ್ಯವಿದ್ದು, ಅಲ್ಲಿಯೇ ಆಧುನಿಕ ವಧಾಗೃಹ ಮಾಡಬೇಕು ಎಂದು ಆಗ್ರಹಿಸಿರುತ್ತಾರೆ. ಇರುವ ವಧಾಗೃಹ ಮುಚ್ಚಿ, ಬೇರೊಂದು ನಿರ್ಮಾಣವಾಗುವ ವರೆಗೆ ವಧಾಗೃಹವೇ ಬೇಡ ಎಂಬ ಬೇಜವಾಬ್ದಾರಿ ಈ ಬಿಜೆಪಿ ಪಾಲಿಕೆ ಸದಸ್ಯರದು ಹಾಗೂ ಕೇಸರಿ ಪಡೆಗಳದು.

ಆಹಾರದ ಹಕ್ಕು ಪ್ರತಿಯೊಬ್ಬ ನಾಗರಿಕರ ಹಕ್ಕು. ಅವರಿಗೆ ಬೇಕಾದ ಆಹಾರ–ಮಾಂಸಾಹಾರವೇ ಇರಲಿ ಸಸ್ಯಾಹಾರವೇ ಇರಲಿ– ಅದನ್ನು ಅವರು ಪಡೆಯಲು, ಯಾವ ಅಡೆತಡೆಗಳೂ ಇಲ್ಲದ ವ್ಯವಸ್ಥೆ ಹಾಗೂ ಸೌಕರ್ಯಗಳನ್ನು ಒದಗಿಸಿಕೊಡಬೇಕಾದುದು ಸ್ಥಳೀಯ ಸಂಸ್ಥೆಯ ಕರ್ತವ್ಯ. ಮಾಂಸಾಪೇಕ್ಷಿ ನಾಗರಿಕರಿಗೆ ಒಳ್ಳೆಯ ಹಾಗೂ ಸ್ವಚ್ಛ ಮಾಂಸ ಒದಗಿಸುವ ಜವಾಬ್ದಾರಿಯುಳ್ಳ ವಧಾಗೃಹ ಇರುವಂತೆ ಮಹಾನಗರಪಾಲಿಕೆ ಪ್ರಯತ್ನಿಸಬೇಕು. ಅದಕ್ಕಾಗಿ ಒಂದೇ ಹೊಸ ಆಧುನೀಕೃತ ವಧಾಗೃಹ ನಿರ್ಮಾಣವಾಗಬೇಕು. ಅಲ್ಲಿಯವರೆಗೆ ಕುದ್ರೋಳಿಯಲ್ಲಿರುವ ವಧಾಗೃಹವನ್ನು ಬಳಕೆಗೆ ಯೋಗ್ಯವಾಗುವಂತೆ ಆಧುನೀಕರಣಗೊಳಿಸಬೇಕು. ಸ್ಮಾರ್ಟ್‌ಸಿಟಿ ಯೋಜನೆಯ ರೂ.15 ಕೋಟಿ ಕಾದಿರಿಸಿದ ಮೊಬಲಗು ಇದಕ್ಕಾಗಿ ಬಳಕೆಯಾಗಲಿ.

ಮಂಗಳೂರು ನಗರದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಧಾಗೃಹವನ್ನು ಮುಚ್ಚಬಾರದು; ಅದನ್ನು ಆಧುನೀಕರಿಸಬೇಕು. ನಗರದ ಜನತೆಗೆ ಆಡು, ಕುರಿ ಇತ್ಯಾದಿ ಮಾಂಸವನ್ನು ಅಡೆತಡೆಯಿಲ್ಲದೆ ಪೂರೈಸುವ ವ್ಯವಸ್ಥೆಯನ್ನು ಮಂಗಳೂರು ಮಹಾನಗರಪಾಲಿಕೆ ಮಾಡಬೇಕು. ಜಿಲ್ಲಾಡಳಿತ ಮತ್ತು ನಗರಪಾಲಿಕೆಗಳು ಕೋಮುವಾದಿಗಳ ಪ್ರಚೋದನೆಗೆ ಈಡಾಗಬಾರದೆಂಬ ಬೇಡಿಕೆಗಳೊಂದಿಗೆ ದ.ಕ.ಜಿಲ್ಲೆಯ ಸಮಾನಮನಸ್ಕ ಮತಾತೀತ ಪಕ್ಷಗಳು ಹಾಗೂ ಸಂಘಟನೆಗಳು, "ಆಹಾರದ ಹಕ್ಕು ಸಂರಕ್ಷಣಾ ಹೋರಾಟ ಸಮಿತಿ"ಯನ್ನು ರಚಿಸಿಕೊಂಡಿವೆ. ಈ ಸಮಿತಿಯಲ್ಲಿ ಕಾಂಗ್ರೆಸ್, ಜೆಡಿ(ಎಸ್) ಸಿಪಿಐ(ಎಂ), ಸಿಪಿಐ ಪಕ್ಷಗಳಲ್ಲದೆ ಮಂಗಳೂರಿನ ಮಾಂಸ ವ್ಯಾಪಾರಿಗಳ ಸಂಘ ಹಾಗೂ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಜೊತೆಗೂಡಿವೆ.

ಜನತೆಯ ಆಹಾರದ ಹಕ್ಕನ್ನು ಸಂರಕ್ಷಿಸಲು, ಸ್ವಚ್ಛ ಆಹಾರಕ್ಕಾಗಿ ಮತ್ತು ಸುಸಜ್ಜಿತವಾದ ಕುರಿ, ಆಡು ಹಾಗೂ ಜಾನುವಾರು ವಧಾಗೃಹದ ನಿರ್ಮಾಣಕ್ಕಾಗಿ ಆಗ್ರಹಿಸಿ "ಆಹಾರದ ಹಕ್ಕು ಸಂರಕ್ಷಣಾ ಹೋರಾಟ ಸಮಿತಿ"ಯು ಕಾರ್ಯಕ್ರಮ ಹಮ್ಮಿಕೊಳ್ಳಲಿದೆ. 2018 ನವಂಬರ್ 5 ರಂದು ಸಮಿತಿಯ ನೇತೃತ್ವದಲ್ಲಿ ಮಂಗಳೂರಿನ ಅಂಬೇಡ್ಕರ್ ಜ್ಯೋತಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಬೃಹತ್ ಮೆರವಣಿಗೆ ನಡೆದು ಬಳಿಕ ಸಾರ್ವಜನಿಕ ಸಭೆ ಏರ್ಪಡಿಸಲಿದೆ.



#ಮೀಟೂ ಪ್ರಕರಣಗಳು: ಸೂಕ್ತ ಬೆಂಬಲ ಕ್ರಮಕ್ಕೆ ಮಹಿಳಾ ಆಯೋಗಕ್ಕೆ ಮನವಿ

ರಾಜ್ಯದಲ್ಲಿ ಎದ್ದಿರುವ #ಮೀಟೂ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಧ್ವನಿ ಅಡಗಿಸಿಕೊಂಡು ಕುಳಿತುಕೊಳ್ಳುವ ಅನಿವಾರ್ಯತೆಗೆ ಒಳಗಾದ ಮಹಿಳೆಯರಿಗೆ ಧ್ವನಿ ಎತ್ತಲು ಧೈರ್ಯ ನೀಡುವಂತೆ ರಾಜ್ಯ ಮಹಿಳಾ ಆಯೋಗ ಮಧ್ಯಪ್ರವೇಶ ಮಾಡಬೇಕೆಂದು ಒತ್ತಾಯಿಸಿ, ಗೌರಮ್ಮ. ವಿಮಲಾ. ಕೆ.ಎಸ್., ದಿನೇಶ್ ಅಮಿನಮಟ್ಟು ಮುಂತಾದ ಸಮಾನ ಮನಸ್ಕರ ನಿಯೋಗವೊಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ನಿಯೋಗದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಮನವಿಯ ಪೂರ್ಣಪಾಠ ಇಲ್ಲಿದೆ.

ವಿಷಯ: ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ ಕುರಿತು ಆರಂಭವಾಗಿರುವ #ಮಿಟೂ ಆಂದೋಲನಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು

ಎರಡು ವರ್ಷಗಳ ಹಿಂದೆ ಅಮೇರಿಕದಲ್ಲಿ ಆರಂಭವಾದ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಕುರಿತ #ಮಿಟೂ ಚಳವಳಿಯು ಭಾರತದಲ್ಲೂ ಗಟ್ಟಿಯಾದ ಧ್ವನಿಯನ್ನು ಪಡೆಯುತ್ತಿರುವುದು ನಿಮಗೆ ಈಗಾಗಲೇ ತಿಳಿದಿದೆ. ಕರ್ನಾಟಕದಲ್ಲಿಯೂ ಸಮೂಹ ಮಾಧ್ಯಮ ಹಾಗೂ ಮನರಂಜನಾ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ತಮ್ಮ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಪ್ರಕರಣಗಳನ್ನು ಬಹಿರಂಗಪಡಿಸಿದ್ದಾರೆ. ಚಿತ್ರ ನಟಿ ಶ್ರುತಿ ಹರಿಹರನ್ ಅವರು ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ದೂರನ್ನೂ ದಾಖಲಿಸಿದ್ದಾರೆ.

ಆದರೂ, ಅಗಾಧವಾದ ಸಮಸ್ಯೆಯ ಒಂದು ಅಣುವಿನಷ್ಟು ಮಾತ್ರದ ಪ್ರಕರಣಗಳು ಬಹಿರಂಗಗೊಂಡಿವೆ. ಲಕ್ಷಾಂತರ ಮಹಿಳೆಯರು ದಿನನಿತ್ಯ ಇಂತಹ ಕಿರುಕುಳಗಳನ್ನು ಎದುರಿಸುತ್ತಿದ್ದು, ತಮ್ಮ ನೋವನ್ನು ಬಹಿರಂಗಪಡಿಸಲಾಗದೆ ನುಂಗಿಕೊಂಡು ಬದುಕುತ್ತಿದ್ದಾರೆ.

ದುರಂತವೆಂದರೆ, ದೌರ್ಜನ್ಯದ ಬಗ್ಗೆ ಮಾತನಾಡುತ್ತಿರುವ ಮಹಿಳೆಯರ ವಿರುದ್ಧ ಆಕ್ರಮಣಕಾರಿ ಹೇಳಿಕೆ, ಪ್ರತ್ಯಾರೋಪ, ವ್ಯಂಗ್ಯ, ಕುಹಕ, ಚಾರಿತ್ರ್ಯ ಹನನ ಇತ್ಯಾದಿಗಳನ್ನು ವ್ಯಾಪಕವಾಗಿ ಮಾಡಲಾಗುತ್ತಿದೆ. ಈ ಮಹಿಳೆಯರಿಗೆ ಬೆಂಬಲ ನೀಡುವವರ ಮೇಲೆಯೂ ಮಾತಿನ ದಾಳಿ ಅವ್ಯಾಹತವಾಗಿ ಸಾಗಿದೆ. ಇದು ದಮನಕಾರಿ ಸಮಾಜವು ಯಥಾಸ್ಥಿತಿ ಕಾಪಾಡಿಕೊಳ್ಳುವ ಪಾಳೆಗಾರಿ ಮನಸ್ಥಿತಿಯ ದ್ಯೋತಕವಾಗಿದೆ.

ಇಂತಹ ಸಂದರ್ಭದಲ್ಲಿ ದೌರ್ಜನ್ಯದ ಕುರಿತು ಮಾತನಾಡುತ್ತಿರುವ ಮಹಿಳೆಯರ ಪರವಾಗಿ ನಿಲ್ಲುವುದು ನಾಗರಿಕ ಸಮಾಜದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಮಹಿಳೆಯರ ರಕ್ಷಣೆಯ ಜವಾಬ್ದಾರಿ ಹೊತ್ತಿರುವ ಮಹಿಳಾ ಆಯೋಗವು ಕ್ರಿಯಾತ್ಮಕ ಪಾತ್ರ ವಹಿಸಿ, ಶೋಷಿತರ ಪರವಾಗಿ ನಿಲ್ಲಬೇಕೆಂದು ಆಗ್ರಹಿಸುತ್ತೇವೆ.

1) ಕೆಲಸದ ಸ್ಥಳದಲ್ಲಿ ನಡೆದಿರುವ ಲೈಂಗಿಕ ದೌರ್ಜನ್ಯದ ಪ್ರಕರಣಗಳನ್ನು ಬೆಳಕಿಗೆ ತರುತ್ತಿರುವ ಮಹಿಳೆಯರಿಗೆ ಬಹಿರಂಗವಾಗಿ ನೈತಿಕ ಬೆಂಬಲ ಸೂಚಿಸಬೇಕು.
2) ತಮ್ಮ ಮೇಲಿನ ದೌರ್ಜನ್ಯದ ಕುರಿತು ಮಾತನಾಡುವ ಮಹಿಳೆಯರಿಗೆ ಅಗತ್ಯವಾದ ಕಾನೂನಿನ ನೆರವನ್ನು ಉಚಿತವಾಗಿ ಒದಗಿಸಬೇಕು.
3) ದೌರ್ಜನ್ಯದ ವಿರುದ್ಧ ದನಿ ಎತ್ತಿರುವ ಮಹಿಳೆಯರ ಕುರಿತು ವ್ಯಕ್ತವಾಗುತ್ತಿರುವ ಟೀಕೆ, ಅವಹೇಳನ, ವ್ಯಂಗ್ಯ, ಸುಳ್ಳು ಆಪಾದನೆಗಳನ್ನು ಬಲವಾಗಿ ಖಂಡಿಸಬೇಕು. #ಮಿಟೂನ ನೆಪದಲ್ಲಿ ಮಹಿಳೆಯರನ್ನು ಅವಹೇಳನಕಾರಿಯಾಗಿ ನಿಂದಿಸುವವರ ನಡೆಯನ್ನು ಖಂಡಿಸಬೇಕು.
4) ಸಾಮಾಜಿಕ ಮಾಧ್ಯಮಗಳಲ್ಲಿ ಮಹಿಳೆಯರ ಕುರಿತು ಅವಹೇಳನಕಾರಿ ಪೋಸ್ಟ್‌ಗಳನ್ನು ಹಾಕುವವರ ಮೇಲೆ ದೂರು ದಾಖಲಿಸಿ ಕ್ರಮ ಕೈಗೊಳ್ಳುವಂತೆ ಸೈಬರ್ ಪೊಲೀಸರಿಗೆ ತಾಕೀತು ಮಾಡಬೇಕು.
5) ಮಹಿಳೆಯರ ಮೇಲೆ ದೌರ್ಜನ್ಯ ಎಸಗುವ, ಮಹಿಳೆಯರ ಕುರಿತು ಅವಹೇಳನಕಾರಿ ಹೇಳಿಕೆಗಳನ್ನು ನೀಡುವ, ಅಂತಹ ವರ್ತನೆಗಳನ್ನು ಪ್ರೋತ್ಸಾಹಿಸುವ ಚುನಾಯಿತ ಜನಪ್ರತಿನಿಧಿಗಳನ್ನು ಅನರ್ಹಗೊಳಿಸುವಂತೆ ಚುನಾವಣಾ ಆಯೋಗದ ಮೇಲೆ ಒತ್ತಡ ತರಬೇಕು. ನ್ಯಾಯಮೂರ್ತಿ ವರ್ಮಾ ಆಯೋಗದ ಶಿಫಾರಸ್ಸಿನಂತೆ ಈ ಸಂಬಂಧ ಕಾನೂನು ರಚಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು.
6) ಕೆಲಸದ ಸ್ಥಳದಲ್ಲಿ ಕಡ್ಡಾಯವಾಗಿ ರಚಿಸಬೇಕಾಗಿರುವ *ಆಂತರಿಕ ದೂರು ಸಮಿತಿ* ಗಳು ರಾಜ್ಯದ ಎಲ್ಲ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ (ಸಮೂಹ ಮಾಧ್ಯಮ ಮತ್ತು ಮನರಂಜನೆ ಮಾಧ್ಯವೂ ಸೇರಿದಂತೆ) ಸಂಸ್ಥೆಗಳಲ್ಲಿ ರಚನೆಯಾಗಿರುವುದಿಲ್ಲ. ಈ ಬಗ್ಗೆ ಕಾನೂನು ಇದ್ದರೂ ಅದನ್ನು ಪಾಲನೆ ಮಾಡದೆ ಇರುವುದು ಗಂಭೀರವಾದ ದೋಷವಾಗಿದೆ. ಈ ಕುರಿತು ಆಯೋಗವು ನಿರ್ದಿಷ್ಟ ಕಾಲಮಿತಿಯೊಳಗೆ ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕು.

I. ರಾಜ್ಯದ ಎಲ್ಲ ಕೆಲಸದ ಸ್ಥಳಗಳಲ್ಲಿ ಆಂತರಿಕ ದೂರು ಮತ್ತು ಜಿಲ್ಲಾಧಿಕಾರಿ ಗಳ ಅಡಿಯಲ್ಲಿ ಸ್ಥಳೀಯ ದೂರು ಸಮಿತಿಗಳು ರಚನೆಯಾಗಿವೆಯಾ ಎಂಬುದರ ಕುರಿತು ಸಂಬಂಧಿಸಿದ ಇಲಾಖೆಯಿಂದ ಮತ್ತು ಜಿಲ್ಲಾಧಿಕಾರಿ ಗಳಿಂದ ಮಾಹಿತಿ ಪಡೆಯಬೇಕು.
II. ಆಂತರಿಕ ದೂರು ಸಮಿತಿಗಳ ರಚನೆಗೆ ಸಂಬಂಧಿಸಿದಂತೆ ವ್ಯಾಪಕವಾಗಿ ಅರಿವು ಮೂಡಿಸಬೇಕು. ಪಲ್ಸ್ ಪೋಲಿಯೋ ಮಾದರಿಯಲ್ಲಿ ಮಾಹಿತಿ ಆಂದೋಲನ ನಡೆಸಬೇಕು.
III. ಈಗಾಗಲೇ ಲೈಂಗಿಕ ದೌರ್ಜನ್ಯ ಕುರಿತು ದೂರು ದಾಖಲಿಸಿರುವ ಶೃತಿ ಹರಿಹರನ್‌ರವರ ಪ್ರಕರಣ ದಲ್ಲಿ ಈ ಕೂಡಲೇ ಆರೋಪಿ ಅರ್ಜುನ್ ಸರ್ಜಾ ರವರನ್ನು ಬಂಧಿಸಿ ತನಿಖೆಯನ್ನು ತೀವ್ರ ಗೊಳಿಸುವಂತೆ ಅಗತ್ಯ ಕ್ರಮ ಕೈಗೊಳಬೇಕು.
IV. ಸಮಿತಿಗಳು ನಿಯಮಾನುಸಾರ ಕೆಲಸ ನಿರ್ವಹಿಸುತ್ತಿವೆಯಾ ಎನ್ನುವುದರ ಬಗ್ಗೆಯೂ ಮಾಹಿತಿ ಸಂಗ್ರಹಿಸಬೇಕು.
V. ಸಮಿತಿಗಳನ್ನು ರಚನೆ ಮಾಡಿಲ್ಲದ ಸಂಸ್ಥೆಗಳ ವಿರುದ್ಧ ಕಾನೂನಿನ ಅನುಸಾರ ಕ್ರಮ ಕೈಗೊಳ್ಳಬೇಕು. ಸಮಿತಿ ರಚನೆ ಮಾಡಿಲ್ಲದಿದ್ದರೆ ಸಂಸ್ಥೆಯ ಮುಖ್ಯಸ್ಥರಿಗೆ ರೂ.50,000/- ದಂಡ ವಿಧಿಸುವ ಅವಕಾಶ ಇರುತ್ತದೆ.
VI. ಆಂತರಿಕ ದೂರು ಸಮಿತಿ ರಚನೆಗೆ ಸಂಬಂಧಿಸಿದ ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಕಾರ್ಮಿಕ ಇಲಾಖೆಯೂ ಸೇರಿದಂತೆ ಸಂಬಂಧಪಟ್ಟ ಎಲ್ಲ ಇಲಾಖೆಗಳ ಜಂಟಿ ಪರಿಶೀಲನಾ, ಅನುಪಾಲನಾ ಸಮಿತಿ ಇರುವುದಿಲ್ಲ. ಆದ್ದರಿಂದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಿಳಾ ಆಯೋಗ, ಮಾನವ ಹಕ್ಕು ಆಯೋಗ ಮತ್ತು ಕಾರ್ಮಿಕ ಇಲಾಖೆಗಳ ಜಂಟಿ ನೇತೃತ್ವದಲ್ಲಿ ರಾಜ್ಯ ಮಟ್ಟದ ಪರಿಶೀಲನೆ ಸಮಿತಿ ರಚನೆಗೆ ಶೀಘ್ರ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕು. ●

ಋಣಮುಕ್ತ ಕಾಯ್ದೆ ಜಾರಿಗೆ ಲೋಕಸಭೆಯ ವಿಶೇಷ ಅಧಿವೇಶನಕ್ಕೆ ಆಗ್ರಹ



ಎಂ.ಎಸ್ ಸ್ವಾಮಿನಾಥನ್ ವರದಿಯನ್ವಯ ಬೆಂಬಲ ಬೆಲೆ ಖಾತರಿ ಕಾನೂನಿಗಾಗಿ, ಎಲ್ಲಾ ರೈತರು ಮತ್ತು ಕೃಷಿ ಕೂಲಿಕಾರರಿಗೆ ಬ್ಯಾಂಕ್ ಸಾಲ ಹಾಗೂ ಸಾಲ ಮನ್ನಾ ಖಾತರಿಗೊಳಿಸುವ ಋಣಮುಕ್ತ ಕಾಯ್ದೆ ಜಾರಿಗೆ ಲೋಕಸಭೆಯ ವಿಶೇಷ ಅಧಿವೇಶನಕ್ಕಾಗಿ ಆಗ್ರಹಿಸಿ ಬೆಂಗಳೂರಿನಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶ ನಡೆಯಿತು. ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಉದ್ಘಾಟಿಸಿದರು. ಇದನ್ನು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ರಾಜ್ಯ ಘಟಕ ಇದನ್ನು ಸಂಘಟಿಸಿತ್ತು.

ಕೇಳಿಸಿದ್ದು

ಬಡವರ ನಿವಾರಣೆಯ ಸಂಚು

ಸುಪ್ರೀಂ ಕೋರ್ಟಿನ ಇತ್ತೀಚಿನ ಮೂರು ತೀರ್ಪುಗಳು ಇಡೀ ದೇಶದ ಗಮನ ಸೆಳೆದವು. ಅತ್ಯಂತ ಕುತೂಹಲದಿಂದ ಕಾದು ನೋಡುತ್ತಿದ್ದ ಮಹತ್ವದ ತೀರ್ಪೊಂದು ಮೊದಲ ದಿನ ಹೊರಬಿತ್ತು. ಅದೇ ಆಧಾರ್ ಕಾರ್ಡಿಗೆ ಸಂಬಂಧಪಟ್ಟ ತೀರ್ಪು. ಮರುದಿನ ಬಂದಿದ್ದು ಶಬರಿಮಲೆ ಮತ್ತು ಅನೈತಿಕ ಸಂಬಂಧಗಳ ಬಗೆಗಿನ ತೀರ್ಪುಗಳು.

ಬಹುಸಂಖ್ಯಾತ ಜನರು ಹಸಿವಿನಿಂದ ಕೂಡಿದ್ದವರೇ ಆದರೂ, ಮಾತನಾಡುವವರು, ಬರೆಯುವವರು, ಓದುವವರು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವವರು ಎರಡನೆಯ, ಮೂರನೆಯ ತೀರ್ಪನ್ನು ಮುಖ್ಯ ಎಂದುಕೊಂಡಿರುವ ಅಲ್ಪಸಂಖ್ಯಾತರೇ ಆಗಿದ್ದಾರೆ. ಅಲ್ಪಸಂಖ್ಯಾತರಾಗಿದ್ದರೂ ಅವರ ದನಿ ದೊಡ್ಡದು, ಎಲ್ಲರಿಗೂ ಕೇಳಿಸುವಂಥದ್ದು. ಹಾಗಾಗಿ ಈ ತೀರ್ಪುಗಳ ಬಗ್ಗೆ ಅದೆಷ್ಟು ಚರ್ಚೆ ನಡೆದಿದೆ ಎಂದರೆ ಮೊದಲನೆಯದನ್ನು, ಅದು ಮಾಡಿರುವ ಹಾನಿಯನ್ನು ಎಲ್ಲರೂ ಮರೆತೇಬಿಟ್ಟಿದ್ದಾರೆ.

2015ರಿಂದ 2018ರವರೆಗೆ ದೇಶದಲ್ಲಿ ದಾಖಲಿಸಲಾದ ಹಸಿವಿನ ಸಾವುಗಳನ್ನು ಅಧ್ಯಯನ ಮಾಡಿದಾಗ, ಕಳೆದ 4 ವರ್ಷಗಳಲ್ಲಿ 11 ರಾಜ್ಯಗಳಲ್ಲಿ 61 ಜನ ಹಸಿವಿಗೆ ಬಲಿಯಾದದ್ದು ಬೆಳಕಿಗೆ ಬಂದಿದೆ. ಉತ್ತರದ ಜಾರ್ಖಂಡ್, ಮಧ್ಯಪ್ರದೇಶ, ಉತ್ತರಪ್ರದೇಶ, ರಾಜಸ್ಥಾನಗಳಂತೂ 'ಬೀಮಾರು' ರಾಜ್ಯಗಳೆಂದೇ ಹೆಸರಾಗಿದ್ದು ಅಲ್ಲಿ ರೋಗ, ಹಸಿವಿನ ವಿರುದ್ಧ ಹೋರಾಟ ನಿತ್ಯ. ಆದರೆ ಕರ್ನಾಟಕ, ಮಹಾರಾಷ್ಟ್ರಗಳಂಥ ದಕ್ಷಿಣದ ರಾಜ್ಯಗಳಲ್ಲಿಯೂ ಹಸಿವಿನ ಸಾವು ಹೆಡೆಯೆತ್ತಿದೆ. ಹಸಿದ 119 ದೇಶಗಳಲ್ಲಿ 103ನೇ ಸ್ಥಾನಕ್ಕೇರಿದೆ ಭಾರತ.

ಹಸಿವಿನಿಂದ ಜನ ಹೇಗೆ ಸತ್ತರು? ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾನೂನನ್ನು ಜಾರಿಗೊಳಿಸುವ ಮೊದಲು ಹೊಸ ರೇಷನ್ ಕಾರ್ಡುಗಳನ್ನು ನೀಡುವಾಗ ಒಂದಷ್ಟು ಜನರ ಕಾರ್ಡುಗಳು ಕಾಣೆಯಾದವು. ತಾಲ್ಲೂಕು ಕೇಂದ್ರಕ್ಕೆ ಅಲೆದಾಡಿ ತಮ್ಮ ಅಸ್ತಿತ್ವವನ್ನು, ಬಡತನವನ್ನು ಸಾಬೀತು ಮಾಡಿದರೂ ಆ ಕುಟುಂಬಗಳಿಗೆ ಕಾರ್ಡುಗಳು ದೊರೆಯದಿದ್ದುದು ಒಂದು ಕಾರಣ.

ಕಾರ್ಡುಗಳಿಗೆ ಆಧಾರ್ ಜೋಡಣೆಯಾಗಿಲ್ಲದೆ ಕುಟುಂಬಗಳು ಬಿಟ್ಟು ಹೋಗಿದ್ದು ಇನ್ನೊಂದು ಕಾರಣ. ಸರ್ಕಾರದ ಆಹಾರ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗಳ ಸೌಲಭ್ಯಗಳನ್ನವಲಂಬಿಸಿರುವವರ ಜೀವನದಲ್ಲಿ ಆಧಾರ್ ಮತ್ತು ಬಯೊಮೆಟ್ರಿಕ್ ಅಲ್ಲೋಲಕಲ್ಲೋಲವನ್ನೇ ಉಂಟುಮಾಡಿದ್ದು, ಅನೇಕರ ಸಾವಿಗೆ ಕಾರಣವಾಗಿರುವುದು ನಮ್ಮ ಮಾಧ್ಯಮಗಳಿಗೆ ದೊಡ್ಡ ವಿಷಯವಾಗಿಲ್ಲದಿರುವುದರಿಂದ ಬಹುತೇಕ ಜನರಿಗದು ತಿಳಿದಿಲ್ಲ.

–ಶಾರದಾ ಗೋಪಾಲ್, ಪ್ರಜಾವಾಣಿ ನವೆಂಬರ್ 2, 2018

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ

'ದಾರಿನೆಂಟ' ಎಂಬ ಕವನ ಸಂಕಲನದಲ್ಲಿ 'ಇರುಮುಡಿ' ಎಂಬ ಪದ್ಯವಿದೆ. ಈ ಸಂದರ್ಭದಲ್ಲಿ ಓದಿಕೊಳ್ಳಬೇಕಾದ ಪದ್ಯವಿದು. 'ಆ ಹೆಂಗಸಿಗೆ' ಡಾಕ್ಟ್ರಮ್ಮ 'ಇದೆಲ್ಲ ಮುಟ್ಟು ನಿಲ್ಲೋ ಲಕ್ಷಣ' ಎಂದಿದ್ದೇ ತಡ ಮನಸ್ಸು ಶಬರಿಮಲೆ ಹುಡುಗದೇವರಿಗೆ 'ದರ್ಶನ' ಕೊಡಬಹುದು ಎಂದು ಸಂಭ್ರಮಿಸುತ್ತದೆ. 'ಆ ಹುಡುಗದೇವರು ಪಾಪ ಬೆಟ್ಟದ ಮೇಲೂ ಹದಿನೆಂಟು ಮೆಟ್ಟಿಲು ದೂರ ಕೂತಿದೆ' ಎಂಬ ಕಳಕಳಿ ಬೇರೆ. ಇಡೀ ಕವಿತೆ ಹೆಣ್ಣನ್ನು ದೂರವಿಟ್ಟ ಇರುಮುಡಿ ಕಂದನಿಗೆ ವ್ಯಂಗ್ಯದಿಂದ ತಿಳಿಹೇಳುವ ತಾಯ್ತನದ ಭಿತ್ತಿಯಲ್ಲಿ ಅರಳುತ್ತದೆ. ಹಾಗಾಗಿಯೇ ಇದು ದರ್ಶನ ಪಡೆಯುವುದಲ್ಲ, ದರ್ಶನ ಕೊಡುವುದು. ಹೆಣ್ತನದ ದರ್ಶನವನ್ನು ಮೂಡಿಸುವುದು.. ..ಸುಪ್ರೀಂ ಕೋರ್ಟ ತೀರ್ಪು ಏನಾಗುತ್ತದೋ ಗೊತ್ತಿಲ್ಲ. ಮಹಿಳೆಯರು ಮಾಡಬೇಕಿರುವುದೇನು? ಬಹುಶಃ ಇರುಮುಡಿಯ ಕಂದನಿಗೆ ವಿಷಾದದಿಂದ ಬುದ್ಧಿ ಹೇಳುವುದು. ಹೆಣ್ತನದ ಗೌರವ ತಿಳಿದರೆ ಅವನಿಗೆ ತಿಳಿದೀತು. ಈ ಸುತ್ತಲ ಮಧ್ಯವರ್ತಿಗಳಿಗಲ್ಲ ಎಂಬ ನಂಬಿಗೆಯಲ್ಲಿ.

ಇರುಮುಡಿಯ ಕಂದನಿಗೆ



ಲಲಿತಾ ಸಿದ್ಧಬಸವಯ್ಯ ಕನ್ನಡ ಸಂವೇದನೆಗೆ ಹೊಸ ಕಸುವು ಕೊಟ್ಟ ಕವಿ. ಹಿದಕವರೆ ಸಾರಿನ ಗಮಲು ಹರಡಿದವರು ಎಂದು ಮಾತ್ರವಲ್ಲ, ಹೆಣ್ಣಿನ ಬಿಡು ಬೇಸರಿಕೆಗಳನ್ನು ಅನುತನಗಳನ್ನು ಅರಗಿಸಿಕೊಂಡು 'ಮುಂದಿನ ತಲೆಮಾರಿನ ಮೃಣ್ಮಯಿ ಗೆಲ್ಲುತ್ತಾಳೆ' ಎಂದು ಕನಸಿದವರು. ಹೆಣ್ತನದ ದಿಗ್ಬಂಧನಗಳನ್ನು ಅಧ್ಯೆಸುತ್ತ, ಥರ್‍ರ ಥಕುಣ ಥರ್‍ರ ಥಕುಣ ಎಂಬ ಎತ್ತರದ ಎಚ್ಚರದಲ್ಲಿ –

ಎಲ್ಲೆಲ್ಲಿ ಗಂಡು ತಾರಾತಿಗಡಿ
ಅಲ್ಲಲ್ಲಿ ಹೆಣ್ಣು ಊರಮಾರಮ್ಮ

ಎಂದು ಲೌಕಿಕವನ್ನೂ ಅಲೌಕಿಕವನ್ನೂ ಬೆರೆಸಿ ರುಚಿ ಕೆಟ್ಟ ಬಾಯಿಗೆ ಮುಟಿಗೆ ರೊಟ್ಟಿ ಉಳಿಸಿದವರು. ಇವರ 2010 ರಲ್ಲಿ ಪ್ರಕಟವಾದ 'ದಾರಿನೆಂಟ' ಎಂಬ ಕವನ ಸಂಕಲನದಲ್ಲಿ 'ಇರುಮುಡಿ' ಎಂಬ ಪದ್ಯವಿದೆ. ಈ ಸಂದರ್ಭದಲ್ಲಿ ಓದಿಕೊಳ್ಳಬೇಕಾದ ಪದ್ಯವಿದು.

ಈ ಪದ್ಯ ಶುರುವಾಗುವುದು ಲಲಿತಾ ಸಿದ್ಧಬಸವಯ್ಯನವರ ಅದೇ ಮಾತಿನ ಒನಪಿನಲ್ಲಿ. 'ಆ ಹೆಂಗಸಿಗೆ' ಡಾಕ್ಟ್ರಮ್ಮ 'ಇದೆಲ್ಲ ಮುಟ್ಟು ನಿಲ್ಲೋ ಲಕ್ಷಣ' ಎಂದಿದ್ದೇ ತಡ ಮನಸ್ಸು ಶಬರಿಮಲೆ ಹುಡುಗದೇವರಿಗೆ 'ದರ್ಶನ' ಕೊಡಬಹುದು ಎಂದು ಸಂಭ್ರಮಿಸುತ್ತದೆ. 'ಆ ಹುಡುಗದೇವರು ಪಾಪ ಬೆಟ್ಟದ ಮೇಲೂ ಹದಿನೆಂಟು ಮೆಟ್ಟಿಲು ದೂರ ಕೂತಿದೆ' ಎಂಬ ಕಳಕಳಿ ಬೇರೆ. ಇಡೀ ಕವಿತೆ ಹೆಣ್ಣನ್ನು ದೂರವಿಟ್ಟ ಇರುಮುಡಿ ಕಂದನಿಗೆ ವ್ಯಂಗ್ಯದಿಂದ ತಿಳಿಹೇಳುವ ತಾಯ್ತನದ ಭಿತ್ತಿಯಲ್ಲಿ ಅರಳುತ್ತದೆ. ಹಾಗಾಗಿಯೇ ಇದು ದರ್ಶನ ಪಡೆಯುವುದಲ್ಲ, ದರ್ಶನ ಕೊಡುವುದು. ಹೆಣ್ತನದ ದರ್ಶನವನ್ನು ಮೂಡಿಸುವುದು. ಹಾಗಾಗಿಯೇ –

ಹೆಂಗಸರಿಗೆ ಹೆದರಬೇಡವೋ ಮರಿ
ಅಂಡ ಪಿಂಡ ಬ್ರಹ್ಮಾಂಡವೆಂದರೆ ಇಷ್ಟೆ
ಹೆಂಗಸರ ಹೊಟ್ಟೆ

ಅದೇ ಆಗ ಈದ ಹುಲಿತಾಯಿಯ ಹತ್ತಿಕೂತು ವೀರನಾಗಿದ್ದು ಸಾಕು. ಹುಲಿಯನ್ನು ಕಾಡಿಗೆ ಹೊಡಿ. ಪ್ಯಾ ಪ್ಯಾ ಮರಿಗಳಿಗೆ ಮೊಲೆಯೂಡಿ ಬರಲಿ. ಹತ್ತಿಕೂತ ಹುಲಿಗೇ ಹೆದರಿ ಕುಕ್ಕುರುಗಾಲಿನಲ್ಲಿ ಕೂತು ಒದ್ದಾಡುವುದು ಯಾಕೆ? ಎಂದು ಕವಿ ಪ್ರಶ್ನೆ ಮಾಡುತ್ತಾರೆ. ಮದುವೆ, ರಾಜ್ಯ, ಕೋಶ ಬೇಡವಾದರೆ ಬಿಡು. ಕಾಡು–ಹೂವು–ಹಕ್ಕಿ–ನೆಲ–ಹೊಲಗಳೂ ಬೇಡವೇ? ಬದುಕಿನ ಸೊಗಸು ಸಡಗರ, ಚರಾಚರಗಳನ್ನೆಲ್ಲ ಬಿಟ್ಟು ಕತ್ತಲ ಗುಡಿಯೊಳಗೆ ಕೂತು ಹೊಗೆ ಯಾಕೆ ಕುಡಿಯುತ್ತೀ? ಮಲಯಾಳಿ ಉಣ್ಣಿ ನೀನು. ಎಳನೀರ ಬಂಬಲಿನಂಥ ಮೃದು ಮಿನುಗು ತೇಜವಿರಬೇಕಿತ್ತು. ಅದು ಬಿಟ್ಟು ಮಣಗಟ್ಟಲೆ ಕಪ್ಪುರಕ್ಕಿಟ್ಟ ಮಸಿಕುಡಿಕೆಯಾಗಿದ್ದೀ. ಯಾರದೋ ಕೈಗೆ ಸಿಕ್ಕು ಗುಡಿಯೊಳಗೆ ಕಪ್ಪುರದ ಹೊಗೆ ಕುಡಿದು ಕರಿಮಡಿಯಾದ ಕಂದನಿಗೆ ತಾಯಿ ಬದುಕಿನ ರುಚಿ ಕಲಿಸುವ ನಿರೂಪಣೆಯಿದು. ಸ್ವಾತಂತ್ರ್ಯದ ಕಷ್ಟ ಮೊದಲ ಹೆಜ್ಜೆ ಎತ್ತಿಡುವವರೆಗೆ ಮಾತ್ರ.

ಪಕ್ಕದಲ್ಲೆ ಕಡಲಿದೆ ಹಡಗಿದೆ
ಹತ್ತಿ ಹೋಗಿಬಿಡು ನಿಮ್ಮಮ್ಮನ ಬಳಿ,
ಇಲ್ಲ ನೋಡು ಅದೆ ಇರುಮುಡಿ
ಅದೆ ಕರಿಮಡಿ

ಎಂದು ಪದ್ಯ ಮುಗಿಯುತ್ತದೆ. ಹೌದು, ನಿಜಕ್ಕೂ ಸ್ವಾತಂತ್ರ್ಯದ ದರ್ಶನ ಸಿಗಬೇಕಾಗಿರುವುದು ದೇವರಿಗೆ. ತನ್ನನ್ನು ದೇವರು ಮಾಡಿ, ಸಂವೇದನಾರಹಿತವಾಗಿಸಿರುವ ತನ್ನ ಸುತ್ತಲನ್ನು ಬೇಧಿಸಿ ದೇವರು ಹೊರಬರಬೇಕಾಗಿದೆ.

ಲಲಿತಾ ಸಿದ್ಧಬಸವಯ್ಯ ಅವರದು ಅಪ್ಪಟ ಜಾನಪದ ನೋಟಕ್ರಮ. ಬದುಕಿನಲ್ಲಿ ಹದವಾಗಿ ಅರಗಿ, ಆ ಮಣ್ಣ ಮೂಲದಿಂದ ತಾತ್ವಿಕತೆಯನ್ನು ರೂಪಿಸಿಕೊಳ್ಳುವ, ದಕ್ಕಿತ ತಾತ್ವಿಕತೆ ಯಾವ ಪಂಥದ ತಾಬೆ ಸೇರಿತು ಎಂದು ಕಡೆಗಣ್ಣಿನಲ್ಲೂ ನೋಡುವ ಜರೂರು ಇಲ್ಲವೆಂದು ಕೊಂಡ ನಿಸೂರು ನೋಟ. ಹಿದಕವರೆ ಸಾರಿಲ್ಲಿ ಲೋಕದ ಹಕೀಕತ್ತನ್ನು ನಿಭಾಯಿಸುವ ಹೆಣ್ಣಿನ ಉಸಿರನ್ನು ಬೆರೆಸಿ ನೈವೇದ್ಯಕ್ಕಿಡುವ ತಾಕತ್ತು. ತೀರಾ ಬೆಳೆಸಲಾರದೆ ಹೇಳುವುದಾದರೆ, ಬದುಕಿನ ಸಾಂಪ್ರದಾಯಿಕ ಚೌಕಟ್ಟೆಲ್ಲವನ್ನು ಶ್ರದ್ಧೆಯಿಂದ ಮತ್ತು ಗೌರವದಿಂದ ಅನುಸರಿಸಿಕೊಂಡ ತಾಯಪ್ರಜ್ಞೆಯದು. ಶಬರಿಮಲೆಗೆ ಹೆಣ್ಣುಮಕ್ಕಳೂ ಪ್ರವೇಶಿಸಬಹುದೆಂಬ ಸುಪ್ರೀಂ ಕೋರ್ಟಿನ ತೀರ್ಪನ್ನು ವಿರೋಧಿಸಿ, ಹಗಲು–ರಾತ್ರಿಯೆನ್ನದೆ, ಬಿಸಿಲು–ನೆಳಲು ಎನ್ನದೆ ಅಯ್ಯಪ್ಪನ ಮಡಿಯನ್ನೂ ಗುಡಿಯನ್ನೂ ಕಾದರಂತಲ್ಲ – ಆ ನೂರಾರು ಹೆಂಗಸರು ಅವರುಗಳ ಬದುಕಿನ ಹೊರ ವಿನ್ಯಾಸಕ್ಕಿಂತ ತೀರಾ ಬೇರೆಯಾದ ಬದುಕೇನೂ ಲಲಿತಾ ಸಿದ್ಧಬಸವಯ್ಯ ಅವರದಲ್ಲ. ಹಾಗಿದ್ದರೆ, ಜೀವನ ಗ್ರಹಿಕೆಯಲ್ಲಿ ಇಷ್ಟು ದೊಡ್ಡ ವ್ಯತ್ಯಾಸ ಹೇಗೆ ಸಂಭವಿಸುತ್ತದೆ? ಯಾಕೆ ಸಂಭವಿಸುತ್ತದೆ? ಹೆಣ್ಣಿನ ಮುಟ್ಟನ್ನು ಹೊಲೆ ಎಂದು ನಂಬಿಸಿದ್ದು, ಸಂಪ್ರದಾಯದ ಹೆಸರಿನಲ್ಲಿ ಎಲ್ಲವನ್ನೂ ದುಸರಾ ಎನ್ನದೆ ಒಪ್ಪಿಕೊಳ್ಳಬೇಕೆಂಬ ಮತೀಯತೆಯ ಉನ್ಮಾದ ಇಲ್ಲದಿದ್ದರೆ ಆ ಹೆಂಗಸರೂ ಈ ಕವಿತೆಯಂತೆಯೇ ಯೋಚಿಸಬಹುದಿತ್ತೇನೋ.

ಯಾಕೆಂದರೆ, ದೈವವನ್ನು ಹೆತ್ತ ಕೂಸಾಗಿ ಕಾಣುವ ಅದಮ್ಯ ತ್ರಾಣ ಹೆಣ್ಣು ಸಂವೇದನೆಗಿದೆ. ಜನಪದರ ಸಂವೇದನೆಗಳಲ್ಲಿ ಇಂತಹ ಅಗಣಿತ ರೂಹುಗಳಿವೆ. ಕೂಡಲ ಸಂಗಯ್ಯನ ದರ್ಶನಕ್ಕೆ ಬಂದ ತಾಯೊಬ್ಬಳು "ನೀರೊತ್ತಿ ಮಳಲೊತ್ತಿ ನೆತ್ತಿ ನೊಂದಾವ ನನ ಮಗನ" ಎಂದು ನೀರಲ್ಲಿರುವ ಕೂಡಲ ಸಂಗಯ್ಯನಿಗಾಗಿ ಮರುಗುತ್ತಾಳೆ. ಇನ್ನೊಂದು ತ್ರಿಪದಿಯಲ್ಲಿ, ಮನೆಗೆಲಸದ ಧಾವಂತದಲ್ಲಿರುವ ಹೆಣ್ಣು ತನ್ನೂರ ಮಲ್ಲಯ್ಯ ಸ್ವಾಮಿಗೆ "ನಾ ಬರುವವರೆಗೂ ನಿನ ಗುಡಿಯ ಮುತ್ತಿನ ಬಾಗಿಲು ತೆರೆದಿಡು" ಎಂದು ಬೇಡಿಕೊಳ್ಳುತ್ತಾಳೆ. ಹೆಣ್ಣುಗಳು ತಾವು ನಂಬಿದ ದೈವದೊಂದಿಗೆ ನೇರವಾಗಿ ಸಂವಹನಿಸಬಲ್ಲರು. ತನಗೂ ತನ್ನ ದೈವಕ್ಕೂ ಮಧ್ಯೆ ಇರುವ ವ್ಯವಸ್ಥೆಯೊಂದನ್ನು ಅಲಕ್ಷಿಸುತ್ತಲೇ ತಿರಸ್ಕರಿಸುವ ರೀತಿಯಿದು. ಮಧ್ಯವರ್ತಿ ವ್ಯವಸ್ಥೆ ಹೆಣ್ಣನ್ನು ಸದಾ ಅಪಮಾನಿಸುತ್ತ ಬಂದಿದೆ. ಭ್ರಷ್ಟಗ್ರಸ್ಥಳಾಗಿಡಲು ಹವಣಿಸುತ್ತದೆ ಎಂಬ ಎಚ್ಚರವಿದು. ಹೆಣ್ಣನ್ನು ಭಯಭೀತಳಾಗಿ ಇಡುವ ಮೂಲಕ ಮತೀಯ ಶಕ್ತಿಗಳಿಗೆ ಸಮಾಜದಲ್ಲಿ ಭಯೋತ್ಪಾದಕತೆಯನ್ನು ಹರಡುವುದು ಸಾಧ್ಯವಾಗುತ್ತದೆ. ಈ ಮೋಸವನ್ನು ಮನವರಿಕೆ ಮಾಡಿಕೊಂಡಾಗ, ದೇವರನ್ನು ಕೂಸಾಗಿಸಿಕೊಂಡು ವ್ಯವಸ್ಥೆಯನ್ನು ಮೀರುವ ಜರೂರತ್ತಿನ ಕಡೆ ತುಡಿಯಬೇಕಾಗುತ್ತದೆ. 'ನನಗೆ ಇಬ್ಬರು ಮಕ್ಕಳು ಒಬ್ಬ ಶಿವ, ಒಬ್ಬ ಅಲ್ಲಾ' – ಎಂಬ ಸವಿತಾ ನಾಗಭೂಷಣರ ಕವಿತೆಯೂ ಎದಿರಿರುವ ತೊಡಕನ್ನು ಒಡೆಯುವ ಕ್ರಮವೇ ಆಗಿದೆ.

ಹೆಣ್ಣು ದೇಹದ ಜೈವಿಕ ಸಹಜತೆಯಾದ ಮುಟ್ಟನ್ನು ಹೊಲೆ ಎಂದು ದೂರೀಕರಿಸುವುದು ಅವೈಜ್ಞಾನಿಕ. 'ಮುಟ್ಟಿನಲ್ಲಿ ಹುಟ್ಟಿ ಬಂದು ಮುಟಚಟ್ಟು ಅಂತೀದಿ' ಎಂಬ ತತ್ವಪದಕಾರರ ಮಾತಿನ ಮರ್ಮವನ್ನರಿಯಬೇಕು. ಮುಟ್ಟಿನ ನೆತ್ತರವೇ ಪಿಂಡಾಂಡವಾಗಿ ಬೆಳೆಯುವುದು. ತಾಯ್ತನದ ವಿಜ್ರಂಭಣೆ ಮತ್ತು ಹೆಣ್ತನದ ನಿರಾಕರಣೆಗಳು ಪಿತೃತ್ವ ರಾಜಕಾರಣದಂತೆ ಇನ್ನೇನೂ ಅಲ್ಲ. ಹೆಣ್ಣಿನ ಸೃಜನ ಸಾಮರ್ಥ್ಯದ ಬಗ್ಗೆ ಗಂಡಿಗಿರುವ ವಿಸ್ಮಯ ಅಸೂಯೆಗಳ ಫಲಿತವೇ ಈ ದೂರ–ಸಮೀಪ, ಮಡಿ–ಮೈಲಿಗೆಗಳ ಆವಾಂತರಗಳು. ನಿರ್ಧಾರದ ಹಕ್ಕು ಪಿತೃತ್ವದ ಕೈಯಲ್ಲಿರುವುದರಿಂದ ಹೆಣ್ಣುಪ್ರಜ್ಞೆ ಉತ್ಪಾದಿತ ನಂಬಿಕೆಗಳ ಗುಂಟ ಚಲಿಸುತ್ತದೆ. ದುರಂತವೆಂದರೆ, ಹೊರನೋಟಕ್ಕೆ ಬದುಕಿನಲ್ಲಿ ಎಷ್ಟೆಲ್ಲ ಬದಲಾವಣೆಗಳಾದ ಮೇಲೂ ಹೆಣ್ಣಿನ ಪ್ರಜ್ಞೆಯಲ್ಲಿ ಅವೇ ಸಾಂಪ್ರದಾಯಿಕ ನಿಯತ್ತುಗಳು ಇರುವುದು. ಇದು ಶಬರಿಮಲೆಗೆ ಮಾತ್ರ ಸೀಮಿತವಾದದ್ದು ಎಂದೇನಲ್ಲ. ಬಹುತೇಕ ಧರ್ಮಗಳಲ್ಲಿ ಅದರಲ್ಲೂ ವೈದಿಕ ಧರ್ಮದಲ್ಲಿ ಮುಟ್ಟನ್ನು ಹೊಲೆ ಎಂದು, ಶುಭಕಾರ್ಯ ಮತ್ತು ದೇವಕಾರ್ಯಗಳಿಗೆ ಸಲ್ಲದ್ದು ಎಂದೇ ಹೇಳಿಕೊಂಡು ಬರಲಾಗಿದೆ. ಸಾಂಪ್ರದಾಯಿಕ ನಂಬಿಕೆಗಳು ಹೆಣ್ಣು ಪ್ರಜ್ಞೆಯನ್ನು ಬಂಧಿಸುತ್ತಿವೆ. ಹೆಣ್ಣಿನ ವಿಕಾಸವನ್ನು ಹೆಣ್ಣಿನಿಂದಲೇ ತಡೆವ ಪಿತೃತ್ವ ರಾಜಕಾರಣ ತುಂಬ ಮುಫತ್ತಾಗಿ ಬೆಳೆಯುತ್ತಿದೆ.

ಶಬರಿಮಲೆಯಲ್ಲಿ ಅಯ್ಯಪ್ಪ ದರ್ಶನದ ಹಕ್ಕೊತ್ತಾಯವನ್ನು ಮುಂದುವರಿಸಿದ ಹೋರಾಟ ಗಾರ್ತಿಯರಲ್ಲಿ ಮಹಿಳಾ ಸಮಾನತೆಯ ಪ್ರಶ್ನೆಯನ್ನು ಕಿಸ್ ಆಫ್ ಲವ್‌ನಂಥ ಉಗ್ರ ಪ್ರತಿರೋಧದ ಮೂಲಕ ಹೇಳಹೊರಟವರಿದ್ದರು. ಅಯ್ಯಪ್ಪ ಭಕ್ತರ ಸಾಂಪ್ರದಾಯಿಕ ಉಡುಪನ್ನು ಧರಿಸಿ; ಅದನ್ನು ಉನ್ಮಾದ ಭಾವನೆಯಾಗಿ ಮೆರೆಯಲಾಯಿತು. ಮಹಿಳಾ ಸಮಾನತೆಯ ಪ್ರಶ್ನೆ ಕಣ್ಣೆದುರೇ ಕೈಜಾರಿ ಬಿತ್ತು ಎಂಬ ನಿರಾಸೆಯು ಆವರಿಸುತ್ತದೆ. ಹೌದು, ಮಹಿಳಾ ಸಮಾನತೆಯ ಪ್ರಶ್ನೆಯನ್ನು ತಾತ್ವಿಕವಾಗಿ ತಿಳಿಯಬೇಕಿದೆ. ಗಂಡಾಳಿಕೆಯು ರೂಪಿಸಿ ಚಾಲ್ತಿಗೆ ತಂದ ಮಾದರಿಗಳಲ್ಲಿ ಹೆಣ್ಣಿನ ಸರಿ–ತಪ್ಪುಗಳ ಸಿದ್ಧ ಚೌಕಟ್ಟಿದೆ. ಕಾಲದಿಂದ ಕಾಲಕ್ಕವು ನವೀಕರಣಗೊಳ್ಳುತ್ತವೆ. ಈಗಿನ ಪ್ರಚಲಿತದಲ್ಲಿರುವ ಸಂಪ್ರದಾಯ ಮತ್ತು ಆಧುನಿಕತೆಯ ಹಾದಿಯು ಅವಳನ್ನು ಮತೀಯವಾದಿಯಾಗಿಸುತ್ತದೆ. ಇಲ್ಲವೇ ಸ್ವ ಭ್ರಷ್ಟತೆಯೆಡೆ ನೂಕುತ್ತಿದೆ. ಹೆಣ್ಣನ್ನು ತಪ್ಪಿತಸ್ಥಳನ್ನಾಗಿಸುವುದು ಎಂದರೆ ಪಿತೃಪ್ರಧಾನೆಯು ಯಾವ ಕಷ್ಟವಿಲ್ಲದೆ ಇನ್ನೊಂದು ಪಾದವನ್ನೂರಿ ಗೆಲುವಿನ ಪತಾಕೆ ನೆಡುವುದಾಗಿರುತ್ತದೆ. ಮಹಿಳಾ ಸಮಾನತೆಯ ಹೋರಾಟದ ಒಂದು ಸಿನಿಕತೆ, ದುಡುಕುಗಳು ಇದುವರೆಗಿನ ಶ್ರಮವನ್ನೆಲ್ಲ ಮಣ್ಣುಗೂಡಿಸಬಲ್ಲದು.

ಇದೀಗ ಸುಪ್ರೀಂ ಕೋರ್ಟಿಗೆ ಮರುಪರಿಶೀಲನಾ ಅರ್ಜಿಗಳು ಹೋಗಿವೆ. ಸಂವಿಧಾನಬದ್ಧವಾದ ಹಕ್ಕನ್ನೇ ಪ್ರಶ್ನಿಸಲಾಗುತ್ತಿದೆ. ಜನರನ್ನು ಸರಿಯಾದ ತಿಳುವಳಿಕೆಯತ್ತ ಮುನ್ನಡೆಸಬೇಕಿದ್ದ ರಾಜಕೀಯ ಪಕ್ಷಗಳು ಎಲ್ಲ ತಾತ್ವಿಕತೆಯ ಹಂಗು ಹರಿದುಕೊಂಡು, ವೋಟುಗಳ ಲೆಕ್ಕದಲ್ಲಿ ವ್ಯವಹರಿಸುತ್ತಿವೆ. ಬಿಜೆಪಿ ಪಕ್ಷ ಮಹಿಳೆಯರಿಗೇ ಪ್ರತ್ಯೇಕ ಶಬರಿಮಲೆ ಕಟ್ಟುವ ಮಾತಾಡಿದೆ. ನಮ್ಮ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಮಹಿಳೆಯರು ಬೇಕಾದರೆ ಅಯ್ಯಪ್ಪನನ್ನು ಮನೆಯಲ್ಲಿ ಪೂಜಿಸಲಿ. ಮಹಿಳೆಯರ ಪ್ರವೇಶದಿಂದ ವ್ರತಧಾರಿ ಭಕ್ತರ ಮನೋನಿಗ್ರಹಕ್ಕೆ ತೊಂದರೆಯಾದೀತು –ಎನ್ನುತ್ತಾರೆ. ಹಾಗಿದ್ದರೆ, ದೇವಸ್ಥಾನಗಳಲ್ಲಿ ಮಹಿಳೆಯರಿದ್ದಾಗ ನಿಗ್ರಹ ಸಾಧ್ಯವಾಗುವುದಿಲ್ಲವೇ? ಮಹಿಳಾ ಸಬಲೀಕರಣಕ್ಕಾಗಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿದವರ ನುಡಿಗಳಿವು. ಹಾಗಿದ್ದರೆ ಸಬಲೀಕರಣ ಎಂದರೇನು ?

ಪ್ರತಿಯೊಬ್ಬರೂ ಶಬರಿಮಲೆ ವಿಷಯವನ್ನು ಶತಮಾನಗಳ ಸಂಪ್ರದಾಯ ಎಂದೇ ಬಿಂಬಿಸುತ್ತಾರೆ. ವಾಸ್ತವವಾಗಿ ಪರಿಸ್ಥಿತಿ ಹಾಗಿರಲಿಲ್ಲ – ಎನ್ನುವುದನ್ನು ಮರೆಮಾಡುತ್ತೇವೆ. ಮುಸ್ಲಿಂ ಧರ್ಮದ ವಿಷಯವನ್ನು ಇದರೊಂದಿಗೆ ತಳಕು ಹಾಕಲಾಗುತ್ತಿದೆ. ಮುಂಬೈಯ ಹಾಜಿ ಅಲಿ ದರ್ಗಾಕ್ಕೆ ಮಹಿಳಾ ಪ್ರವೇಶ ನಿರ್ಬಂಧ ಪ್ರಶ್ನಿಸಿ ಸುಪ್ರೀಂ ಕೋರ್ಟು ಆದೇಶ ನೀಡಿದ ನಂತರ ಅಲ್ಲೀಗ ಯಾವುದೇ ಹಿಂಸೆ, ಪ್ರತಿರೋಧಗಳಿಲ್ಲದೆ ಮಹಿಳೆಯರು ಪ್ರವೇಶಿಸಿದ್ದಾರೆ. ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ದರ್ಗಾಗಳಿಗೆ ಕೇವಲ ಮುಸ್ಲಿಮರಲ್ಲಿ, ಯಾವ ಧರ್ಮದವರೂ ಹೋಗಿ ಬರಬಹುದು. ಮಸೀದಿಗಳ ಸಾಮೂಹಿಕ ಪ್ರಾರ್ಥನೆಗಳಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲ. ಪ್ರತ್ಯೇಕ ವ್ಯವಸ್ಥೆಯಿದೆ. ಯಾಕೆಂದರೆ ನಮಾಜಿನ ವಿವಿಧ ಭಂಗಿಗಳು ಮತ್ತು ಸಮೀಪ ಪ್ರಾರ್ಥನೆಗಳು ಎಂದು ಹೇಳಲಾಗುತ್ತದೆ.



ಸುಪ್ರೀಂ ಕೋರ್ಟ ತೀರ್ಪು ಏನಾಗುತ್ತದೋ ಗೊತ್ತಿಲ್ಲ. ಮಹಿಳೆಯರು ಮಾಡಬೇಕಿರುವುದೇನು? ಬಹುಶಃ ಇರುಮುಡಿಯ ಕಂದನಿಗೆ ವಿಷಾದದಿಂದ ಬುದ್ಧಿ ಹೇಳುವುದು. ಹೆಣ್ತನದ ಗೌರವ ತಿಳಿದರೆ ಅವನಿಗೆ ತಿಳಿದೀತು. ಈ ಸುತ್ತಲ ಮಧ್ಯವರ್ತಿಗಳಿಗಲ್ಲ ಎಂಬ ನಂಬಿಗೆಯಲ್ಲಿ.

ಸಂವಿಧಾನಕ್ಕೆ ಮತ್ತು ಸುಪ್ರಿಂ ಕೋರ್ಟಿಗೆ ಕೇಂದ್ರದ ಆಳುವ ಪಕ್ಷವೇ ಒಡ್ಡಿದೆ ಸವಾಲು



@MANJULtoons ವ್ಯಂಗ್ಯಚಿತ್ರ: ಮಂಜುಲ್, ಮಿಡ್ ಡೇ fb.me/MANJULtoons

ಶಬರಿಮಲೆ ಕುರಿತ ಅಮಿತ್ ಷಾ ಉವಾಚವನ್ನು ಅಲಹಾಬಾದ್ ಹೈಕೋರ್ಟಿನ ಅಯೋಧ್ಯಾ ತೀರ್ಪು ಕುರಿತಂತೆ ಅರ್ಜಿಗಳ ವಿಚಾರಣೆಯಲ್ಲಿ ಸುಪ್ರಿಂ ಕೋರ್ಟ್ "ಸ್ವೀಕಾರಾರ್ಹವಾದ ಮತ್ತು ಜಾರಿಗೊಳಿಸಬಹುದಾದ" ಮತ್ತು "ಜನಗಳ ನಂಬಿಕೆಯನ್ನು ಮುರಿಯದ"'(ಆರೆಸ್ಸೆಸ್–ಬಿಜೆಪಿ ಅಭಿಪ್ರಾಯದಲ್ಲಿ) ಒಂದು ತೀರ್ಪನ್ನು ಕೊಡಿ ಎಂಬ ಒಂದು ಮುನ್ನೆಚ್ಚರಿಕೆಯಾಗಿಯೂ ಕಾಣಬಹುದಾಗಿದೆ. ಆದರೆ ಸುಪ್ರಿಂ ಕೋರ್ಟ್ ತೀರ್ಪು ಸಂಘ ಪರಿವಾರದ ಬಯಕೆಯನ್ನು ಈಡೇರಿಸಿಲ್ಲ.



ಆದರೆ ಆರೆಸ್ಸೆಸ್ ಮತ್ತು ಬಿಜೆಪಿಗೆ ಮುಂಬರುವ ಲೋಕಸಭಾ ಚುನಾವಣೆಯ ವೇಳೆಯಲ್ಲಿ ರಾಮದೇವಸ್ಥಾನದ ನಿರ್ಮಾಣವನ್ನು ಒಂದು ಜ್ವಲಂತ ಪ್ರಶ್ನೆಯಾಗಿ ಮಾಡಬೇಕಾಗಿದೆ. ಆದ್ದರಿಂದಲೇ ದೇವಸ್ಥಾನದ ಪ್ರಶ್ನೆಯನ್ನು ಮುನ್ನೆಲೆಗೆ ಎಳೆಯಲು ಎಡೆಬಿಡದ ಪ್ರಯತ್ನಗಳು ಮುಂದುವರೆಯುತ್ತವೆ. ಆದ್ದರಿಂದ ಶಬರಿಮಲೆ ತೀರ್ಪಿನ ಜಾರಿ ಈ ನಿಟ್ಟಿನಲ್ಲಿ ಒಂದು ಪರೀಕ್ಷೆಯ ವಿಷಯವಾಗಿದೆ.

ಪ್ರಕಾಶ ಕಾರಟ್

ಕಣ್ಣೂರಿನಲ್ಲಿ ಬಿಜೆಪಿ ಅಧ್ಯಕ್ಷ ಅಮಿತ್ ಷಾ ಮಾಡಿದ ಭಾಷಣ ಸಂವಿಧಾನಕ್ಕೆ ಮತ್ತು ಸುಪ್ರಿಂ ಕೋರ್ಟಿಗೆ ಮಾಡಿದ ಒಂದು ನೇರ ಸವಾಲು ಎಂದು ಕಾಣಬೇಕಾಗಿದೆ. ಅವರು ಶಬರಿಮಲೆ ದೇವಸ್ಥಾನಕ್ಕೆ ಎಲ್ಲ ವಯಸ್ಸಿನ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕೊಡುವ ಸುಪ್ರಿಂ ಕೋರ್ಟಿನ ತೀರ್ಪನ್ನು ವಿರೋಧಿಸುವ ಪ್ರತಿಭಟನೆಗಳಿಗೆ ಬಿಜೆಪಿಯ ಬೆಂಬಲ ಮತ್ತು ಅವುಗಳಲ್ಲಿ ಭಾಗವಹಿಸುತ್ತಿರುವುದರ ಬಗ್ಗೆ ಮಾತನಾಡುತ್ತಿದ್ದರೂ, ಅವರ ಟಿಪ್ಪಣಿಗಳ ಮಹತ್ವ ನ್ಯಾಯಾಂಗವನ್ನು ಹೆದರಿಸುವ, ಮುಸುಕಿನ ಬೆದರಿಕೆಯ್ಲುವರ ಉದ್ಧಟ ದನಿಯಲ್ಲಿ ಅಡಗಿದೆ.


ತಮ್ಮ ಭಾಷಣದಲ್ಲಿ ಅವರು "ಜಾರಿಗೊಳಿಸಬಹುದಾದ ಆದೇಶಗಳನ್ನು ನೀಡಿ, ಜನಗಳ ನಂಬಿಕೆಯನ್ನು ಮುರಿಯುವ ಆದೇಶಗಳನ್ನಲ್ಲ ಎಂದು (ರಾಜ್ಯ) ಸರಕಾರಕ್ಕೆ ಮತ್ತು ನ್ಯಾಯಾಲಯದಲ್ಲಿ ತೀರ್ಪು ಪ್ರಕಟಿಸುವವರಿಗೆ ನಾನು ಹೇಳಬಯಸುತ್ತೇನೆ" ಎಂದು ಅವರು ಸಾರಿದರು.

ಇನ್ನು, ಸುಪ್ರಿಂ ಕೋರ್ಟಿನ ತೀರ್ಪಿನ ಜಾರಿಯನ್ನು ಎತ್ತಿ ಹಿಡಿಯುವ ರಾಜ್ಯ ಸರಕಾರವನ್ನು ಉರುಳಿಸುವ ಬೆದರಿಕೆಯನ್ನು ಅವರು ಹಾಕಿದ್ದಾರೆ.

ಅಂದರೆ ನ್ಯಾಯಾಲಯಗಳು ಸಂವಿಧಾನಕ್ಕೆ ಲಕ್ಷ್ಯಗೊಡಬಾರದು, ಜನಗಳ "ನಂಬಿಕೆ"ಗಷ್ಟೇ ಕೊಡಬೇಕು ಎಂಬ ಸ್ಫಟಿಕದಷ್ಟು ಸ್ಪಷ್ಟವಾಗಿರುವ ಮಾತು ಇದು. "ಜನಗಳ ನಂಬಿಕೆಯನ್ನು ಮುರಿಯುವ" ಒಂದು ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವ ಯಾವುದೇ ಸರಕಾರ ಕಿತ್ತೊಗೆಯಲು ಅರ್ಹವಾಗಿರುವ ಸರಕಾರ!

ಇದೀಗ ಮತ್ತೆ ಆರೆಸ್ಸೆಸ್ ಮತ್ತು ಅದರ ರಾಜಕೀಯ ಅಂಗವಾದ ಬಿಜೆಪಿಯ ಕಣ್ಣೋಟದ ಒಂದು ಉದಾಹರಣೆ– ಸಂವಿಧಾನ ಮತ್ತು ಅದರ ಸಂಸ್ಥೆಗಳು ಒಂದು ಹಿಂದೂರಾಷ್ಟ್ರದ ಗುರಿಗಳಿಗೆ ಅಡಿಯಾಳಾಗಿರಬೇಕು ಮತ್ತು ಹಿಂದುತ್ವದ ಪ್ರತಿಗಾಮಿ ಮೌಲ್ಯವನ್ನು ಪಾಲಿಸಬೇಕು ಎಂಬುದೇ ಅ ಕಣ್ಣೋಟ.

ಅಮಿತ್ ಷಾ ಭಾಷಣದ ಮರುದಿನ, ಕೇಂದ್ರ ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಒಂದು ಆರೆಸ್ಸೆಸ್ ಪ್ರಾಯೋಜಿತ ಪ್ರತಿಷ್ಠಾನದಲ್ಲಿ ಮಾತಾಡುತ್ತ ಅದೇ ಅಂಶವನ್ನು ಇನ್ನಷ್ಟು ಸುಸಂಸ್ಕೃತವಾಗಿ ಪುನರುಚ್ಚರಿಸಿದರು. ಅವರು "ಸಂವಿಧಾನತ್ವ" ಮತ್ತು 'ಭಕ್ತರು" ಇವೆರಡರ ನಡುವಿನ ದ್ವೈತ್ಯದ ಉಪನ್ಯಾಸ ಮಾಡುತ್ತ ಮತೀಯ ನಂಬಿಕೆ ಮತ್ತು ಆಚರಣೆಗಳ ವಿಷಯದಲ್ಲಿ ಸಮಾನತೆ ಮತ್ತು ಘನತೆಯ ಹಕ್ಕಿಗಿಂತ ಮತೀಯ ಹಕ್ಕಿಗೆ ಆದ್ಯತೆ ಕೊಡಬೇಕು ಎಂದು ತರ್ಕ ಹೂಡಿದರು.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಅಮಿತ್ ಷಾ ಉವಾಚ ಅಲಹಾಬಾದ್ ಹೈಕೋರ್ಟಿನ ಅಯೋಧ್ಯಾ ತೀರ್ಪು ಕುರಿತಂತೆ ಅರ್ಜಿಗಳ ವಿಚಾರಣೆಯನ್ನು ಸುಪ್ರಿಂ ಕೋರ್ಟ್ ನಡೆಸಬೇಕಾಗಿದ್ದ ಮೂರು ದಿನಗಳ ಮುಂಚೆ ಬಂದಿತ್ತು. ಅಯೋಧ್ಯೆ ಕುರಿತಂತೆ '(ಆರೆಸ್ಸೆಸ್–ಬಿಜೆಪಿ ಅಭಿಪ್ರಾಯದಲ್ಲಿ) ಸ್ವೀಕಾರಾರ್ಹವಾದ ಮತ್ತು ಜಾರಿಗೊಳಿಸಬಹುದಾದ ಮತ್ತು "ಜನಗಳ ನಂಬಿಕೆಯನ್ನು ಮುರಿಯದ" ಒಂದು ತೀರ್ಪನ್ನು ಕೊಡಿ ಎಂಬ ಒಂದು ಮುನ್ನೆಚ್ಚರಿಕೆಯಾಗಿಯೂ ಅವರ ಭಾಷಣವನ್ನು ಕಾಣಬಹುದಾಗಿದೆ.

ಒಂದು ತ್ವರಿತ ವಿಚಾರಣೆ ಮತ್ತು ಅಪೇಕ್ಷಣೀಯ ತೀರ್ಪಿಗೆ ನ್ಯಾಯಾಲಯದ ಮೇಲೆ ಒತ್ತಡ ಹೇರುವುದರೊಂದಿಗೇ, ಕೇಂದ್ರ ಸರಕಾರ ದೇವಸ್ಥಾನ ನಿರ್ಮಾಣಕ್ಕೆ ಅನುವು ಮಾಡಿಕೊಡುವ ಶಾಸನ ತರಲು ಕ್ರಮ ವಹಿಸಬೇಕು ಎಂಬ ಆಗ್ರಹದ ಮತ್ತೊಂದು ದಾರಿಯನ್ನು ತೆರೆಯಲಾಗಿದೆ. ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ತನ್ನ ವಿಜಯದಶಮಿ ಭಾಷಣದಲ್ಲಿ ತಾವುಗಳು ಸುಪ್ರಿಂ ಕೋರ್ಟಿನ ತೀರ್ಪನ್ನು ಕಾಯುತ್ತಿದ್ದೇವೆ ಎಂದರು. ಸರಕಾರಕ್ಕೆ ನೀಡಿದ್ದ ಕರೆ ಒಂದು ಶೀಘ್ರ ತೀರ್ಮಾನಕ್ಕೆ ಬರಬೇಕೆಂದು ನ್ಯಾಯಾಲಯದ ಮೇಲೆ ಒತ್ತಡ ಹಾಕಲಿಕ್ಕಾಗಿ ಎಂಬುದು ಸ್ವಯಂವೇದ್ಯ.

ಆದರೆ ಅಕ್ಟೋಬರ್ 29ರಂದು ಮುಖ್ಯ ನ್ಯಾಯಾಧೀಶರ ನೇತೃತ್ವದ ಸುಪ್ರಿಂ ಕೋರ್ಟ್ ಪೀಠ ಈ ಅರ್ಜಿಗಳ ವಿಚಾರಣೆಯ ತುರ್ತು ಏನೂ ಇಲ್ಲ, ಈ ವಿಚಾರಣೆ ನಡೆಸುವ ಪೀಠವನ್ನು ಮತ್ತು ವಿಚಾರಣೆಯ ದಿನಾಂಕಗಳನ್ನು ಜನವರಿ ತಿಂಗಳಲ್ಲಿ ನಿರ್ಧರಿಸಲಾಗುವುದು ಎಂದಿದೆ. ಈ ಕ್ರಮದ ಮೂಲಕ ನ್ಯಾಯಾಲಯ, ಲೋಕಸಭಾ ಚುನಾವಣೆಗಳ ಸಮಯದಲ್ಲಿ ಕೋಮುವಾದಿ ಧ್ರುವೀಕರಣಕ್ಕೆ ಬಳಸಬಹುದಾದ ಒಂದು ತೀರ್ಪನ್ನು ಪಡೆಯಬೇಕೆನ್ನುವ ಸಂಘಿ ಸಮೂಹದ ಬಯಕೆಯನ್ನು ಈಡೇರಿಸದಿರಲು ನಿರ್ಧರಿಸಿದೆ.

ಸುಪ್ರಿಂ ಕೋರ್ಟಿನ ಈ ನಿಲುವು ಕೇಸರಿ ಪಡೆಗಳ ಟೀಕೆಗೆ, ಪ್ರತಿಭಟನೆಗಳಿಗೆ ಗುರಿಯಾಗಿದೆ. ಸುಗ್ರೀವಾಜ್ಞೆ ತರಬೇಕು, ಇಲ್ಲವೇ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕಾನೂನನ್ನು ತರಬೇಕು ಎಂಬ ಕರೆಗಳು ಹೊಮ್ಮಿವೆ. ಕೇಂದ್ರ ಮಂತ್ರಿ ಗಿರಿರಾಜ ಸಿಂಗ್ ಇನ್ನಷ್ಟು ವಿಳಂಬವಾದರೆ ಹಿಂದೂಗಳು ತಾಳ್ಮೆ ಕಳಕೊಳ್ಳಬಹುದು ಎಂದು ಎಚ್ಚರಿಸಿದ್ದಾರೆ. ಉತ್ತರಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ ದೇವಸ್ಥಾನ ನಿರ್ಮಾಣಕ್ಕೆ ಬೇರೆಲ್ಲಾ ದಾರಿಗಳನ್ನು ಅನ್ವೇಷಿಸಬೇಕು ಎಂದು ಬಯಸುತ್ತಾರೆ.

ಮೋದಿ ಸರಕಾರ ಅಯೋಧ್ಯೆಯ ಪ್ರಶ್ನೆಯ ಮೇಲೆ ಒಂದು ಸುಗ್ರೀವಾಜ್ಞೆ ಹೊರಡಿಸುವ ಸ್ಥಿತಿಯಲ್ಲೂ ಇಲ್ಲ, ಅಥವ ಯಾವುದೇ ಶಾಸನ ತರುವ ಸ್ಥಿತಿಯಲ್ಲೂ ಇಲ್ಲ. ಏಕೆಂದರೆ, ಆ ವಿವಾದ ನ್ಯಾಯಾಂಗದ ಪ್ರಕ್ರಿಯೆಗೆ ಒಳಗಾಗಿದೆ, ಈಗ ಅದು ಸುಪ್ರಿಂ ಕೋರ್ಟ್ ತಲುಪಿದೆ. ಈ ಪ್ರಕ್ರಿಯೆಯನ್ನು ಸರಕಾರವಾಗಲೀ, ಆಳುವ ಪಕ್ಷವಾಗಲೀ ಯಾವುದೇ ರೀತಿಯಲ್ಲಿ ಬದಿಗೊತ್ತಲು ಸಾಧ್ಯವಿಲ್ಲ. ಆದರೆ ಆರೆಸ್ಸೆಸ್ ಮತ್ತು ಬಿಜೆಪಿಗೆ ಮುಂಬರುವ ಲೋಕಸಭಾ ಚುನಾವಣೆಯ ವೇಳೆಯಲ್ಲಿ ರಾಮದೇವಸ್ಥಾನದ ನಿರ್ಮಾಣವನ್ನು ಒಂದು ಜ್ವಲಂತ ಪ್ರಶ್ನೆಯಾಗಿ ಮಾಡಬೇಕಾಗಿದೆ. ಆದ್ದರಿಂದಲೇ ದೇವಸ್ಥಾನದ ಪ್ರಶ್ನೆಯನ್ನು ಮುನ್ನೆಲೆಗೆ ಎಳೆಯಲು ಎಡೆಬಿಡದ ಪ್ರಯತ್ನಗಳು ಮುಂದುವರೆಯುತ್ತವೆ.

ಆದ್ದರಿಂದ ಶಬರಿಮಲೆ ತೀರ್ಪಿನ ಜಾರಿ ಈ ನಿಟ್ಟಿನಲ್ಲಿ ಒಂದು ಪರೀಕ್ಷಾರ್ಥ ವಿಷಯವಾಗಿದೆ. ಈ ತೀರ್ಪನ್ನು "ಭಕ್ತಜನ" ಗಳನ್ನು ಅಣಿನೆರೆಸುವ ಒಂದು ಪ್ರಶ್ನೆಯಾಗಿ ಮಾಡಿ ಅದರಿಂದ ಪ್ರಯೋಜನ ಪಡೆಯಬಹುದು ಎಂಬುದು ಬಿಜೆಪಿ ನಿರೀಕ್ಷೆ. ಆದರೆ ಕೇರಳದಲ್ಲಿನ ಸನ್ನಿವೇಶ ಸಂಪೂರ್ಣವಾಗಿ ಭಿನ್ನವಾಗಿದೆ. ಅಲ್ಲಿ ಜಾತ್ಯತೀತ ಮೌಲ್ಯಗಳಿಗೆ ದೃಢವಾಗಿ ಬದ್ಧವಾಗಿರುವ ಒಂದು ಎಡ –ಪ್ರಜಾಪ್ರಭುತ್ವ ರಂಗದ ಸರಕಾರವಿದೆ, ಅದು ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಕೇರಳದ ಜನಗಳ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಪ್ರಜ್ಞೆ ಅವರ ದುಷ್ಟ ತಂತ್ರಗಳನ್ನು ನಿಷ್ಫಲಗೊಳಿಸುತ್ತದೆ. ಕೋಮುವಾದಿ ಶಕ್ತಿಗಳ ರಾಜಕೀಯ ಮತ್ತು ಕಸರತ್ತುಗಳನ್ನು ಎದುರಿಸುವ ದಾರಿಯನ್ನು ಕೇರಳ ತೋರಿಸಿ ಕೊಡಲಿದೆ.

ಸಂವಿಧಾನಿಕ ಮೌಲ್ಯಗಳ ಪಾಟ ಕಲಿಯಲು ಜನತೆ ನೆರವಾಗಬೇಕಾಗಿದೆ–ಬೃಂದಾ ಕಾರಟ್



ಪುಟ 2 ರಿಂದ

ದೇಶದ ಸರ್ವೋಚ್ಚ ನ್ಯಾಯಾಲಯದ ನಾಲ್ಕು ಅತ್ಯಂತ ತಹಿರಿಯ ನ್ಯಾಯಾಧೀಶರುಗಳು ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಆದರೆ ಈಗ ಅಮಿತ್ ಷಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸರ್ವೋಚ್ಚ ನ್ಯಾಯಾಲಯಕ್ಕೇ ಬೆದರಿಕೆ ಹಾಕಿದ್ದಾರೆ ಎಂದು ಬೃಂದಾ ಕಾರಟ್ ವಿಶ್ಲೇಷಿಸಿದ್ದಾರೆ.

ಗೋಸುಂಬೆತನದ ಪ್ರದರ್ಶನ:

ಅತ್ತ ಕೇಂದ್ರ ಹಣಕಾಸು ಮಂತ್ರಿಗಳು ಸಿಬಿಐ ಬೆಳವಣಿಗೆಗಳಲ್ಲಿ ಸುಪ್ರಿಂ ಕೋರ್ಟಿನ ಮಧ್ಯಪ್ರವೇಶವನ್ನು ಪರೋಕ್ಷವಾಗಿ ಟೀಕಿಸುತ್ತ ಜವಾಬುದಾರಿಕೆಯಲ್ಲಿ ಚುನಾಯಿತ ಸರಕಾರದ ನಿರ್ಧಾರಗಳನ್ನು ಗೌರವಿಸಬೇಕು ಎಂದು ಹೇಳುತ್ತಿರುವಾಗಲೇ, ಅವರ ಪಕ್ಷದ ಅಧ್ಯಕ್ಷರು ಕೇರಳದ ಚುನಾಯಿತ ಸರಕಾರದ ಜವಾಬುದ ಆರಿಕೆಯ ನಿರ್ಧಾರವಾಗಿರುವ ಸುಪ್ರಿಂ ಕೊರ್ಟಿನ ತೀರ್ಪನ್ನುಎತ್ತಿ ಹಿಡಿಯುವದನ್ನು ಮುಂದುವರೆಸಿದರೆ ಅದನ್ನು ಉರುಳಿಸುವದಾಗಿ ಬೆದರಿಕೆ ಹಾಕುತ್ತಿರುವ ಆಳುವ ಪಕ್ಷದ ಗೋಸುಂಬೆತನದತ್ತ ಬೃಂದಾ ಕಾರಟ್ ಗಮನ ಸೆಳೆದಿದ್ದಾರೆ.

ವಾಸ್ತವವಾಗಿ ಸುಪ್ರಿಂ ಕೋರ್ಟ್ ತೀರ್ಪನ್ನು ಮೊದಲಿಗೆ ಆರೆಸ್ಸೆಸ್ ಮುಖಂಡರು ಸ್ವಾಗತಿಸಿದ್ದರು. ಆದರೆ ಕೇರಳದಲ್ಲಿ ಒಂದು ವಿಭಾಗದ ಪ್ರತಿಭಟನೆಯನ್ನು ಕಂಡ ಬಿಜೆಪಿಗೆ ಒಂದೇ ಏಟಿನಲ್ಲಿ ಸುಪ್ರಿಂ ಕೋರ್ಟಿನ ಮೇಲೂ, ಮತ್ತು ಎಲ್‌ಡಿಎಫ್ ಸರಕಾರದ ಮೇಲೂ ದಾಳಿ ಮಾಡುವ ಅವಕಾಶ ಕಂಡುಬಂದಾಗ ಅದು ತಿಪ್ಪರಲಾಗ ಹಾಕಿತು.

ಮಹಿಳೆಯರ ಪ್ರವೇಶವನ್ನು ತಡೆಯಲು ತಾನು ದೇವಸ್ಥಾನವನ್ನು ಮೂತ್ರ ಮತ್ತು ರಕ್ತದಿಂದ ಅಪವಿತ್ರಗೊಳಿಸಲು,ಮತ್ತು ಅದನ್ನು ನೆವಮಾಡಿಕೊಂಡು ಮುಚ್ಚಲೂ ಸಿದ್ಧ ಎಂಬ ಈ ದೇವಸ್ಥಾನದ ಮುಖ್ಯ ಪುರೋಹಿತ(ತಂತ್ರಿ)ನ ಮೊಮ್ಮಗನ ಕ್ರಿಮಿನಲ್ ಹೇಳಿಕೆಯಂತಹ ಹಿಂಸಾಚಾರದ ಸ್ಪಷ್ಟ ಸಾಕ್ಷ್ಯಾಧಾರಗಳ ಮೇಲೆ ಎಲ್‌ಡಿಎಫ್ ಸರಕಾರ 2000ಕ್ಕೂ ಹೆಚ್ಚು ವ್ಯಕ್ತಿಗಳನ್ನು ಬಂಧಿಸಿರುವುದರಿಂದ ಕುಪಿತರಾಗಿರುವ ಅವರ ಪ್ರತಿಕ್ರಿಯೆ ಇವರೆಲ್ಲರೂ ಬಿಜೆಪಿ ಮಂದಿಗಳೇ, ಸಾಚಾ ಅಯ್ಯಪ್ಪ ಭಕ್ತರೇನೂ ಅಲ್ಲ ಎಂಬುದನ್ನು ಬಯಲಿಗೆ ತಂದಿದೆ.



ವ್ಯಂಗ್ಯಚಿತ್ರ: ಆರ್, ಪ್ರಸಾದ್

ಮಹಿಳೆಯರಿಗೆ ದೇವಸ್ಥಾನ ಪ್ರವೇಶ ಸಮಾನತೆಯು ಪ್ರಶ್ನೆಯೇನೂ ಅಲ್ಲ ಎಂದು ಅಮಿತ್ ಷಾ ವಾದ ಮಾಡುತ್ತಾರೆ. ದಲಿತರ ದೇವಸ್ಥಾನ ಪ್ರವೇಶವನ್ನು ನಿಷಿದ್ಧಗೊಳಿಸಿದ್ದ ಮೇಲ್ಜಾತಿ ಮಂದಿಗಳೂ ಇಂತಹದ್ದೇ ತರ್ಕವನ್ನೊಡ್ಡಿದ್ದರು. ಇದು ಮನುವಾದಿಗಳ ಶುದ್ಧ/ ಅಶುದ್ಧತೆಯ ಪರಿಲ್ಪನೆಯಿಂದ, ಋತುಮತಿ ಮಹಿಳೆಯರು ಮತ್ತು ದಲಿತರು ಅಶುದ್ದರೆಂಬ ಪರಿಕಲ್ಪನೆಯಿಂದ ಹೊಮ್ಮಿರುವ ಅವೈಜ್ಞಾನಿಕ ತರ್ಕಗಳು.

ಒಬ್ಬ ದಲಿತ ಅಥವ ಒಬ್ಬ ಋತುಮತಿ ಮಹಿಳೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಬೇಕೋ ಬೇಡವೋ ಎಂಬುದು ಅವರವರ ವೈಯಕ್ತಿಕ ಆಯ್ಕೆಗಳು. ಆದರೆ ಅಶುದ್ಧತೆಯ ತರ್ಕವೊಡ್ಡಿ ಅವರಿಗೆ ಪ್ರವೇಶ ನಿಷಿದ್ಧಗೊಳಿಸುವುದು ಸಂವಿಧಾನ ಕೊಟ್ಟಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಸುಪ್ರಿಂ ಕೋರ್ಟ್ ಹೇಳಿದೆ.

ಕೇರಳದ ಜನತೆ, ಅಷ್ಟೇ ಏಕೆ, ಇಡೀ ದೇಶದ ಜನತೆ ಅಮಿತ್ ಷಾ ಮತ್ತು ಅವರ ಅಧ್ಯಕ್ಷತೆಯಲ್ಲಿರುವ ಪಕ್ಷಕ್ಕೆ ಸಂವಿಧಾನಿಕ ಮೌಲ್ಯಗಳ ಪಾಟ ಕಲಿಯಲು ನೆರವಾಗಬೇಕಾಗಿದೆ ಎಂದು ಬೃಂದಾ ಕಾರಟ್ ತಮ್ಮ ಲೇಖನದಲ್ಲಿ ಚಾಟಿ ಬೀಸಿದ್ದಾರೆ.



ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರಕಾರ ಸ್ಥಳೀಯ ಸರಕಾರಗಳಿಗೆ ನೀಡುವ ಸಂಪನ್ಮೂಲವನ್ನು ಗಣನೀಯವಾಗಿ ಕಡಿತಗೊಳಿಸಿದೆ. 14ನೇ ಹಣಕಾಸು ವರದಿ ಬಂದ ನಂತರ ರಾಜ್ಯಕ್ಕೆ ನೀಡಬೇಕಾಗಿದ್ದ ಪಾಲು ಶೇ. 32ರಿಂದ 42 ಕ್ಕೆ ಏರಿಕೆ ಆಗಿದೆ. ಆದರೆ ಜತೆಗೆ ಕೇಂದ್ರ ಸರಕಾರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗದಲ್ಲಿ ಕಡಿತ ಮಾಡಿದೆ. ಇದರಿಂದ ತೆರಿಗೆ ಪಾಲಿನ ಶೆ. 10 ಪಾಲ ಏರಿಕೆಯ ಲಾಭವನ್ನು ರಾಜ್ಯಗಳಿಗೆ ನಿರಾಕರಿಸಿದೆ. ಹೆಚ್ಚಿನ ರಾಜ್ಯಗಳಲ್ಲಿ ಪಂಚಾಯತುಗಳು 'ನಾಮ್ ಕಾ ವಾಸ್ತೆ' ಆಗಿವೆ.

– ಡಾ. ಚಂದ್ರ ಪೂಜಾರಿ, ಹಂಪಿ ವಿ.ವಿ.



ಕರ್ನಾಟಕ ರಾಜ್ಯ ಪಂಚಾಯತ ನೌಕರರ ಸಂಘದ ಯಶಸ್ವಿ 7ನೇ ರಾಜ್ಯ ಸಮ್ಮೇಳನ

ಮೈಸೂರಿನಲ್ಲಿ 27.10.2018 ರಂದು ಕರ್ನಾಟಕ ರಾಜ್ಯ ಪಂಚಾಯತ ನೌಕರರ (ಸಿಐಟಿಯು ಸಂಯೋಜಿತ) ಸಂಘದ 7ನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಭಾಗವಾಗಿ ಮೈಸೂರಿನ ಸ್ವಾತಂತ್ರ್ಯ ಉದ್ಯಾನವನ ಪಾರ್ಕ್‌ನಿಂದ ರಾಜ್ಯದ 30 ಜಿಲ್ಲೆಗಳಿಂದ ಬಂದ ಸುಮಾರು 10 ಸಾವಿರ ಗ್ರಾಮ ಪಂಚಾಯಿತಿ ನೌಕರರು ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಆಕರ್ಷಕ ಮೆರವಣಿಗೆಯಲ್ಲಿ ಭಾಗವಹಿಸಿ ಗಮನ ಸೆಳೆದರು. ಮೆರವಣಿಗೆಯಲ್ಲಿ ಬಂದು ನಗರದ ಹೃದಯ ಭಾಗವಾದ ಟೌನ್‌ಹಾಲ್‌ನಲ್ಲಿ ಸಮ್ಮಿಲನಗೊಂಡರು. ಅಲ್ಲಿ ನಡೆದ ಬಹಿರಂಗ ಸಭೆ ಉದ್ಘಾಟನೆಯನ್ನು ಸಿಐಟಿಯು ಹಿರಿಯ ಕಾರ್ಮಿಕ ಮುಖಂಡರಾದ ವಿ.ಜಿ.ಕೆ. ನಾಯರ್‌ರವರು ಉದ್ಘಾಟಿಸಿದರು.

ಗ್ರಾಮ ಪಂಚಾಯಿತಿ ನೌಕರರು ಕನಿಷ್ಠ ಕೂಲಿಗಾಗಿ ದೀರ್ಘ ಹೋರಾಟ ಮಾಡಿ ಇತ್ತೀಚಿಗೆ ಸರಕಾರದಿಂದ ನೇರ ವೇತನ ಪಡೆಯುವ ಜಯ ಪಡೆದಿದ್ದಾರೆ. ಆದರೂ ಆಳುವ ವರ್ಗ ಸೇವೆ ಮಾಡುವ ಮತ್ತು ಉತ್ಪಾದನೆ ಮಾಡುವ ದುಡಿಯುವ ವರ್ಗಕ್ಕೆ ಕನಿಷ್ಠ ಕೂಲಿ ನಿರ್ದಿಷ್ಟ ಪಡಿಸಲಿಲ್ಲ. ರಾಜ್ಯದಲ್ಲಿ ಎರಡುವರೆ ಕೋಟಿ ಕಾರ್ಮಿಕರಿದ್ದಾರೆ. (ತಲಾ 100 ರೂ. ಕೂಲಿ ಹೆಚ್ಚಳ ಮಾಡಿದರೆ 25 ಸಾವಿರ ಕೋಟಿ ಹಣ ಕಾರ್ಮಿಕರಲ್ಲಿ ಹರಿದಾಡುತ್ತದೆ. ಆಗ ಕಾರ್ಮಿಕರು ತಮಗೆ ಅವಶ್ಯಕವಾದ ವಸ್ತುಗಳನ್ನು ಹೆಚ್ಚು ಕೊಳ್ಳುತ್ತಾರೆ. ಆಗ ಬೇಡಿಕೆಯೂ ಸಹ ಹೆಚ್ಚಾಗುತ್ತದೆ) ವಸ್ತುಗಳ ಮಾರಾಟ ಹೆಚ್ಚಿ ಖರ್ಚಾಗುತ್ತದೆ. ಹೆಚ್ಚು ಉತ್ಪಾದನೆಯು ಬೇಕಾಗುತ್ತದೆ. ಆಗ ಎಲ್ಲರಿಗೂ ಉದ್ಯೋಗ ಸಹ ಆಗುತ್ತದೆ. ಈ ನೀತಿ ಬಿಟ್ಟು ಉತ್ಪಾದನೆ ಹೆಚ್ಚಳ ಮಾಡಿಕೊಂಡು ಕೂಲಿ ಹಿಡಿದು ಕೊಡುತ್ತಿದ್ದಾರೆ. ಅದರಿಂದ ಸಮಾಜದ ತೀವ್ರವಾದ ಅಸಮಾನತೆ ಹೆಚ್ಚಾಗಿದೆ. ಇಂತಹ ಅನಿಷ್ಟ ನೀತಿಗಳನ್ನು ಕಿತ್ತುಹಾಕಲು ತೀವ್ರವಾದ ಹೋರಾಟವನ್ನು ಎಲ್ಲಾ ಕಾರ್ಮಿಕರೂ ಮಾಡಿದರೆ ಕಾರ್ಮಿಕರ ಬದುಕು ಹಸನಾಗುತ್ತದೆ. ಇಲ್ಲವಾದರೆ ಸಾಧ್ಯವಿಲ್ಲ ಎಂದರು.



ಮುಖ್ಯ ಅತಿಥಿಗಳಾದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿಯವರು ಸಭೆಯನ್ನು ಉದ್ಘಾಟಿಸಿ ಮಾತಾನಾಡುತ್ತಾ ಈ ದೇಶದ ನರೇಂದ್ರ ಮೋದಿ ಸರಕಾರದ 2014ರಲ್ಲಿ ಎಲ್ಲರಿಗೂ 'ಅಚ್ಛೆ ದಿನ್' ತರುತ್ತೇನೆ ಎಂದರೂ ಇವರು ಅಧಿಕಾರಕ್ಕೆ ಬರುವಾಗ ದೇಶದ 1% ಜನರ ಆಸ್ತಿ 48% ಇತ್ತು. ಈಗ 73% ಆಗಿದೆ. ಇವರು ದಿನಕ್ಕೆ 18 ಗಂಟೆ ದುಡಿಯುವುದು ಶೇ. 1% ಜನರಿಗೆ. 99% ಜನರನ್ನು ಸಂಕಷ್ಟಕ್ಕೆ ತಳ್ಳಿದ್ದಾರೆ. ಈ ನೀತಿಗಳ ವಿರುದ್ಧ ಜನವರಿ 8–9 ರಂದು ಆಖಿಲ ಭಾರತ ಮುಷ್ಕರಕ್ಕೆ ಕಾರ್ಮಿಕ ಸಂಘಗಳ ಕರೆ ನೀಡಿದೆ. ಅದರಲ್ಲಿ ನಾವು ಪಾಲ್ಗೊಳ್ಳೋಣ ಎಂದು ಕರೆ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಎಮ್.ಬಿ. ನಾಡಗೌಡ, ಉಪಾಧ್ಯಕ್ಷ ವಿ.ಪಿ. ಕುಲಕರ್ಣಿ, ಗೋಪಾಲಕೃಷ್ಣ ಅರಳಹಳ್ಳಿ, ಖಜಾಂಚಿ ಆರ್.ಎಸ್. ಬಸವರಾಜ್ ಇವರು ಮಾತಾನಾಡಿದರು. ಅಧ್ಯಕ್ಷತೆಯನ್ನು ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ವಹಿಸಿಕೊಂಡಿದ್ದರು.

ಸ್ವಾಗತ ಸಮಿತಿಯ ಅಧ್ಯಕ್ಷರು ಶುಭ ಕೋರಿದರು. ಕೆ. ಬಸವರಾಜ ರವರು ಸ್ವಾಗತ ಭಾಷಣ ಮಾಡಿದರು. ಜಗದೀಶ್ ಸೂರ್ಯ ವಂದನಾರ್ಪಣೆ ಮಾಡಿದರು.

ಪ್ರತಿನಿಧಿ ಅಧಿವೇಶನ:

ದಿವಾನ್ ಪೂರ್ಣಯ್ಯ ಸ್ಮಾರಕ ಭವನದಲ್ಲಿ ಸುಮಾರು 6 ಘಂಟೆ ಮೈಸೂರು ಜಿಲ್ಲಾ ನಂಜನಗೂಡು ತಾಲ್ಲೂಕಿನ ಗ್ರಾಮ ಪಂಚಾಯಿತಿ ನೌಕರರಾದ ಶ್ರೀ ನಂಜುಂಡಸ್ವಾಮಿಯವರು ಧ್ವಜಾರೋಹಣ ಮಾಡಿದರು. ನಂತರ ಎಲ್ಲರೂ ಸಾಲಾಗಿ ಹುತಾತ್ಮ ಸ್ಥಂಭಕ್ಕೆ ಪುಷ್ಪಾರ್ಚನೆ ಮಾಡಿ ಸಭಾಂಗಣ ಪ್ರವೇಶಿಸಿದರು. ಪ್ರಧಾನ ಕಾರ್ಯದರ್ಶಿಗಳು ವರದಿ ಮಂಡಿಸಿದರು. ಜಿಲ್ಲಾವಾರು ಗುಂಪುಗಳಾಗಿ ವಿಂಗಡಿಸಿ ಚರ್ಚೆಗೆ ಬಿಡಲಾಯಿತು.

ಸರಕಾರದ ಕೆಲಸ ಮಾಡುತ್ತಿದ್ದರೂ ಸರಕಾರಿ ನೌಕರರು ಎಂದು ಪರಿಗಣಿಸದ ಸ್ಥಿತಿಯನ್ನು ನಮ್ಮ ಸರಕಾರಗಳು ಸೃಷ್ಟಿಸಿವೆ. ಗ್ರಾಮ ಪಂಚಾಯಿತಿ ನೌಕರರನ್ನು ಸರಕಾರಿ ನೌಕರರು ಎಂದು ಪರಿಗಣಿಸದೇ ದುಡಿಯುವ ವರ್ಗಕ್ಕೆ ಅನ್ಯಾಯ ಮಾಡುತ್ತಿದೆ. 7ನೇ ವೇತನ ಆಯೋಗವೇ ಕನಿಷ್ಟ ವೇತನ ರೂ. 18 ಸಾವಿರ ಇರಬೇಕು ಎಂದಿದ್ದರೂ ಅದು ಜಾರಿಯಾಗಿಲ್ಲ. ಸುಪ್ರೀಂ ಕೋರ್ಟು ಸಹ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದರೂ ಸರಕಾರಗಳು ಅನುಷ್ಠಾನಕ್ಕೆ ಮುಂದಾಗುವುದಿಲ್ಲ.

– ವಿ.ಜೆ.ಕೆ. ನಾಯರ್, ಸಿಐಟಿಯು ರಾಜ್ಯ ಉಪಾಧ್ಯಕ್ಷರು

ರಾಜ್ಯದ 6204 ಗ್ರಾಮ ಪಂಚಾಯಿತಿಗಳಲ್ಲಿ 60 ಸಾವಿರದಷ್ಟು ನೌಕರರು ಕೆಲಸ ಮಾಡುತ್ತಿದ್ದಾರೆ. ಹಲವು ವರ್ಷಗಳ ಹೋರಾಟದ ಫಲವಾಗಿ ಅವರು ಕನಿಷ್ಟ ಕೂಲಿಯ ವ್ಯಾಪ್ತಿಗೆ ಬಂದಿದ್ದಾರೆ. ಅವರಿಗೆ ಕನಿಷ್ಟ ವೇತನ ಪಾವತಿಸಲು ಸರಕಾರ ಕನಿಷ್ಟ 820 ಕೋಟಿ ರೂ. ಬಿಡುಗಡೆ ಮಾಡಬೇಕಾಗಿದೆ. ಆದರೆ ಇದುವರೆಗೆ ಕೇವಲ 520 ಕೋಟಿ ರೂ. ಬಿಡುಗಡೆ ಆಗಿದೆ. ಹಿಂದಿನ ಸರ್ಕಾರ ನಾಟಕವಾಡುತ್ತಾ 5 ವರ್ಷ ಕಳೆದಿದೆ. ಹೊಸ ಸರಕಾರ ಸಹ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಆಸಕ್ತಿ ತೋರಿಸುತ್ತಿಲ್ಲ. ಕೆಲವು ಪಂಚಾಯಿತಿಗಳಲ್ಲಿ 10–12 ತಿಂಗಳುಗಳಿಂದ ವೇತನ ನೀಡಿಲ್ಲ.

– ಎಸ್. ವರಲಕ್ಷ್ಮಿ, ಸಿಐಟಿಯು ರಾಜ್ಯ ಅಧ್ಯಕ್ಷರು

ವಿಚಾರ ಸಂಕಿರಣ

ದಿನಾಂಕ 28.10.2018ರಂದು "ಪಂಚಾಯತ್ ರಾಜ್ ಸಮಸ್ಯೆಗಳು : ಕೇಂದ್ರ ಸರಕಾರದ ಧೋರಣೆ" ಎಂಬ ವಿಚಾರ ಸಂಕಿರಣವನ್ನು ಮಾಜಿ ಸಚಿವ ಹೆಚ್‌ಸಿ ಮಹಾದೇವಪ್ಪ ಉದ್ಘಾಟಿಸಿದರು. ಕೇಂದ್ರ ಸರಕಾರ ಗ್ರಾಮೀಣ ಸಮಸ್ಯೆಗಳಿಗೆ ಹಿಂದೆ 45% ಹಣಕಾಸು ನೇರವು ನೀಡುತ್ತಿತ್ತು. ಈಗ ಶೇ. 5% ಹಣ ಕೊಟ್ಟಿದೆ ಇದರಿಂದ ಸ್ಥಳೀಯ ಸಮಸ್ಯೆಗಳು ತೀವ್ರ ಸಂಕಟ ಅನುಭವಿಸುತ್ತಿವೆ ಎಂದು ತಿಳಿಸಿದರು.

ಡಾ॥ ಚಂದ್ರ ಪೂಜಾರಿ ಪ್ರಾಧ್ಯಾಪಕರು ಅಭಿವೃದ್ಧಿ ಅಧ್ಯಯನ ವಿಭಾಗ ಕನ್ನಡ ವಿವಿ ಹಂಪಿ, ಮತ್ತು ಜಿ.ವಿ. ಶ್ರೀರಾಮರೆಡ್ಡಿ ಮಾಜಿ ಶಾಸಕರು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ವಿಚಾರ ಮಂಡಿಸಿದರು. ಮಾರುತಿ ಮಾನ್ಪಡೆ ಅಧ್ಯಕ್ಷತೆ ವಹಿಸಿದ್ದರು.

ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರಾದ ಕೇಂಪೇಗೌಡ ಮತ್ತು ಜಿಲ್ಲಾ ಪಂಚಾಯತ್ ಸಿ.ಎಸ್.ಯಾದ ಯಾಲಕ್ಕಿಗೌಡರು ಭಾಗವಹಿಸಿದ್ದರು. ಕೇಂಪೇಗೌಡರು ಮಾತನಾಡುತ್ತಾ. ಪಂಚಾಯತಿ ನೌಕರರ EPMF ವೇತನ ಸಂಬಂಧಿಸಿದಂತೆ ತಕ್ಷಣ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.





ಮೋದಿ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ರಾಜ್ಯದಲ್ಲಿ ಐಕ್ಯ ಕಾರ್ಯಚರಣೆ

ಜೆಸಿಟಿಯು ರಾಜ್ಯ ಸಮಾವೇಶದ ನಿರ್ಧಾರ



ಕೆ. ಮಹಾಂತೇಶ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ವಿದೇಶಿ ಕಂಪೆನಿಗಳ ಗುಲಾಮ ಗಿರಿಯಲ್ಲಿ ತೊಡಗಿದೆ. ಇದರ ವಿರುದ್ಧ 2019 ರ ಜನವರಿ 8 ಮತ್ತು 9 ರಂದು ಕಾರ್ಮಿಕ ಸಂಘಟನೆಗಳ ಒಂದಾಗಿ ನಡೆಸುವ ಎರಡು ದಿನಗಳ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ರಾಜ್ಯದಲ್ಲಿ ಐಕ್ಯ ಕಾರ್ಯಚರಣೆ ಮೂಲಕ ಯಶಸ್ವಿಗೊಳಿಸಿ ಎಂದು ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ರಾಜ್ಯದ ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು.

ಅಕ್ಟೋಬರ್ 30 ರಂದು ಬೆಂಗಳೂರಿನ ಶಿಕ್ಷಕರ ಸದನ ಸಭಾಂಗಣದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಕರ್ನಾಟಕ) ಆಯೋಜಿಸಿದ್ದ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ರಾಜ್ಯ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೇಂದ್ರ ಸರಕಾರ ಬಡವರ, ದುಡಿಯುವ ವರ್ಗದವರ ಪರವಾಗಿಲ್ಲ. ಬದಲಿಗೆ ಕಾರ್ಪೊರೇಟ್ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡಲು ಇದೆ. ಅಷ್ಟೇ ಅಲ್ಲದೆ, ಕಾರ್ಮಿಕರ ಕಾನೂನುಗಳಿಗೆ ತಿದ್ದುಪಡಿ ಮಾಡಿ, ಅವರ ದುಡಿಮೆಯನ್ನು ಕಿತ್ತುಕೊಳ್ಳಲು ಮುಂದಾಗಿದೆ ಎಂದು ಆರೋಪಿಸಿದರು.

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಗುಲಾಮಗಿರಿ ನೀತಿ ಪ್ರತಿಭಟಿಸುವ ಮೂಲಕ ತಿದ್ದುಪಡಿ ಮಾಡಿ ಜಾರಿಗೆ ತರಲು ಹೊರಟಿರುವ ಕಾನೂನುಗಳನ್ನು ತಡೆಯಬೇಕಿದೆ. ಒಂದೊಮ್ಮೆ ಅವುಗಳನ್ನು ಜಾರಿಗೆ ತಂದರೆ ಕೈಗಾರಿಕೆಗಳನ್ನು ಹೇಗೆ ನಡೆಸುತ್ತೀರಿ ಎನ್ನುವ ಉತ್ತರ ನೀಡಬೇಕಿದೆ. ಅಷ್ಟೇ ಅಲ್ಲದೆ, ಅಸಂಘಟಿತ ವಲಯದಲ್ಲಿನ ಕಾರ್ಮಿಕರಿಂದ ಉದ್ಯಮಿಗಳ ಲಾಭ ಹೆಚ್ಚುತ್ತಿದೆ. ಕಾರ್ಮಿಕರಿಲ್ಲದೆ ಕೈಗಾರಿಕೆಗಳು ನಡೆಯವು ಎನ್ನುವುದನ್ನು ಅವರು ಅರಿತುಕೊಳ್ಳಬೇಕು. ಎಂದು ಕಿವಿಮಾತು ಹೇಳಿದರು.

ರಫೇಲ್ ಯುದ್ದ ವಿಮಾನ ಖರೀದಿ ಒಂದೇ ಮೋದಿ ಸರಕಾರದ ಭ್ರಷ್ಟಾಚಾರವಲ್ಲ. ಈ ಆಡಳಿತದಲ್ಲಿ ದೇಶದ ಸ್ವಾವಲಂಬನೆಗೆ ಅಪಾಯ ತಂದಿಟ್ಟ ಬಹುಮುಖ್ಯ ಸಂಗತಿ. ಜನ ಸಂಕಷ್ಟ ಎದುರಿಸುವಾಗ, ದೇಶವೇ ಅಪಾಯದಲ್ಲಿ ಇರುವಾಗ ನಾವು ಕೈಕಟ್ಟಿ ಕುಳಿತು ಕೊಳ್ಳದೇ ಅಖಿಲ ಭಾರತದಲ್ಲಿ ಮುಷ್ಕರದ ಮೂಲಕ ಕೇಂದ್ರ ಸರಕಾರಕ್ಕೆ ಉತ್ತರಿಸೋಣ ಎಂದು ತಿಳಿಸಿದರು.

ಐಎನ್‌ಟಿಯುಸಿ ರಾಷ್ಟ್ರೀಯ ಉಪಾಧ್ಯಕ್ಷ ಶಾಂತಕುಮಾರ್ ಮಾತನಾಡಿ ನರೇಂದ್ರ ಮೋದಿ ಸರಕಾರ ಜಾರಿ ಮಾಡಿದ ನೋಟು ಅಮಾನ್ಯೀಕರಣ, ಜಿ.ಎಸ್.ಟಿ ಅಂತಹ ನೀತಿಗಳು ನಮ್ಮ ದೇಶದ ಆರ್ಥಿಕತೆಯನ್ನು ಹಾಳು ಮಾಡಿದವು. ರಿಜರ್ವ ಬ್ಯಾಂಕ್ ಗೆ ಇರುವ ಸ್ವಾಯತ್ತತೆ ಮೇಲೆ ಮೋದಿ ಸರಕಾರ ದಾಳಿ ಮಾಡಿ ಬ್ಯಾಂಕಿಂಗ್ ವಲಯವನ್ನೇ ಸಂಪೂರ್ಣ ಕಾರ್ಪೋರೇಟ್ ಕೈಗೆ ನೀಡುವ ಪ್ರಯತ್ನ ನಡೆಸಿದೆ. ಆದರೆ ದೇಶದ ಜನತೆ ಇಂತಹ ಪ್ರಯತ್ನಗಳನ್ನು ವಿಫಲಗೊಳಿಸುತ್ತಾರೆ ಎನ್ನುವುದನ್ನು ಇತಿಹಾಸ ತೋರಿಸಿ ಕೊಟ್ಟಿದೆ ಎಂದು ಹೇಳಿದ ಅವರು ಎರಡು ದಿನಗಳ ಈ ಮುಷ್ಕರವನ್ನು ರಾಜ್ಯದಲ್ಲಿ ಯಶಸ್ವಿಗೊಳಿಸುವ ಹೊಣೆಗಾರಿಕೆಯನ್ನು ನಾವೆಲ್ಲಾ ಸಾಮೂಹಿಕವಾಗಿ ನಿರ್ವಹಿಸೋಣ ಎಂದು ಕರೆ ನೀಡಿದರು. ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಅಮರ್‌ಜಿತ್ ಕೌರ್ ಮಾತನಾಡಿ ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷರ ಏಜೆಂಟರಾಗಿ ಕೆಲಸ ಮಾಡಿದ ಸಂಘಪರಿವಾರ ಇವತ್ತು ನಮಗೆ ದೇಶ ಪ್ರೇಮದ ಪಾಠ ಹೇಳಿಕೊಡುವ ಅವಶ್ಯಕತೆ

ಪುಟ 11 ಕ್ಕೆ



ನಿರ್ಣಯದ ಆಯ್ದ ಭಾಗ

ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಕಾರ್ಪೋರೇಟ್‌ಗಳ ಹಿತಾಸಕ್ತಿಗಳಿಗಾಗಿ ಸೇವೆ ಸಲ್ಲಿಸುತ್ತಿರುವ ಪ್ರಸಕ್ತ ಕೇಂದ್ರ ಸರಕಾರವು ಆಮೂಲಕ ಜನವಿರೋಧಿ, ಕಾರ್ಮಿಕ ವಿರೋಧಿ ಹಾಗೂ ದೇಶ ವಿರೋಧಿ ನೀತಿಗಳನ್ನು ಜಾರಿ ಮಾಡುವ ಮೂಲಕ ದೇಶಿಯ ಉತ್ಪಾದನಾ ಸಾಮರ್ಥ್ಯ ಮತ್ತು ದೇಶದ ಆರ್ಥಿಕತೆಯ ಮೇಲೆ ಗಂಭೀರ ಪೆಟ್ಟು ನೀಡುತ್ತಿದೆ. ಇಂತಹ ನೀತಿಗಳನ್ನು ಕಾರ್ಮಿಕ ವರ್ಗ ತನ್ನ ಶಕ್ತಿಯ ಬಲ ಪ್ರಯೋಗದ ಮೂಲಕ ಜನಪರವಾಗಿ ಬದಲಾಯಿಸಬೇಕಿದೆ. ಅಂತಹ ಉನ್ನತ ಚಳುವಳಿಯನ್ನು ಬೆಳೆಸಿ ಅಂತಿಮ ಹಂತಕ್ಕೆ ಕೊಂಡೊಯ್ಯುವ ಕರ್ತವ್ಯವನ್ನು ಈ ಕಾರ್ಮಿಕ ವರ್ಗದ ಐಕ್ಯ ವೇದಿಕೆಯು ಮಾಡಬೇಕೆಂದು ಸಮಾವೇಶ ಕರೆ ನೀಡುತ್ತಿದೆ.

ರಾಷ್ಟ್ರೀಯ ಸಮಾವೇಶವು ನೀಡಿದ ಕರೆಯಂತೆ ಈ ಕೆಳಗಿನ ಕಾರ್ಯಕ್ರಮಗಳನ್ನು ರಾಜ್ಯ ಸಮಾವೇಶವು ಅಂಗೀಕರಿಸಿದೆ.

1. 2018 ಅಕ್ಟೋಬರ್/ನವೆಂಬರ್‌ನೊಳಗೆ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಮತ್ತು ಕೈಗಾರಿಕಾ/ಉಧ್ಯಮವಾರು ಜಂಟಿ ಸಮಾವೇಶಗಳನ್ನು ನಡೆಸುವುದು.
2. 2018 ಡಿಸೆಂಬರ್‌ಕೈಗಾರಿಕವಾರು ಜಂಟಿದ್ವಾರ ಸಭೆಗಳು, ರ‍್ಯಾಲಿಗಳನ್ನು ಸಂಘಟಿಸುವುದು
3. 2018 ಡಿಸೆಂಬರ್ 17–22 ಮತ ಪ್ರದರ್ಶನಗಳ ಮೂಲಕ ಮುಷ್ಕರ ನೋಟೀಸ್ ನೀಡುವುದು
4. 2019 ಜನವರಿ 8 ಹಾಗೂ 9 ರಂದುಎರಡು ದಿನಗಳ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸುವುದು.

ದೇಶದ ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ ಸಂಯೋಜನೆಗೊಂಡಿರುವ ಮತ್ತು ಯಾವುದೇ ಸಂಘಟನೆಗಳಿಗೂ ಸಂಯೋಜನೆಗೊಳ್ಳದಿರುವ ಸ್ವತಂತ್ರವಾದ ಯೂನಿಯನ್‌ಗಳು, ಒಕ್ಕೂಟಗಳು ಮತ್ತು ಅಸೋಷಿಯೇಷನ್‌ಗಳು ತಮ್ಮೆಲ್ಲ ಬೇಧ ಭಾವಗಳನ್ನು ಬದಿಗಿಟ್ಟು ದೇಶದ ಮತ್ತು ಒಟ್ಟಾರೆ ದುಡಿಯುವ ವರ್ಗದ ಹಿತಾಸಕ್ತಿಗಾಗಿ ಕಾರ್ಮಿಕ ವರ್ಗ ಒಂದಾಗಿ ನಡೆಯುವ ಮೇಲ್ಕಂಡ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಮುಂದಾಗಬೇಕೆಂದು ಈ ಸಮಾವೇಶವು ಕರೆ ನೀಡುತ್ತಿದೆ.

ವರದಿ ಮೇಲಿನ ಚರ್ಚೆ:

ಪಂಚಾಯಿತಿ ನೌಕರರ 430 ಪ್ರತಿನಿಧಿಗಳು 28 ಜಿಲ್ಲೆಗಳಿಂದ ಭಾಗವಹಿಸಿದರು. 25 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ಚರ್ಚೆಯಲ್ಲಿ ನೌಕರರ ಮೇಲೆ ಬರುತ್ತಿರುವ ದಾಳಿ, ದಬ್ಬಾಳಿಕೆ, ವಾಟರ್‌ಮ್ಯಾನ್‌ಗಳು ತಿಂಗಳ 30 ದಿವಸಗಳು ರಜೆಗಳು ಇಲ್ಲದೆ ಕೆಲಸ ನಿರ್ವಹಿಸುವ ಸ್ಥಿತಿಗಳು, ನೌಕರರ ಹಕ್ಕುಗಳನ್ನು ರದ್ದುಪಡಿಸಲು ಸದಸ್ಯತ್ವದ ಗುರಿ 45 ಸಾವಿರ ಮುಟ್ಟುವುದು, ಹೋರಾಟಗಳಲ್ಲಿ ಎಲ್ಲ ನೌಕರರು ತೊಡಗಿ ಹೋರಾಟ ಮುಂದುವರಿಸುವುದು, ಐಕ್ಯ ಹೋರಾಟಗಳಲ್ಲಿ ಹೆಚ್ಚಿನ ರೀತಿಯಲ್ಲಿ ಭಾಗವಹಿಸುವುದಾಗಿ ಅಭಿಪ್ರಾಯ ವ್ಯಕ್ತವಾಯಿತು.

ಅಯೋಗಗಳು:

ಮೂರು ಸಮಾನಾಂತರ ಆಯೋಗಗಳಲ್ಲಿ 3 ವಿಷಯಗಳ ಬಗ್ಗೆ ವಿವರವಾದ ಚರ್ಚೆ ನಡೆಸಲಾಯಿತು. ಒಂದನೇ ಅಯೋಗದಲ್ಲಿ "ಕೇಂದ್ರ ರಾಜ್ಯ ಸರಕಾರಗಳ ನೀತಿಗಳು ಮತ್ತು ನೌಕರರ ಮೇಲೆ ಅದರ ಪರಿಣಾಮಗಳು" ಎರಡನೇ ಆಯೋಗದಲ್ಲಿ "ಗ್ರಾಮ ಪಂಚಾಯಿತಿ ನೌಕರರ ಸಂಘಟನೆ" ಮೂರನೇ ಆಯೋಗದಲ್ಲಿ "ಎಸ್.ಎಂ. ಸ್ವಾಮಿ ವರದಿ ಮತ್ತು ಮುಂದಿನ ಬೇಡಿಕೆಗಳು" ವಿಷಯದ ಬಗ್ಗೆ ವರದಿಯೊಂದನ್ನು ಇಟ್ಟು ಚರ್ಚಿಸಲಾಯಿತು. ಎಲ್ಲ ಜಿಲ್ಲೆಯ ನೌಕರರು ಮೂರು ಆಯೋಗಗಳಲ್ಲಿ ಇರುವಂತೆ ಒಂದೊಂದು ಅಯೋಗದ ಚರ್ಚೆಯಲ್ಲಿ 143 ಜನ ನೌಕರರು ಭಾಗವಹಿಸಿದರು. ನಂತರ ಮೂರು ಅಯೋಗಗಳ ಚರ್ಚೆಯ ಅಂಶಗಳನ್ನು ಒಟ್ಟುಗೂಡಿಸಿ ಮುಖ್ಯ ಸಭಾಂಗಣದಲ್ಲಿ ಮಂಡಿಸಲಾಯಿತು. ಕೆಂದ್ರ ರಾಜ್ಯ ಸರಕಾರದ ಕಾರ್ಮಿಕ ವಿರೋದಿ ನೀತಿಗಳನ್ನು ಹಿಮ್ಮೆಟಿಸಲು, ನೌಕರರ 10 ಪ್ರಮುಖ ಬೇಡಿಕೆಗಳ ಬಗ್ಗೆ, ಎಲ್‌ಪಿಜಿ ನೀತಿಗಳ ವಿರುದ್ಧ ಐಕ್ಯ ಹೋರಾಟದಲ್ಲಿ ಪಾಲ್ಗೊಳ್ಳುವುದಾಗಿ ಬಂದ ಅಂಶಗಳನ್ನ ಸಂಘ ಅಂಗೀಕರಿಸಲಾಯಿತು.



ಕಾಂ. ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು

ನೂತನ ರಾಜ್ಯ ಸಮಿತಿ ಆಯ್ಕೆ:

71 ಜನರ ರಾಜ್ಯ ಸಮಿತಿಯನ್ನ ಆಯ್ಕೆ ಮಾಡಲಾಗಿದ್ದು, ಅದರಲ್ಲಿ 31 ಜನರ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. 3 ಜನ ಪದಾಧಿಕಾರಿಗಳನ್ನು ಖಾಲಿ ಬಿಡಲಾಗಿದೆ.

ಪದಾಧಿಕಾರಿಗಳ ಪಟ್ಟಿ

ಅದ್ಯಕ್ಷರು: **ಮಾರುತಿ ಮಾನ್ಪಡೆ**

ಉಪಾಧ್ಯಕ್ಷರು: **ವಿ.ಪಿ. ಕುಲಕರ್ಣಿ, ಎಮ್.ಬಿ. ನಾಡಗೌಡ, ಗೋಪಾಲಕೃಷ್ಣ ಅರಳಹಳ್ಳಿ, ಬಿ.ಐ. ಈಳಿಗೆರ – ಧಾರವಾಡ, ಗೈಬುಜೈನೆಖಾನ್ – ಬೆಳಗಾಂ, ಬೀಮಸಿ ಕಲಾದಗಿ – ಬಿಜಾಪುರ, ಪಿ.ಆರ್.ಭರತ್ – ಕೊಡಗು, ಪಾರ್ವತಿ – ಕಲಬುರಗಿ, ಜಾನಕಿ – ಚಾಮರಾಜನಗರ, ಮಹದೇವಪ್ಪ – ರಾಯಚೂರು, ಶಿವಕುಮಾರ್ – ಮಂಡ್ಯ.**

ಪ್ರಧಾನ ಕಾರ್ಯದರ್ಶಿ: **ಜಿ. ರಾಮಕೃಷ್ಣ**

ಖಜಾಂಚಿ: **ಆರ್.ಎಸ್. ಬಸವರಾಜ್ ಬಳ್ಳಾರಿ**

ಜಂಟಿ ಕಾರ್ಯದರ್ಶಿಗಳು: **ರೇಣುಕಾ ಪ್ರಸಾದ್, ಶಿವಾನಂದ ಕವಲಗಾ ಬಿ. ಕಲಬುರಗಿ, ನಟರಾಜ ಬೆಂಗಳೂರು ಗ್ರಾಮಾಂತರ, ಪ್ರದೀಪ್ ರಾಮನಗರ, ಟಿ.ಎಸ್. ದಿನೇಶ್, ಮೈಸೂರು, ಗಾಲಿಸಾಬ ಯಾದಗಿರಿ, ರಾಜಶೇಖರಗೌಡ ಬಳ್ಳಾರಿ, ಬಸವರಾಜ ಜಕ್ಕಮ್ಮನವರ ಗದಗ, ಸಯ್ಯದ್‌ಸಾಬ್ ಬಾಗಲಕೋಟೆ, ಜಗದೀಶ್ ಕೋಟೆ ಹಾವೇರಿ, ಕೆ.ಎಂ. ಉಮೇಶ್ ದಾವಣಗೆರೆ, ನಾಗೇಶ್ ತುಮಕೂರು, ಅಮರ ನಾರಾಯಣಪ್ಪ ಕೋಲಾರ, ಸಿದ್ಧರಾಜು ಚಾಮರಾಜನಗರ, ಪ್ರಶಾಂತ್ ಶಿವಮೊಗ್ಗ,.**


ನಿರ್ಣಯಗಳು

ಎಲ್ಲಾ ನೌಕರರಿಗೂ **EPMF** ಮುಖಾಂತರ ವೇತನ ಜಾರಿಗೆ, 18 ಸಾವಿರ ನೌಕರರನ್ನು ಅನುಮೋದಿಸಲು, 10 ವರ್ಷ ಸೇವೆ ಸಲ್ಲಿಸಿದ ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಗ್ರೇಡ್–2ರಲ್ಲಿ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡುವುದು ಮತ್ತು ಇತರೆ ಆರು ಬೇಡಿಕೆಗಳಿಗಾಗಿ ನವೆಂಬರ್ 16 ರಂದು ರಾಜ್ಯಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ಪ್ರತಿಭಟನೆಗೆ ಕರೆ ನೀಡಲಾಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು 12 ಪ್ರಮುಖ ಬೇಡಿಕೆಗಳಿಗಾಗಿ ಜನವರಿ 8–9 ರಂದು ನಡೆಯುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವ ನಿರ್ಣಯವನ್ನೂ ಕೈಗೊಳ್ಳಲಾಯಿತು.

●



ಅದ್ಯಕ್ಷರು: **ಮಾರುತಿ ಮಾನ್ಪಡೆ**



ಪ್ರಧಾನ ಕಾರ್ಯದರ್ಶಿ: **ಜಿ. ರಾಮಕೃಷ್ಣ**



ಖಜಾಂಚಿ: **ಆರ್.ಎಸ್. ಬಸವರಾಜ್**

ಜನಮ್ ನ "ತಥಾಗತ್"

ಪರ್ಯಾಯ ಸಂಸ್ಕೃತಿ ಪಯಣದಲ್ಲಿ ದೃಢವಾದ ಹೆಜ್ಜೆ

ಎಂ.ಜಿ. ವೆಂಕಟೇಶ



ಅಭಿವ್ಯಕ್ತಿ ಸ್ವಾತಂತ್ರ, ಮೇಲ್ಜಾತಿ ಮೇಲ್ವರ್ಗಗಳ ಶೋಷಣೆ, ಸತ್ಯದ ಹುಡುಕಾಟ, ಧರ್ಮ ಮತ್ತು ರಾಜಕೀಯದ ದುಷ್ಟ ಕೂಟ, ದೇಶದ ಆಂತರಿಕ ಸಮಸ್ಯೆಗಳಿಗೆ ವಿದೇಶಿ ಕೈವಾಡವೆಂದು ಹೊಣೆ ಮಾಡುವುದು ಹೀಗೆ ಹತ್ತಾರು ನಮ್ಮನ್ನು ಆವರಿಸಿ ಕಾಡುತ್ತಿರುವ ವಿಷಯಗಳನ್ನು ನಾಟಕ ರೂಪದಲ್ಲಿ ತರುವುದು ಯಾರಿಗಾದರೂ ದೊಡ್ಡ ಸವಾಲೇ. ಆದರೆ ಇದನ್ನು ಸಾಧ್ಯ ಮಾಡಿರುವ ರೀತಿಯಲ್ಲಿ ಝಗಮಗಿಸುವ ದೀಪಗಳಿಲ್ಲ. ಅದ್ದೂರಿ ರಂಗಸಜ್ಜಿಕೆ, ಹತ್ತಾರು ನಟರು, ಪುಟಗಟ್ಟಲೆ ಸಂಭಾಷಣೆ ಯಾವುದರ ಹಂಗೂ ಇಲ್ಲದೆ, ಕೆಲವೇ ನಟರು ಕೆಲವೇ ಪರಿಕರಗಳೊಂದಿಗೆ ನಿರ್ವಹಿಸಿದ ರೀತಿ ಪ್ರಶಂಸನೀಯ ಮತ್ತು ಅನುಕರಣೀಯ – ಇಷ್ಟೆಲ್ಲ ಪೀಠಿಕೆ ಸಮುದಾಯ ಕರ್ನಾಟಕ ಮತ್ತು ಭಾರತ ಜ್ಞಾನ ವಿಜ್ಞಾನ ಪರಿಷತ್‌ನ ಸಹ ಪ್ರಾಯೋಜಕತ್ವದಲ್ಲಿ ದೆಹಲಿಯ ಸುಪರಿಚಿತ ನಾಟ್ಯ ತಂಡ ಜನ ನಾಟ್ಯ ಮಂಚ್ ಅಭಿನಯಿಸಿದ ನಾಟಕ "ತಥಾಗತ್". ಇದರ ರಚನೆ ನಿರ್ದೇಶನ ಅಭಿಷೇಕ್ ಮಜುಂದಾರ್ ಮತ್ತು ಸಂಗೀತ ಎಂ.ಡಿ.ಪಲ್ಲವಿ. ಇಬ್ಬರೂ ಬೆಂಗಳೂರಿಗರು ಎಂಬುದು ವಿಶೇಷ. ರಂಗಶಂಕರದ ವಾರ್ಷಿಕ ನಾಟಕೋತ್ಸವದ ಭಾಗವಾಗಿ ಬೆಂಗಳೂರಿಗೆ ಬಂದ ಜನಮ್ ತಂಡ ಈ ನಾಟಕದ 14 ಪ್ರದರ್ಶನಗಳನ್ನು ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ನೀಡಿತು.

"ತಥಾಗತ್" ಎನ್ನುವುದು ಬುದ್ಧನ ಇನ್ನೊಂದು ಹೆಸರು. ಆ ಪದದ ಅರ್ಥ "ಎಲ್ಲವನ್ನು ತಿಳಿದವನು" ಹುಟ್ಟು ಸಾವುಗಳನ್ನು ಮೀರಿಸಿದವನು ಎಂದು. ಆದರೆ ಇನ್ನೊಂದು ಅರ್ಥದಲ್ಲಿ ಬಡವರ ದೀನ ದಲಿತರ ಮನದಲ್ಲಿರುವ ಅವರಿಗೆ ಕೈಗೆಟುಕುವ ದೇವರು. ಇದೊಂದು ಕಾಲ್ಪನಿಕ ಕತೆಯಾದರೂ ಅದರ ವ್ಯಾಪ್ತಿ ಮತ್ತು ಪ್ರಸ್ತುತತೆ ಸಾರ್ವಕಾಲಿಕವಾಗಿದೆ. ನಾಟಕದ ಕತೆ ಸ್ಥೂಲವಾಗಿ ಹೀಗಿದೆ. ಶಿಲ್ಪಿಯು ತಥಾಗತ್ ಮೂರ್ತಿಯನ್ನು ಕಪ್ಪುಶಿಲೆಯಲ್ಲಿ ಮೂರು ಬೆರಳಿಲ್ಲದೆ ನಿರ್ಮಿಸಿರುವುದು ಆ ದೇಶದ ರಾಜನ ಆಕ್ರೋಶಕ್ಕೆ ಗುರಿಯಾಗುತ್ತದೆ. ಅಮೃತ ಶಿಲೆಯಲ್ಲಿ ಮೂರ್ತಿಯನ್ನು ನಿರ್ಮಿಸದೇ ಇರುವುದರಿಂದ, ಮತ್ತು ಬುದ್ಧನನ್ನು ವಿಕಾರಗೊಳಿಸುವುದರಿಂದ ಶಿಲ್ಪಿಗೆ ಮರಣದಂಡನೆ ವಿಧಿಸಿರುತ್ತಾನೆ. ಮರಣ ದಂಡನೆಯನ್ನು ರದ್ದು ಪಡಿಸಲು ಶಿಲ್ಪಿಯ ಹೆಂಡತಿ ದಾಸಿ ಮತ್ತು ರಾಣಿ ವಾದಿಸುತ್ತಾರೆ. ಅವರು ರಾಜನ ದುರ್ವತನೆಯನ್ನು ಖಂಡಿಸಿದಾಗ ರಾಜ ಧರ್ಮ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವುದಾಗಿ ತಿಳಿಸುತ್ತಾನೆ. ಅದರ ಷರತ್ತಿನ ಪ್ರಕಾರ ವಾದದಲ್ಲಿ ಸೋತರೆ ಶಿಲ್ಪಿಯ ಜತೆಯಲ್ಲೇ ಅವನ ಹೆಂಡತಿಗೆ ಮರಣ ದಂಡನೆ ಮತ್ತು ರಾಣಿಯನ್ನು ಅರಮನೆಯಿಂದ ಹೊರ ಹಾಕುವುದಾಗಿ ತಿಳಿಸಿದಾಗ ರಾಣಿ ಅವನ ವರ್ತನೆಯನ್ನು ಖಂಡಿಸಿ ಅರಮನೆಯಿಂದ ಹೊರಬಂದು ದಾಸಿಯ ಸಂಗಡ ಇರಲು ಹೊರಡುತ್ತಾಳೆ.

ರಾಜ ಮತ್ತು ಧರ್ಮ ಗುರುಗಳು ಬಂಧನದಲ್ಲಿರುವ ಶಿಲ್ಪಿಯನ್ನು ಕರೆಸಿ ವಿಚಾರಣೆ ನಡೆಸುತ್ತಾರೆ. ಈ ಸಂದರ್ಭದಲ್ಲಿ ಸಂಭಾಷಣೆ ಹರಿತವಾಗಿದ್ದು ಪ್ರತಿಯೊಂದು ವಾಕ್ಯವೂ ಅನೇಕಾನೇಕ ಹೊಳಹುಗಳನ್ನು ನೀಡುತ್ತದೆ. ಉದಾಹರಣೆಗೆ ಶಿಲ್ಪಿಗೆ ಧರ್ಮಗುರು ತಥಾಗತ್ ಹೇಗಿರಬಹುದೆಂದು ನಿನ್ನ ಕಲ್ಪನೆಯೆಂದಾಗ ಅವನು ನನ್ನ ಹಾಗೆ ನನ್ನ ಮಕ್ಕಳ ಹಾಗೆ ಇರಬಹುದು ಎನ್ನುತ್ತಾನೆ. ಕರಿಯ ಮತ್ತು ಮೂರು ಬೆರಳಿಲ್ಲದೆ ನಿರ್ಮಿಸಿದ್ದಕ್ಕೂ ತನ್ನದೇ ವಿವರಣೆ ಕೊಡುತ್ತಾನೆ. ಅದೇ ಶ್ರೀರಾಮಚಂದ್ರ ಹೇಗಿರಬಹುದೆಂಬ ಕಲ್ಪನೆಗೆ ಅವನು ಮಹಾರಾಜರ ಹಾಗಿರಬಹುದು ಎನ್ನುತ್ತಾನೆ. ರಾಜ ವಾದದಲ್ಲಿ ಸೋಲುವ ಸೂಚನೆ ಬಂದಾಗ ಧರ್ಮಗುರು ಅವನಿಗೆ ಗಟ್ಟಿಯಾಗಿ ಅಳಲು ಹೇಳುತ್ತಾನೆ. ಕೊನೆಗೆ ವಿಧಿಯಿಲ್ಲದೇ ಮರಣ ದಂಡನೆ ರದ್ದುಪಡಿಸಿ ವಿದೇಶ ಯಾತ್ರೆಗೆ ಹೊರಡುತ್ತಾನೆ. ರಾಜನ ಜಾಗದಲ್ಲಿ ದಾಸಿ ನಿಲ್ಲುತ್ತಾಳೆ. ರಾಣಿ ಮತ್ತು ದಾಸಿ ರಾಜನನ್ನು ಏಕವಚನದಲ್ಲಿ ಹೆಸರು ಹೇಳಿ ಸಂಭೋದಿಸುತ್ತಾರೆ. ಈ ನಾಟಕದ ಹೆಗ್ಗಳಿಕೆ ಇರುವುದು ಅದರಲ್ಲಿ ಅಡಕವಾಗಿರುವ ಸಂಭಾಷಣೆಯಲ್ಲಿ ಮತ್ತು ಅಭಿನಯಿಸಿದ ರೀತಿ. ಅದರಲ್ಲಿರುವ ಅನೇಕ ವಿಚಾರಗಳನ್ನು ಒಂದೊಂದೇ ಹೆಕ್ಕಿ ತೆಗೆದರೆ ಅವೇ ಪ್ರತ್ಯೇಕ ನಾಟಕಗಳಾಗುತ್ತದೆ. ಬಯಲು ಪ್ರದೇಶಗಳಲ್ಲಿ ನಾಟಕ ಪ್ರದರ್ಶನಗೊಂಡರೂ ಅದು ಬೀದಿ ನಾಟಕದ ರೂಪಕ್ಕಿಂತ ಹೆಚ್ಚು ಆಪ್ತ ರಂಗಭೂಮಿಗೆ ಹೊಂದುತ್ತದೆ. ನಾಟಕದಲ್ಲಿನ ಎಂ.ಡಿ. ಪಲ್ಲವಿಯವರ ಸಂಗೀತ ನಾಟಕಕ್ಕೆ ಅಪೂರ್ವ ಶೋಭೆ ನೀಡಿದೆ. ಪುರುಷೋತ್ತಮ್(ರಾಜ), ಸುಧನ್ವ (ಮಂತ್ರಿ) ಕೋಮಿತಾ(ದಾಸಿ), ಹಾಗೂ ಶಿಲ್ಪಿ, ರಾಣಿ ಪಾತ್ರದ ನಟ/ನಟಿಯರ ಅಭಿನಯ ದೀರ್ಘಕಾಲ ಮನಸ್ಸಿನಲ್ಲಿ ನಿಲ್ಲುತ್ತದೆ.

ಇಂತಹ ವಸ್ತುವನ್ನು ಆಧರಿಸಿ ಅದನ್ನು ಮನೋಜ್ಞವಾಗಿ ಮತ್ತು ಸಮಕಾಲೀನವಾಗಿಸುವುದು ಅತ್ಯಂತ ಚಾಲೆಂಜಿಂಗ್ ಆದ ವಿಷಯ. ನಾಟಕವನ್ನು ಕಟ್ಟಿರುವ ಪರಿ, ದೃಶ್ಯ ಸಂಯೋಜನೆ ಎಲ್ಲರಲ್ಲೂ ಅಭಿಷೇಕ್ ಮುಜುಂದಾರರು ಪ್ರೇಕ್ಷಕರನ್ನು ಎಚ್ಚರಿಸುತ್ತಲೆ ಹೃದಯವನ್ನು ಮುಟ್ಟುತ್ತಾರೆ. ಇಂತಹ ಗಹನವಾದ ನಾಟಕವನ್ನು 30–35 ನಿಮಿಷದೊಳಗೆ ಕಟ್ಟಿರುವುದು ಮತ್ತು ವಾಚ್ಯವಾಗದಂತೆ ನೋಡಿಕೊಂಡಿರುವುದು ಅವರ ಕಲಾವಂತಿಕೆಗೆ ಸಾಕ್ಷಿಯಾಗಿದೆ.

ಈ ಪ್ರದರ್ಶನವನ್ನು ನೋಡಿದ ನಂತರ ನಮ್ಮಲ್ಲಿ ಮೂಡುವ ಪ್ರಶ್ನೆ ಈ ನಾಟಕವನ್ನು ಕನ್ನಡಕ್ಕೆ ಅಳವಡಿಸಿದರೆ ಪರಿಣಾಮ ಹೇಗಿರಬಹುದು. ಆ ಪ್ರಯತ್ನ ಸಫಲವಾದಗ ಜನ ಸಂಸ್ಕೃತಿ ಆಶಯ ಸಾರ್ಥಕವೆನಿಸುತ್ತದೆ. ನಾಟಕದ ವಸ್ತು ಪರ್ಯಾಯ ಸಂಸ್ಕೃತಿಯ ನಿರ್ಮಾಣ ದಾರಿಯಲ್ಲಿ ಉತ್ತಮ ಕೊಡುಗೆ ಮತ್ತು ಧೃಢವಾದ ಹೆಜ್ಜೆ. ●

ಕಟ್ಟಡ ಕಾರ್ಮಿಕರ 9ನೇ ಅಖಿಲ ಭಾರತ ಸಮ್ಮೇಳನ ನಿರ್ಧಾರ............ ಪುಟ 16 ರಿಂದ

ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡಿದೆ. CWFI ನಿರ್ಣಯ ಸಮಿತಿ ಸಂಚಾಲಕ ಉಮಮಹೇಶ್ವರ ಅವರು ಮಂಡಿಸಿದ ನಿರ್ಣಯವನ್ನು ರಾಜಸ್ಥಾನದ ಬನ್ವರ್ ಸಿಂಗ್ ಅನುಮೋದಿಸಿದರು. ಇದಲ್ಲದೆ ನವೆಂಬರ್ 26 ರಿಂದ ದೆಹಲಿಯಲ್ಲಿ ರೈತ ಸಂಘಟನೆಗಳು ನಡೆಸುತ್ತಿರುವ 'ಕಿಸಾನ್ ಮಾರ್ಚ್' ಗೆ, ಹರಿಯಾಣದ ಸಾರಿಗೆ ನೌಕರರು ನಡೆಸುತ್ತಿರುವ ಅನಿರ್ಧಿಷ್ಟ ಮುಷ್ಕರಗಳಿಗೆ ಬೆಂಬಲವಾಗಿ; ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಹಾಗೂ ಸಾಮಾಜಿಕ ಬಹಿಷ್ಕಾರಗಳ ವಿರುದ್ದ, ತ್ರಿಪುರ, ಪ.ಬಂಗಾಳ ಗಳಲ್ಲಿ ಎಡರಂಗಗಳ ಕಾರ್ಯಕರ್ತರ ಮೇಲೆ ನಡೆಯುತ್ತಿರುವ ನಿರಂತರ ದಾಳಿಗಳನ್ನು ಖಂಡಿಸಿ ಸಮ್ಮೇಳನ ನಿರ್ಣಯಗಳನ್ನು ಕೈಗೊಂಡಿದೆ.

ಕೊನೆಯಲ್ಲಿ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಸಮಾರೋಪ ಭಾಷಣ ಮಾಡಿದರು. ಇದಲ್ಲದೆ ಮೂರು ದಿನಗಳ ಸಮ್ಮೇಳನದಲ್ಲಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಗಳಾದ ಸ್ವದೇಶ ದೇವ್ರಾಯ್, ಇಲಾಮ ರಾಮ್ ಕರೀಂ, ದೀಪಕ್ ದಾಸ್ ಗುಪ್ತಾ ಹಾಜರಿದ್ದು ಮಾರ್ಗದರ್ಶನ ನೀಡಿದರು. ಇದಲ್ಲದೆ ಮಹಾರಾಷ್ಟ ಸಿಐಟಿಯು ರಾಜ್ಯ ಅಧ್ಯಕ್ಷರಾದ ಡಾ ಕರಾಡೆ ಮತ್ತು ಮಾಜಿ ಶಾಸಕರು ಮತ್ತು ಸೋಲಾಪುರದಲ್ಲಿ 10 ಸಾವಿರ ಮನೆಗಳ ನಿರ್ಮಾಣದ ರುವಾರಿಯೂ ಆದ ಆದಂ ಮಾಸ್ಟರ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಶೇಕ್ ಮೊದಲಾದವರು ಮಾತನಾಡಿದರು. ಅಕ್ಟೋಬರ್ 28 ರ ಸಂಜೆ ಸಾವಿರಾರು ಕಾರ್ಮಿಕರ ಮೆರವಣಿಗೆ ಮತ್ತು ಬಹಿರಂಗ ಸಭೆ ಮೂಲಕ ಸಮ್ಮೇಳನ ಸಮಾರೋಪಗೊಂಡಿತು.

ಸಮ್ಮೇಳನದಲ್ಲಿ ಇಂಡೋನೇಷ್ಯಾ ಕಟ್ಟಡ ಕಾರ್ಮಿಕ ಸಂಘದ ಪ್ರತಿನಿಧಿ ಇರ್ಫಾನ್ ಇಬ್ರಾಹಿಂ ನೇತೃತ್ವದ ಎರಡು ಜನ ಮುಖಂಡರ ನಿಯೋಗ ಭಾಗವಹಿಸಿತ್ತು ಇದಲ್ಲದೆ ಬ್ರೆಜಿಲ್ ನಿಂದ ಗ಺ಖಿಃ ಅಧ್ಯಕ್ಷರು ಸೇರಿದಂತೆ ಹಲವರು ಶುಭಕೋರಿ ಸಂದೇಶ ಕಳುಹಿಸಿದ್ದರು.

ಸಮ್ಮೇಳನ ಕೈಗೊಂಡ ಪ್ರಮುಖ ತೀರ್ಮಾನಗಳು

1. 2019 ಜನವರಿ 8 ಮತ್ತು 9 ರಂದು ಕಾರ್ಮಿಕ ಸಂಘಟನೆಗಳ ನಾಯಕತ್ವದಲ್ಲಿ ನಡೆಯುತ್ತಿರುವ ಎರಡು ದಿನಗಳ ಸಾರ್ವತ್ರಿಕ ಮುಷ್ಕರ ಯಶಸ್ವಿಗೆ ಪೂರಕವಾಗಿ


- ನವೆಂಬರ್ 19–24 ರವರೆಗೆ ವಾರಚರಣೆ ಮೂಲಕ ಪೋಸ್ಟರ್, ಕರಪತ್ರ, ಗೋಡೆಬರಹ ಮೊದಲಾದವುಗಳ ಮೂಲಕ ಮುಷ್ಕರದ ಬೇಡಿಕೆಗಳನ್ನು ಪ್ರಚಾರ ಮಾಡುವುದು
- ನವೆಂಬರ್ 30 ರಂದು ದೇಶದ್ಯಾಂತ 'ಬ್ಯಾಡ್ಜ್" ದಿನಾಚರಣೆ ಮೂಲಕ ಪ್ರಚಾರ
- ಡಿಸೆಂಬರ್ 17 ದೇಶಾದ್ಯಾಂತ 'ಮೋದಿ ಪ್ರತಿಕೃತಿ ದಹನ' ಮಾಡುವುದು
- 2019 ಜನವರಿ 2 ಬೀದಿ ಬದಿ ಸಭೆಗಳ ಮೂಲಕ ಮುಷ್ಕರದ ಪ್ರಚಾರ ನಡೆಸುವುದು
- ಐದು ರಾಜ್ಯಗಳ ಚುನಾವಣೆಯಲ್ಲಿ 'ಬಿಜೆಪಿ ಮತ್ತದರ ಮಿತ್ರ ಪಕ್ಷಗಳನ್ನು ಸೋಲಿಸಲು" ಶ್ರಮಿಸುವುದು
- ಮತ್ತು ಆರ್.ಎಸ್.ಎಸ್. ನೇತೃತ್ವದ 'ಕೋಮುವಾದಿ ಶಕ್ತಿಗಳನ್ನು ಸೋಲಿಸಿ, ದೇಶವನ್ನು ಉಳಿಸಿ' ಎನ್ನುವ ಘೋಷಣೆ ಆಧಾರದಲ್ಲಿ ವ್ಯಾಪಕ ಪ್ರಚಾರ ನಡೆಸುವುದು

2. ಸಂಘಟನಾ ತೀರ್ಮಾನಗಳು :

- ಮುಂದಿನ ಸಮ್ಮೇಳನದ ಹೊತ್ತಿಗೆ ಶೇ 25 ರಷ್ಟು ಸದಸ್ಯತ್ವ ಹೆಚ್ಚಳ
- ರೈತ ಹಾಗೂ ಕೂಲಿಕಾರರ ಸಂಘಗಳು ಮತ್ತು ಜನಾಧಿಕಾರ, ಜನಾಂದೋಲನ (ಜಿಜಾ) ನಡೆಸುವ ಎಲ್ಲಾ ಹೋರಾಟಗಳಿಗೆ ಸೌಹಾರ್ದ ಬೆಂಬಲ
- ಕನಿಷ್ಟ 6 ತಿಂಗಳಿಗೊಮ್ಮೆ ಪ್ರತಿ ರಾಜ್ಯದಲ್ಲಿ ರಾಜಕೀಯ ಶಿಕ್ಷಣ ತರಬೇತಿಗಳ ಆಯೋಜನೆ
- ದಕ್ಷಿಣ ಭಾರತ ರಾಜ್ಯಗಳ ಸಮನ್ವಯ ಸಮಿತಿ ರಚಿಸುವುದು ಮತ್ತು ಉತ್ತರ, ಪಶ್ಚಿಮ ಪ್ರಾದೇಶಿಕ ಸಮಿತಿಗಳನ್ನು ಕ್ರಿಯಾಶೀಲಗೊಳಿಸುವುದು
- ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳ ಕುರಿತಾದ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುವುದು
- ಮುಂದಿನ ಆರು ತಿಂಗಳೊಳಗೆ ಎಲ್ಲಾ ರಾಜ್ಯಗಳಲ್ಲಿ 'ಮಹಿಳಾ ಉಪ ಸಮಿತಿ' ರಚಿಸುವುದು
- ವಲಸೆ ಕಾರ್ಮಿಕರನ್ನು ವ್ಯವಸ್ಥಿತವಾಗಿ ಸಂಘಟಿಸುವುದು ಮತ್ತು ಎಲ್ಲಾ ರಾಜ್ಯಗಳಲ್ಲಿ ಅವರಿಗೆ ಕಲ್ಯಾಣ ಮಂಡಳಿಯಲ್ಲಿ ಹೆಸರನ್ನು ನೋಂದಾಯಿಸಿ ಅವರಿಗೆ ಸೌಲಭ್ಯಗಳು ಸಿಗುವಂತೆ ಕ್ರಮವಹಿಸುವುದು
- ಯುವ ಕಟ್ಟಡ ಕಾರ್ಮಿಕರ ಪ್ರಶ್ನೆಗಳನ್ನು ಎಲ್ಲಾ ಸಮಿತಿಗಳು ಕೈಗೆತ್ತಿಕೊಳ್ಳುವುದು. ●

ಮಾತೆಂದರೆ ಇದು

"ತತ್ವವು ಜನಮನವನ್ನು ಸ್ವಾಧೀನ
ಪಡಿಸಿಕೊಂಡಾಗ, ಅದೊಂದು ಭೌತಿಕ
ಶಕ್ತಿಯಾಗಿ ಮಾರ್ಪಡುತ್ತದೆ.
ತತ್ವವು ಕ್ರಾಂತಿಕಾರಿಯಾದಾಗ ಅದು
ಜನರ ಮೂಲಕ ವರ್ತಿಸತೊಡಗುತ್ತದೆ".
– *ಕಾರ್ಲ್ ಮಾರ್ಕ್ಸ್*



ಬೆಳ್ತಂಗಡಿ ಮಲೆಕುಡಿಯರ ನೆಲೆಗೆ ಜಿಲ್ಲಾಡಳಿತ ಭೇಟಿ

ಶೇಖರ್



ಕರ್ನಾಟಕದ ಸ್ಥಳೀಯ ಆದಿವಾಸಿ ಸಮುದಾಯವಾಗಿರುವ ಮಲೆಕುಡಿಯ ಸಮುದಾಯ ಅತೀ ಹೆಚ್ಚು ವಾಸವಾಗಿರುವುದು ಪಶ್ಚಿಮ ಘಟ್ಟದ ಸುಂದರವಾದ ಪರಿಸರದ ನಡುವೆ. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಪ್ರದೇಶದಲ್ಲಿ. ಜಿಲ್ಲೆಯ ವಿವಿಧ ಕಡೆಗಳಲ್ಲಿ ವಿಸ್ತರಿಸಿಕೊಂಡಿದ್ದರೂ ದಟ್ಟವಾದ ನೆಲೆ ಇರುವುದು ನೆರಿಯ ಪ್ರದೇಶದಲ್ಲಿ. ತಮ್ಮದೇ ವಿಶಿಷ್ಟ ಸಂಸ್ಕೃತಿ, ಬದುಕಿನ ಕ್ರಮಗಳನ್ನು ಹೊಂದಿರುವ ಮಲೆಕುಡಿಯ ಸಮುದಾಯವೂ ಆಳುವ ಸರಕಾರ, ಸ್ಥಳೀಯ ಭೂಮಾಲೀಕ, ಪಾಳೇಗಾರಿ ಶಕ್ತಿಗಳ ಒತ್ತಡದಲ್ಲಿ ತತ್ತರಿಸುತ್ತಿದೆ. ಮೂಲ ನೆಲೆಯಿಂದಲೇ ಹೊರದಬ್ಬಿಸಿಕೊಳ್ಳುವ ಅತಂತ್ರ ಸ್ಥಿತಿಯೂ ಒದಗಿದೆ. ಈ ಸಮುದಾಯದ ನೆಲೆಗಳು ಹಲವಾರು ಮೂಲಸಮಸ್ಯೆಗಳಿಂದ ಕೂಡಿದ್ದು ಅವುಗಳ ಪರಿಹಾರಕ್ಕೆ ಸಂಘಟಿತ ಪ್ರಯತ್ನ ನಡೆದಿದೆ. ಸಮುದಾಯದಲ್ಲಿಯೂ ಜಾಗೃತಿ ಬೆಳೆದಿದೆ. ಇದರ ಭಾಗವಾಗಿ ಜಿಲ್ಲಾ ಆಡಳಿತ ಜನತೆಯ ನಡುವೆ ಬಂದು ಸಮಸ್ಯೆಗಳನ್ನು ಖುದ್ದಾಗಿ ಆಲಿಸಿ ಪರಿಹರಿಸುವ ಪ್ರಯತ್ನ ನಡೆದಿದೆ.

‘ಅರಣ್ಯದ ನಡುವೆ ವಾಸಿಸುತ್ತಿರುವ ಆದಿವಾಸಿಗಳ ಕಾಲೋನಿ ಬಂಜಾರುಮಲೆಗೆ ಎಲ್ಲ ರೀತಿಯ ಮೂಲಭೂತ ಸೌಲಭ್ಯಗಳನ್ನೂ ಒದಗಿಸಲು ಪ್ರಯತ್ನಿಸಲಾಗುವುದು. ಸರಕಾರ ಈ ಪ್ರದೇಶದ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ರೂಪಿಸಿದೆ. ಇವು ಒಂದೊಂದಾಗಿ ಅನುಷ್ಟಾನಗೊಳ್ಳುತ್ತಿದ್ದು ಉಳಿದವುಗಳು ಸ್ವಲ್ಪ ತಡವಾದರೂ ಕಾರ್ಯರೂಪಕ್ಕೆ ಬರಲಿದೆ ಅವುಗಳನ್ನು ಸಾಧ್ಯವಾದಷ್ಟು ವೇಗವಾಗಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಲಾಗುವುದು’ ಎಂದು ಜಿಲ್ಲಾಧಿಕಾರಿ ಸಸಿಕಾಂತ್ ಸೆಂದಿಲ್ ಅವರು ಹೇಳಿದರು.

ಅವರು ನೆರಿಯ ಗ್ರಾಮದ ಅರಣ್ಯದ ನಡುವೆ ವಾಸಿಸುತ್ತಿರುವ ಆದಿವಾಸಿಗಳ ಕಾಲೋನಿ ಬಾಂಜಾರು ಮಲೆಗೆ ಉನ್ನತ ಅಧಿಕಾರಿಗಳ ತಂಡದೊಂದಿಗೆ 2018 ಅಕ್ಟೋಬರ್ 10 ರಂದು ಬುಧವಾರ ಭೇಟಿ ನೀಡಿದ್ದರು. ಈ ಪ್ರದೇಶದ ಜನರ ಸಮಸ್ಯೆಗಳನ್ನು ಆಲಿಸಿದ ಬಳಿಕ ಡಿ.ಸಿ. ಮೇಲಿನಂತೆ ಹೇಳಿದರು. ಜಿಲ್ಲಾಧಿಕಾರಿಯವರ ಮುಂದೆ ತಮ್ಮ ಕಾಲೊನಿಯ ಸಮಸ್ಯೆಗಳನ್ನು ತೆರೆದಿಟ್ಟ ಇಲ್ಲಿನ ನಿವಾಸಿಗಳು ‘ನಮ್ಮ ಹಾಡಿಗೆ ಇನ್ನೂ ಸರಿಯಾದ ರಸ್ತೆಯಿಲ್ಲ, ಈ ಆಧುನಿಕ ಯುಗದಲ್ಲಿಯೂ ವಿದ್ಯುತ್ ಇಲ್ಲದೆ ನಾವು ಬದುಕುತ್ತಿದ್ದೇವೆ, ಕುಡಿಯುವ ನೀರು, ಪಡಿತರ ವ್ಯವಸ್ಥೆ, ಆರೋಗ್ಯ ತಪಾಸಣೆಗೆ ವ್ಯವಸ್ಥೆಯಿಲ್ಲ, ತಮ್ಮ ಜಾಗವನ್ನು ಸರಕಾರದ ಜಮೀನು ಎಂದು ನ್ಯಾಯಾಲಯದಲ್ಲಿ ಸರಕಾರ ಧಾವೆ ಹಾಕಿ ಕುಳಿತಿದೆ. ಆದರೆ ನ್ಯಾಯಾಲಯಕ್ಕೆ ಅಲೆಯಲು ನಮಗೆ ಶಕ್ತಿಯಿಲ್ಲ ನಮ್ಮ ಜಾಗದ ಆರ್.ಟಿ.ಸಿ ಸಿಗುತ್ತಿಲ್ಲ. ಬಂದವರೆಲ್ಲರೂ ಆಶ್ವಾಸನೆಗಳನ್ನು ನೀಡುತ್ತಿದ್ದಾರೆ. ಆದರೆ ಮೂಲಭೂತ ಸಮಸ್ಯೆಗಳಿಗೆ ಮಾತ್ರ ಪರಿಹಾರ ಸಿಗುತ್ತಿಲ್ಲ’ ಎಂದು ತಮ್ಮ ಅಳನ್ನು ತೋಡಿಕೊಂಡರು. ಜನರ ಸಮಸ್ಯೆಗಳನ್ನು ತಾಳ್ಮೆಯಿಂದ ಒಂದೊಂದಾಗಿ ಆಲಿಸಿದ ಜಿಲ್ಲಾಧಿಕಾರಿಯವರು ತಮಗೆ ಸಾಧ್ಯವಾದ ರೀತಿಯಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ಕಾಣಲು ಪ್ರಯತ್ನಿಸುವುದಾಗಿ, ಆದರೆ ಹಂತಹಂತವಾಗಿ ಎಲ್ಲವನ್ನೂ ಪರಿಹರಿಸಬಹುದಾಗಿದೆ’ ಎಂದು ಅವರು ಭರವಸೆ ನೀಡಿದರು.

ರಸ್ತೆಗೆ 2.75 ಕೋಟಿ ಪ್ರಸ್ತಾವನೆ:

ಇದೀಗ ಬಾಂಜಾರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಾಲೋನಿಯ ಒಳಗಿನ ರಸ್ತೆಗಳು ಬಹುತೇಕ ಕಾಂಕ್ರಿಟೀಕರಣವಾಗಿದೆ. ಉಳಿದ ರಸ್ತೆಗಳ ಕಾಂಕ್ರಿಟೀಕರಣಕ್ಕೆ ವ್ಯವಸ್ಥೆ ಮಾಡಲಾಗುವುದು ಎರಡು ಕಿರು ಸೇತುವೆಗಳಿಗೆ ಒಂದು ಕೋಟಿ ರೂ ಪ್ರಸ್ತಾವನೆಯನ್ನು ಈಗಾಗಲೆ ಸಲ್ಲಿಸಲಾಗಿದೆ. ಮುಖ್ಯ ರಸ್ತೆಗೆ 2.75 ಕೋಟಿಯ ಪ್ರಸ್ತಾವನೆಯನ್ನೂ ಸಲ್ಲಿಸಲಾಗಿದ್ದು ಇದು ಸರಕಾರದ ಮಟ್ಟದಲ್ಲಿದ್ದು ಅಂಗೀಕಾರಕ್ಕೆ ಮಂಡಿಸಲಾಗಿದೆ ಎಂಬುದು ಜಿಲ್ಲಾಧಿಕಾರಿಗಳ ವಿವರಣೆ. ಈಗ ಇರುವ ರಸ್ತೆ ತುಂಬಾ ಸುತ್ತಿ ಬಳಸಿ ಇರುವುದಾಗಿದ್ದು ಪರ್ಯಾಯವಾಗಿ ನೆರಿಯ–ಕಾಟಾಜೆ–ಮೂಲಕವಾಗಿ ಏನಪೋಯ ಎಸ್ಟೇಟಿನ ಒಳಗೆ ಬರುವ ಕಚ್ಚಾರಸ್ತೆಯಿದ್ದು ಇದು ಹತ್ತಿರದ ರಸ್ತೆಯಾಗಿದೆ. ಇದರಲ್ಲಿ ಸುಮಾರು ಮೂರು ಕಿ.ಮೀ ರಸ್ತೆ ಖಾಸಗಿ ಎಸ್ಟೇಟುಗಳ ಮೂಲಕ ಹಾದು ಬರುತ್ತಿದ್ದು ಅದರ ಬಗ್ಗೆ ಪರಿಶೀಲಿಸಿ ಮಂಜೂರುಗೊಳಿಸಿದರೆ ತುಂಬಾ ಪ್ರಯೋಜನವಾಗಲಿದೆ’ ಎಂಬುದು ಜನರ ಆಗ್ರಹ. ಈಬಗ್ಗೆ ಕೂಡಲೇ ಸರ್ವೆ ನಡೆಸಿ ಇದರಲ್ಲಿ ಖಾಸಗಿ ಜಾಗ ಎಷ್ಟು ಬರುತ್ತದೆ ಎಂದು ಪರಿಶೀಲಿಸಿ ಅವರೊಂದಿಗೆ ಮಾತುಕತೆ ನಡೆಸಿ ಅವರು ಒಪ್ಪಿಗೆ ನೀಡಿದರೆ ಈಗ ಸಲ್ಲಿಕೆಯಾಗಿರುವ ಪ್ರಸ್ತಾವನೆಯನ್ನು ಈ ರಸ್ತೆಗೆ ಮಾರ್ಪಡಿಸಲು ಪ್ರಯತ್ನಿಸುತ್ತೇನೆ ಈ ಬಗ್ಗೆ ಸರಕಾರಕ್ಕೆ ಬರೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂಬುದು ಜಿಲ್ಲಾಧಿಕಾರಿಗಳ ಭರವಸೆ.

ವಿದ್ಯುತ್ ಯೋಜನೆಗೆ 65 ಲಕ್ಷ ಮಂಜೂರು:

ಬಾಂಜಾರು ಮಲೆ ಕಾಲೊನಿಯ ಎಲ್ಲ 49 ಮನೆಗಳಿಗೂ ವಿದ್ಯುತ್ ಸಂಪರ್ಕ ಕಲ್ಪಸಲು ಈಗಾಗಲೆ 65 ಲಕ್ಷ ರೂ ಮಂಜೂರಾಗಿದ್ದು ಟೆಂಡರ್ ಹಂತದಲ್ಲಿದೆ. ಸೌಭಾಗ್ಯ ಯೋಜನೆಯ ಅಡಿಯಲ್ಲಿ ಇದಕ್ಕೆ ಅಕ್ಟೋಬರ್ ಕೊನೆಯ ಒಳಗೆ ಟೆಂಡರ್ ಆಗಲಿದೆ. ಇದರಲ್ಲಿ ಮೂರು ಟಿ.ಸಿ ಗಳೂ ಬರಲಿದ್ದು ಈ ಮೂಲಕ ಈ ಪ್ರದೇಶದ ಎಲ್ಲರಿಗೂ ವಿದ್ಯುತ್ ಲಭಿಸಲಿದೆ ಎಂದು ಮೆಸ್ಕಾಂ ಅಧಿಕಾರಿ ಶಿವಶಂಕರ್ ತಿಳಿಸಿದರು. ಇದಕ್ಕೆ ಗ್ರಾಮಸ್ಥರು ‘ಸಾಧ್ಯವಾದರೆ ಈ ಯೋಜನೆಯನ್ನು ಪ್ರಸ್ತಾವಿತ ಹೊಸ ರಸ್ತೆಯ ಮೂಲಕವಾಗಿ ಮಾಡುವಂತೆ’ ವಿನಂತಿಸಿದರು.

ಕುಡಿಯುವ ನೀರಿಗಾಗಿ ಇಲ್ಲಿನ ಜನರು ತೊರೆಗಳ ನೀರನ್ನೇ ಅವಲಂಬಿಸಿದ್ದು ಬೇಸಗೆಯಲ್ಲಿ ನೀರಿನ ಕೊರತೆ ಎದುರಾಗುತ್ತಿದೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಂತೆ ಜನರು ವಿನಂತಿಸಿದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿಯವರು ಕೂಡಲೇ ಇದಕ್ಕೆ ಅಗತ್ಯ ಕ್ರಿಯಾಯೋಜನೆಯನ್ನು ತಯಾರಿಸಿ ಗ್ರಾಮ ಪಂಚಾಯತು ಮೂಲಕವಾಗಿ ಜಿಲ್ಲಾಪಂಚಾಯತಿಗೆ ಸಲ್ಲಿಸುವಂತೆ ಸೂಚಿಸಿದರು. ಇದನ್ನು ಆಧ್ಯತೆಯಲ್ಲಿ ಪರಿಶೀಲಿಸುವಂತೆ ಜಿ.ಪಂ ಕಾರ್ಯನಿರ್ವಹಣಾಧಿಕಾರಿಯವರಿಗೆ ಸೂಚಿಸಿದರು. ಮೊಬೈಲ್ ಪಡಿತರ ವ್ಯವಸ್ಥೆಯನ್ನು ಆರಂಭಿಸುವಂತೆಯೂ ಜನರು ಬೇಡಿಕೆ ಸಲ್ಲಿಸಿದರು. ಈ ಬಗ್ಗೆ ಆಹಾರ ಇಲಾಖೆಯೊಂದಿಗೆ ಮಾತುಕತೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಅದೇ ರೀತಿ ಮೊಬೈಲ್ ಆರೋಗ್ಯ ಘಟಕದವರೂ ವಾರಕ್ಕೊಮ್ಮೆಯಾದರೂ ಬಂದು ಇಲ್ಲಿ ಆರೋಗ್ಯ ತಪಾಸಣೆ ನಡೆಸುವಂತೆ ಅವರು ಸೂಚಿಸಿದರು.

ತಾಂತ್ರಿಕ ಕಾರಣದಿಂದಾಗಿ ಇಲ್ಲಿನ ನಿವಾಸಿಗಳಿಗೆ ಆರ್.ಟಿ.ಸಿ ಸಿಗುತ್ತಿಲ್ಲ ಎಂಬ ವಿಚಾರವನ್ನು ಜಿಲ್ಲಾಧಿಕಾರಿಯವರ ಗಮನಕ್ಕೆ ತರಲಾಯಿತು, 146 ಸರ್ವೆ ನಂಬರ್‌ನಲ್ಲಿ 15 ಸಾವಿರ ಎಕ್ರೆ ಜಾಗವಿದ್ದು ಇದರಲ್ಲಿ 2000 ಸಾವಿರ ಮಂದಿ ಪಟ್ಟಾದಾರರಿದ್ದಾರೆ, ಇದರ ಬಗ್ಗೆ ಹಲವಾರು ಪ್ರಕರಣಗಳು ನ್ಯಾಯಾಲಯಗಳಲ್ಲಿದ್ದು ಇದರಿಂದಾಗಿ ತೊಂದರೆಯಾಗುತ್ತಿದೆ ಈ ಜಾಗದ ಪೂರ್ಣ ಸರ್ವೆ ಕಾರ್ಯ ನಡೆಯುತ್ತಿದ್ದು ಅದು ಪೂರ್ಣಗೊಂಡರೆ ಸಮಸ್ಯೆ ಪರಿಹಾರವಾಗುತ್ತದೆ ಎಂದು ತಿಳಿಸಲಾಯಿತು.



ನ್ಯಾಯಾಲಯದಲ್ಲಿರುವ ಜಾಗದ ಸಮಸ್ಯೆ ಪರಿಹರಿಸಿ:

‘ಇಲ್ಲಿನ ಎಲ್ಲ ಕುಟುಂಬಗಳಿಗೂ ನೀಡಿರುವ ಜಮೀನಿನ ಹಕ್ಕನ್ನು ರದ್ದು ಪಡಿಸುವಂತೆ ರಾಜ್ಯ ಸರಕಾರವೇ ಹೈಕೋರ್ಟಿನಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ಸರಕಾರದ ಪರವಾಗಿ ತೀರ್ಪು ಬಂದಿದ್ದು ಇದರಿಂದಾಗಿ ಜನರು ಜಮೀನು ಕಳೆದುಕೊಳ್ಳುವ ಭಯದಲ್ಲಿದ್ದಾರೆ. ಸುಪ್ರೀಂ ಕೋರ್ಟಿಗೆ ಹೋಗುವಷ್ಟು ತಾವು ಶಕ್ತರಲ್ಲ, ಈಗಾಗಲೆ ಕೇಸಿಗಾಗಿ ಲಕ್ಷಾಂತರ ರೂ ಕಳೆದುಕೊಂಡಿದ್ದೇವೆ’ ಎಂದು ಜನರು ತಮ್ಮ ಅಳನ್ನು ತೋಡಿಕೊಂಡರು. ಇದನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಯವರು ಈ ಬಗ್ಗೆ ಮಾತುಕತೆ ನಡೆಸಲು ತಮ್ಮ ಕಚೇರಿಗೆ ಬರುವಂತೆ ಸೂಚಿಸಿದರು. ಅದರಲ್ಲಿ ಆಗಿರುವ ತೊಂದರೆಗಳ ಬಗ್ಗೆ ರಾಜ್ಯ ಸರಕಾರದ ಹಾಗೂ ಸರಕಾರಿ ವಕೀಲರ ಗಮನಕ್ಕೆ ತಂದು ಅದನ್ನು ಸರಿಪಡಿಸಲು ಪ್ರಯತ್ನಿಸುವುದಾಗಿ ಭರವಸೆನೀಡಿದರು.

ಜಿಲ್ಲಾಧಿಕಾರಿ ಅವರೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಅಧಿಕಾರಿಗಳಾದ ಜಿ.ಪಂ ಕಾರ್ಯನಿರ್ವಹಣಾಧಿಕಾರಿ ಡಾ. ಸೆಲ್ವಮಣಿ , ಐಟಿಡಿಪಿ ಜಿಲ್ಲಾ ಸಮನ್ವಯ ಅಧಿಕಾರಿ ಹೇಮಾಲತಾ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಯೋಗೀಶ್ ಪಿ., ಬೆಳ್ತಂಗಡಿ ತಹಸೀಲ್ದಾರ್ ಮದನ್ ಮೋಹನ್, ಹಾಗೂ ಇತರರು ಇದ್ದರು. ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನಿರಂತರ ಪ್ರಯತ್ನದಿಂದ ಅಧಿಕಾರಿಗಳ ಈ ಭೇಟಿ ಸಾಧ್ಯವಾಗಿದ್ದು, ಅತ್ಯಂತ ಸಕಾರಾತ್ಮಕ ಸ್ಪಂದನವಾಗಿದೆ. ಕಳೆದ ತಿಂಗಳಿನಲ್ಲಿ ಮುಖ್ಯಮಂತ್ರಿಗಳ ನಿಯೋಗದ ಭೇಟಿ ನಂತರ ಈ ಪ್ರದೇಶದಲ್ಲೆ ಅವರೇ ಖುದ್ದಾಗಿ ಒಂದು ದಿನ ತಂಗಿ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಹೇಳಿದ್ದರು. ಮತ್ತು ಧರ್ಮಸ್ಥಳಕ್ಕೆ ಇತ್ತೀಚೆಗೆ ಭೇಟಿ ನೀಡಿದಾಗಲೂ ಈ ಬಗ್ಗೆ ಮಾತನಾಡಿದ್ದರು. ಅಧಿಕಾರಿಗಳ ಭೇಟಿ ಮತ್ತು ಪ್ರಯತ್ನಗಳು ಫಲಪ್ರದವಾಗಿದ್ದು ಭರವಸೆಗಳನ್ನು ಆಡಳಿತ ಈಡೇರಿಸಲಿ ಎಂದು ಜನತೆ ಆಶಾ ಭಾವನೆಯಿಂದ ಕಾದಿದ್ದಾರೆ. ■

ಡಿ.ಸಿ. ಕಟ್ಟೆಗೆ ಬಂದ ಎರಡನೇ ಜಿಲ್ಲಾಧಿಕಾರಿ:

ಜಿಲ್ಲಾಧಿಕಾರಿಯವರು ಬಾಂಜಾರು ಮಲೆಗೆ ಬರುವರೆಂದು ಸುಮಾರು ಮೂರುವರೆ ದಶಕಗಳ ಹಿಂದೆ (1981). ಈ ಬಾಂಜಾರು ಮಲೆಕುಡಿಯ ಪ್ರದೇಶದಲ್ಲಿ ಡಿಸಿ ‘ಸಾಹೇಬರು’ ಬರುವರೆಂದು ಕೂಡಲು ಒಂದು ಕಟ್ಟೆಯನ್ನು ಜನರು ಕಟ್ಟಿದ್ದರು. ಆದರೆ ಡಿಸಿಯವರು ಮಾತ್ರ ಅಲ್ಲಿಗೆ ಬರಲೇ ಇಲ್ಲ. ಇದಾದ ದಶಕಗಳ ಬಳಿಕ ಹಿಂದಿನ ಜಿಲ್ಲಾಧಿಕಾರಿ ಎ.ಬಿ ಇಬ್ರಾಹಿಂ ಅವರಿಗೆ ಇಲ್ಲಿಯ ಜನರ ಸ್ತಿಗತಿಗಳನ್ನು ಆದಿವಾಸಿ ಹಕ್ಕುಗಳ ಸಂಘಟನೆಯು ತಿಳಿಸಿದಾಗ ಅವರು ಮೊದಲ ಬಾರಿಗೆ ಬಾಂಜಾರು ಮಲೆಗೆ ಬೇಟಿ ನೀಡಿ ಈ ಡಿಸಿಕಟ್ಟೆಯಲ್ಲಿಯೇ ಸಭೆ ನಡೆಸಿ ಜನರ ಸಮಸ್ಯೆ ಆಲಿಸಿದರು. ಇದೀಗ ಡಿಸಿಕಟ್ಟೆಗೆ ಎರಡನೇ ಬಾರಿಗೆ ಜಿಲ್ಲಾಧಿಕಾರಿಗಳಾದ ಸಸಿಕಾಂತ್ ಸೆಂದಿಲ್ ರವರ ಆಗಮನವಾಗಿದೆ. ನಂತರ ಸಮುದಾಯ ಭವನದಲ್ಲಿ ವಿಶೇಷ ಸಭೆಯೂ ಜರುಗಿದೆ.

ಜೆಸಿಟಿಯು ರಾಜ್ಯ ಸಮಾವೇಶದ....... ಪುಟ 9 ರಿಂದ

ಇಲ್ಲ. ನಮ್ಮ ದೇಶದ ಕಾರ್ಮಿಕ ಚಳವಳಿಗೆ ಸ್ವಾತಂತ್ರ್ಯ ಚಳವಳಿಯ ವಾರಸುದಾರಿಕೆ ಇದೆ. ಮಾತ್ರವಲ್ಲ ಅಂತಹ ಚಳವಳಿಯಲ್ಲಿ ಸ್ವತಃ ಪಾಲ್ಗೊಂಡು ಬ್ರಿಟಿಷರ ವಿರುದ್ಧ ಸಮರಧೀರ ಚಳವಳಿ ಕಟ್ಟಿದೆ ಅನುಭವವಿದೆ ಎಂದು ಎಚ್ಚರಿಸಿದರು.

ಎಚ್‌ಎಂಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗನಾಥ್, ಎಐಟಿಯುಟಿಯುಸಿ ರಾಷ್ಟ್ರೀಯ ಅಧ್ಯಕ್ಷ ಕೆ. ರಾಧಾಕೃಷ್ಣ, ಟಿಯುಸಿಸಿ ರಾಷ್ಟ್ರೀಯ ಅಧ್ಯಕ್ಷ ಜಿ.ಆರ್. ಶಿವಶಂಕರ್, ಎಐಸಿಸಿಯುಟಿ ರಾಷ್ಟ್ರೀಯ ಉಪಾಧ್ಯಕ್ಷ ಬಾಲನ್ ಸಮಾವೇಶದಲ್ಲಿ ಮಾತನಾಡಿದರು.

ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮೀ, ಎಐಟಿಯುಸಿಯ ರಾಮಚಂದ್ರಪ್ಪ, ಎಐಯುಟಿಯುಸಿಯ ರಾಮಾಂಜನಪ್ಪ, ಎಐಸಿಸಿಟಿಯುನ ನಿರ್ಮಲ, ಟಿಯುಸಿಸಿಯ ಸಿದ್ದರಾಮಪ್ಪ ಹಾಗೂ ಹೆಚ್.ಎಂ.ಎಸ್.ನ ಜಗದೀಶ್ ನೇತೃತ್ವದ ಅಧ್ಯಕ್ಷೀಯ ಮಂಡಳಿ ಸಮಾವೇಶದ ಕಲಾಪ ನಿರ್ವಹಿಸಿತು.

ಆರಂಭದಲ್ಲಿ ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ವಿಜಯ ಬಾಸ್ಕರ್ ಸ್ವಾಗತ ಕೋರಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಮೀನಾಕ್ಷೀ ಸುಂದರಂ ಕರಡು ಘೋಷಣೆ ಮಂಡಿಸಿದರು. ಧಾರವಾಡದಲ್ಲಿ ಕಾರ್ಮಿಕ ಮುಷ್ಕರದ ಸಂದರ್ಭದಲ್ಲೇ ಆಯೋಜನೆಗೊಂಡಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದೂಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಬರೆದಿರುವ ಪತ್ರವನ್ನು ಓದಿ ನಿರ್ಣಯ ಅಂಗೀಕರಿಸಲಾಯಿತು. ಕೊನೆಯಲ್ಲಿ ಅಪ್ಪಣ್ಣ ವಂದನಾರ್ಪಣೆ ಮಾಡಿದರು. ಸಮಾವೇಶದಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳು ಮಾತ್ರವಲ್ಲ ಬ್ಯಾಂಕ್, ವಿಮಾ ಹಾಗೂ ಬೆಂಗಳೂರಿನ ಸಾರ್ವಜನಿಕ ವಲಯದ ನೌಕರರು ಸೇರಿದಂತೆ ಒಂದು ಸಾವಿರಕ್ಕೂ ಹೆಚ್ಚಿನ ಕಾರ್ಮಿಕರು ಭಾಗವಹಿಸಿದ್ದರು.

ನಾಳಿನ ಕಾರ್ಯಕ್ರಮಗಳು

ಸಿಪಿಐ(ಎಂ) ರಾಜ್ಯ ಮಟ್ಟದ ಅಧ್ಯಯನ ಶಿಬಿರ, ಕೊಪ್ಪಳ, ನವೆಂಬರ್ 9–14
ಕಿಸಾನ್ ಲಾಂಗ್ ಮಾರ್ಚ್, ದೆಹಲಿ, ನವೆಂಬರ್ 28–30
ಜನನುಡಿ 2018, ಅಭಿಮತ, ಶಾಂತಿ ಕಿರಣ, ಮಂಗಳೂರು ಡಿಸೆಂಬರ್ 1–2

ರಿಸರ್ವ್ ಬ್ಯಾಂಕನ್ನು ಬುಡಮೇಲು ಮಾಡುವ ಕೃತ್ಯ



ಸರ್ವಸಮ್ಮತವಾದ ಪದ್ಧತಿ ಬಿಟ್ಟು ಬೇರೆ ದಾರಿ ಹಿಡಿದಿರುವ ಬಿಜೆಪಿ ಸರ್ಕಾರದ ಕ್ರಮವನ್ನು, ರಿಸರ್ವ್ ಬ್ಯಾಂಕಿನ ರೆಕ್ಕೆ ಪುಕ್ಕ ಕತ್ತರಿಸಿ ಅದನ್ನು ಮಂಡಿಯೂರುವಂತೆ ಮಾಡುವುದನ್ನು ಬಿಟ್ಟರೆ, ಬೇರಾವ ರೀತಿಯಲ್ಲೂ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಕ್ರಮವು ಅಪಾಯಕಾರಿಯಾಗಬಲ್ಲದು. ಆದರೆ ಅಪಾಯ ಸೃಷ್ಟಿಯನ್ನು ಅಭ್ಯಾಸವಾಗಿ ಮಾಡಿಕೊಂಡಿರುವ, ನೋಟು ರದ್ದತಿ ಮತ್ತು ಜಿಎಸ್‌ಟಿಯಂತಹ ವಿವೇಚನಾಶೂನ್ಯ ಕ್ರಮಗಳೇ ತನ್ನ "ಸಾಧನೆ"ಗಳೆಂದು ತಿಳಿದಿರುವ ಈ ಸರ್ಕಾರವು ಇನ್ನೇನು ತಾನೇ ಮಾಡಬಲ್ಲದು?

ಪ್ರೊ. ಪ್ರಭಾತ್ ಪಟ್ನಾಯಕ್

ಅನುವಾದ:ಕೆ.ಎಂ.ನಾಗರಾಜ್

ಮೋದಿ ಸರ್ಕಾರವು, ದೇಶದ ಸಾಂವಿಧಾನಿಕ ಸಂಸ್ಥೆಗಳ ಮೇಲೆ ವಕ್ರ ದೃಷ್ಟಿ ಹಾಯಿಸಿ ಒಂದರ ನಂತರ ಮತ್ತೊಂದು ಸಂಸ್ಥೆಯನ್ನು ವಿರೂಪಗೊಳಿಸುತ್ತಿದೆ. ದೇಶದ ಅಭಿವೃದ್ಧಿಯ ರೂಪರೇಖೆಗಳನ್ನು ಸಿದ್ಧಪಡಿಸುತ್ತಿದ್ದ ಯೋಜನಾ ಆಯೋಗವನ್ನು ರದ್ದುಪಡಿಸಿತು. ಭಾರತದ ಅತ್ಯುತ್ತಮ ಯೂನಿವರ್ಸಿಟಿಗಳ ಪ್ರತಿಷ್ಠೆಯನ್ನು ಹಾಳುಗೆಡವಿತು. ದೇಶದ ಸಾರ್ವಜನಿಕ ವಲಯದ ಪ್ರತಿಷ್ಠೆಯ ಉದ್ದಿಮೆ ಒಎನ್‌ಜಿಸಿಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಅದನ್ನು ದುರ್ಬಲಗೊಳಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಅಪಾತ್ರರಿಗೆ ಸಾಲ ದೊರಕುವಂತೆ ನೋಡಿಕೊಂಡ ಪರಿಣಾಮವಾಗಿ ಅವು ಅಪಾಯಕಾರಿ ಪರಿಸ್ಥಿತಿಯಲ್ಲಿವೆ. ಬಾಲಬಡುಕ ವ್ಯಕ್ತಿಗಳನ್ನು ಉನ್ನತ ಹುದ್ದೆಯಲ್ಲಿ ಕೂರಿಸಿದ ಪರಿಣಾಮವಾಗಿ ಸಿಬಿಐ ನಂತಹ ತನಿಖಾ ಸಂಸ್ಥೆಗಳು ನಂಬಿಕೆ ಕಳೆದುಕೊಂಡು ಅವಹೇಳನಕ್ಕೆ ಗುರಿಯಾಗಿವೆ. ಪ್ರೊ. ಪಿ.ಸಿ. ಮಹಲನೋಬಿಸ್ ಅವರ ಮಾರ್ಗದರ್ಶನದಲ್ಲಿ ಆರಂಭಗೊಂಡು, ಇಡೀ ವಿಶ್ವದ ವಿಶ್ವಾಸಾರ್ಹತೆಗೆ ಪಾತ್ರವಾಗಿದ್ದ, ಜೀವನ ಮಟ್ಟಕ್ಕೆ ಸಂಬಂಧಿಸಿದ ಅಂಕಿ–ಅಂಶಗಳ ಸಂಗ್ರಹಣಾ ವ್ಯವಸ್ಥೆಯನ್ನು ಹಾಳುಗೆಡವಲಾಗಿದೆ. ಸರ್ಕಾರದ ವಕ್ರ ದೃಷ್ಟಿಯ ಸರದಿ ಈಗ ರಿಸರ್ವ್ ಬ್ಯಾಂಕಿನ ಮೇಲೆ ಬಿದ್ದಿದೆ.

ಈಗ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಈ ಸಾಲಿಗೆ ಸೇರುತ್ತಿದೆ. ರಘುರಾಂ ರಾಜನ್ ಗವರ್ನರ್ ಆಗಿದ್ದ ಅವಧಿಯಲ್ಲೇ ಆರ್‌ಬಿಐನ ರೆಕ್ಕೆ ಪುಕ್ಕ ಕತ್ತರಿಸುವ ಪ್ರಯತ್ನಗಳು ಆರಂಭವಾಗಿದ್ದವು. ಅವರ ನಿರ್ಗಮನವನ್ನು ಹೊರಗಟ್ಟಲಾಯಿತು ಎಂದೇ ಹೇಳಬಹುದು. ಒಗ್ಗಿಕೊಳ್ಳುತ್ತಾರೆ ಎಂಬ ನಿರೀಕ್ಷೆಯ ಮೇಲೆ ನೇಮಕಗೊಂಡ ಉರ್ಜಿತ್ ಪಟೇಲ್ ಅವರಿಗೆ ನೋಟು ರದ್ದತಿಯ ಬಗ್ಗೆ ಘೋಷಣೆ ಮಾಡುವ ಅವಕಾಶವನ್ನೂ ಕೊಡಲಿಲ್ಲ. ನೋಟು ರದ್ದತಿ ಘೋಷಣೆಯ ಕೆಲವೇ ಕ್ಷಣಗಳ ಮೊದಲು ಅವಸರದಲ್ಲಿ ಕರೆದ ಮಂತ್ರಿಮಂಡಲದ ಸಭೆಯ ನಂತರ, ತರಾತುರಿಯಲ್ಲಿ ಸ್ವತ: ಮೋದಿಯವರೇ ನೋಟು ರದ್ದತಿಯ ಬಗ್ಗೆ ಘೋಷಣೆ ಮಾಡಿದ್ದರು. ಬೆಟ್ಟ ಅಗೆದ ನಂತರ ಇಲಿಯೂ ಸಿಗಲಿಲ್ಲ ಎನ್ನುವಂತೆ, ಹಾಗೂ ಹೀಗೂ ಕಾಲ ತಳ್ಳಿ ಬರೋಬ್ಬರಿ ಒಂದೂವರೆ ವರ್ಷದ ನಂತರ, ರದ್ದು ಮಾಡಿದ ಎಲ್ಲಾ ನೋಟುಗಳೂ ಹಿಂತಿರುಗಿವೆ ಎಂದು ಆರ್‌ಬಿಐ ಪ್ರಕಟಿಸಿತು. ಕಪ್ಪು ಹಣ ಹೊರ ತೆಗೆಯುವ ಮತ್ತು ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುವ ಮೋದಿಯವರ ಘೋಷಣೆ ಅದೆಷ್ಟು ಪೊಳ್ಳು ಎಂಬುದು ಬಯಲಾಗಿದೆ. ಅದೇನೇಇರಲಿ, ಆರ್‌ಬಿಐ ಬಗ್ಗೆ ಇಲ್ಲಿರುವ ಪ್ರಶ್ನೆ ಒಬ್ಬ ಗವರ್ನರ್‌ಗೆ ಸಂಬಂಧಿಸಿದ್ದಲ್ಲ. ಒಂದು ಸಾಂವಿಧಾನಿಕ ಸಂಸ್ಥೆಯನ್ನು ಹೇಗೆ ಕಾಲಿಗೆ ಬೀಳುವಂತೆ ಮಾಡಲಾಗುತ್ತಿದೆ ಎಂಬುದೇ ಇಲ್ಲಿರುವ ಪ್ರಶ್ನೆ.

ಈ ಪರಿಸ್ಥಿತಿಯಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ಸ್ವಾಯತ್ತತೆಯ ಪ್ರಶ್ನೆ ಮುಖ್ಯವಾಗುತ್ತದೆ. ಸ್ವಾಯತ್ತತೆಯಲ್ಲಿ ಪರಸ್ಪರ ವಿರುದ್ಧವಾದ ಎರಡು ಆಯಾಮಗಳಿರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಅದರ ಎರಡನೆಯ ಅನಪೇಕ್ಷಿತ ಆಯಾಮಕ್ಕೆ ನಾವು ಮರುಳಾಗಬಾರದು. ಏಕೆಂದರೆ, ಐಎಂಎಫ್–ವಿಶ್ವ ಬ್ಯಾಂಕ್, ಎಲ್ಲ ದೇಶಗಳ ಕೇಂದ್ರ ಬ್ಯಾಂಕ್‌ಗಳಿಗೆ (ಭಾರತೀಯ ರಿಸರ್ವ್ ಬ್ಯಾಂಕ್ – ನಮ್ಮ ದೇಶದ ಕೇಂದ್ರ ಬ್ಯಾಂಕ್) ಸ್ವಾಯತ್ತತೆ ಇರಬೇಕೆಂದು ಒತ್ತಾಯಿಸುತ್ತವೆ. ಅವರ ಅಪೇಕ್ಷೆ ಏನೆಂದರೆ, ಕೇಂದ್ರ ಬ್ಯಾಂಕ್‌ಗಳನ್ನು ಆಯಾ ದೇಶಗಳ ಸುಪರ್ದಿನಿಂದ ಬೇರ್ಪಡಿಸಿ ಅವುಗಳ ಉಸ್ತುವಾರಿಯನ್ನು ಐಎಂಎಫ್–ಬ್ಯಾಂಕ್‌ನ ಅಧಿಕಾರಿಗಳಿಗೆ/ಮಾಜಿ ಅಧಿಕಾರಿಗಳಿಗೆ ಒಪ್ಪಿಸಬೇಕು ಎಂಬುದು. ಏಕೆಂದರೆ, ಹಣಕಾಸು ಬಂಡವಾಳದ ಅಗತ್ಯಗಳಿಗೆ ತಕ್ಕಂತೆ ಹೊಂದಿಕೊಳ್ಳುವ ಇಂತಹ ಮಂದಿಯ ಉಸ್ತುವಾರಿಯಲ್ಲಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳು ಸುರಕ್ಷಿತವಾಗಿರುತ್ತವೆ. ಈ ರೀತಿಯ ಸ್ವಾಯತ್ತತೆಯು, ಅಷ್ಟೋ ಇಷ್ಟೋ ಉಳಿದಿರುವ ರಾಷ್ಟ್ರೀಯ ಸಾರ್ವಭೌಮತೆಯನ್ನು ಮೊಟಕುಗೊಳಿಸುತ್ತದೆ ಎಂಬ ಕಾರಣದಿಂದ, ನಮ್ಮ ದೇಶದಲ್ಲಿ ಮಾತ್ರವಲ್ಲದೆ ಎಲ್ಲ ದೇಶಗಳ ಎಡ ಪಂಥೀಯರು ಮತ್ತು ಪ್ರಜಾಪ್ರಭುತ್ವವಾದಿಗಳು ಉಗ್ರವಾಗಿ ಪ್ರತಿರೋಧಿಸಿದ್ದಾರೆ.

ಆರ್‌ಬಿಐ, ಕೇಂದ್ರ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿದೆ ಎಂದಾಕ್ಷಣ ಅದರ ಅರ್ಥ, ಆರ್‌ಬಿಐ, ಕೆಲವೇ ಮಂದಿ ಕಾರ್ಪೊರೇಟ್–ಹಣಕಾಸು ಕುಳಗಳೊಂದಿಗೆ ಶಾಮೀಲಾಗಿರುವ ಸರ್ಕಾರಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಬೇಕು ಎಂದಲ್ಲ. ದೇಶದ ಜನತೆಯ ಹಿತದೃಷ್ಟಿಯಿಂದ ಆರ್‌ಬಿಐ ಸಾಮಾಜಿಕ ನಿಯಂತ್ರಣಕ್ಕೊಳಪಡುವುದು ಮತ್ತು ಸರ್ಕಾರದ ನಿಯಂತ್ರಣಕ್ಕೊಳಪಡುವುದು, ಎರಡೂ ಒಂದೇ ಅಲ್ಲ. ಅವುಗಳ ಅರ್ಥವೇ ಬೇರೆ ಬೇರೆ. ಆರ್‌ಬಿಐನ ಮೇಲೆ ಸಾಮಾಜಿಕ ನಿಯಂತ್ರಣ ಇರಬೇಕು ಎಂಬ ಮಾತಿನ ಅರ್ಥವೇನೆಂದರೆ, ಜನತೆಗೆ ಒಂದು ಉತ್ತರದಾಯಿ ವ್ಯವಸ್ಥೆಯನ್ನು ಕಲ್ಪಿಸಿ ಆ ಮೂಲಕ ಆರ್‌ಬಿಐ ಪಾರ್ಲಿಮೆಂಟಿನ ಮೇಲ್ವಿಚಾರಣೆಗೆ ಒಳಪಟ್ಟಿರಬೇಕು ಎಂಬುದು. ಆದ್ದರಿಂದ, ಆರ್‌ಬಿಐನ ವ್ಯವಹಾರಗಳಲ್ಲಿ ಬಿಜೆಪಿ ಸರ್ಕಾರದ ಹಸ್ತಕ್ಷೇಪವನ್ನು, ಐಎಂಎಫ್–ಬ್ಯಾಂಕ್ ಪರಿಕಲ್ಪನೆಯ ಸ್ವಾಯತ್ತತೆಯ ವಿರೋಧವೆಂದು ತಿಳಿಯಬಾರದು. ಬಿಜೆಪಿ ಸರ್ಕಾರ ಮತ್ತು ಐಎಂಎಫ್–ವಿಶ್ವಬ್ಯಾಂಕ್, ಆರ್‌ಬಿಐ ಹಣಕಾಸು ಬಂಡವಾಳದ ಹಿತ ಕಾಪಾಡಬೇಕು ಎಂದು ಬಯಸುತ್ತವೆ. ಆದರೆ, ಸಾಮಾಜಿಕ ನಿಯಂತ್ರಣವು ಒಂದು ಪ್ರಜಾಸತ್ತಾತ್ಮಕ ಬೇಡಿಕೆಯಾಗಿದ್ದು, ಬಿಜೆಪಿ ಸರ್ಕಾರ ಮತ್ತು ಐಎಂಎಫ್–ಬ್ಯಾಂಕ್ ಹಸ್ತಕ್ಷೇಪಗಳಿಗೆ ವಿರೋಧವಾಗಿದೆ. ಹಾಗಾಗಿ, ಮೋದಿ ಸರ್ಕಾರವು ಆರ್‌ಬಿಐನ ಅಧಿಕಾರವನ್ನು ಮೊಟಕುಗೊಳಿಸುವ ಪ್ರಯತ್ನವನ್ನು ವಿರೋಧಿಸುವ ಕ್ರಮವು, ಐಎಂಎಫ್–ಬ್ಯಾಂಕ್ ಪರಿಕಲ್ಪನೆಯ ಸ್ವಾಯತ್ತತೆಯ ಬೆಂಬಲವಲ್ಲ. ಬದಲಿಗೆ, ಆರ್‌ಬಿಐ ನಂತಹ ಒಂದು ಪ್ರತಿಷ್ಠಿತ ಸಂಸ್ಥೆಯನ್ನು ಹಾಳುಗೆಡವುವ ಬಿಜೆಪಿ ಸರ್ಕಾರದ ಹುನ್ನಾರಗಳಿಗೆ ವಿರೋಧ ಎಂಬುದಷ್ಟೇ.

ನಾನು ಇಲ್ಲಿ ಸೂಚಿಸಿರುವ ಹಸ್ತಕ್ಷೇಪದ ನಿರ್ದಿಷ್ಟ ಪ್ರಕರಣವು ಒಂದು ಸ್ವತಂತ್ರ ಪೇಮೆಂಟ್ಸ್ ರೆಗ್ಯುಲೇಟರಿ ಬೋರ್ಡ್‌ನ ಸ್ಥಾಪನೆಗೆ ಸಂಬಂಧಿಸಿದೆ. 2007ರಲ್ಲಿ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮುಂತಾದ ಇಲೆಕ್ಟ್ರಾನಿಕ್ ಉಪಕರಣಗಳ ಮೂಲಕ ಹಣ ಸಂದಾಯ/ಪಾವ್ತಿ ಮತ್ತು ವ್ಯವಹಾರಗಳ ಇತ್ಯರ್ಥಗಳಿಗೆ ಸಂಬಂಧಿಸಿದ "ಪೇಮೆಂಟ್ಸ್ ಅಂಡ್ ಸೆಟ್ಲಮೆಂಟ್ ಆಕ್ಟ್ 2007" ಎಂಬ ಹೆಸರಿನಲ್ಲಿ ರೂಪಿಸಿದ ಕಾಯ್ದೆಯ ಅನುಷ್ಠಾನ ಆರ್‌ಬಿಐಗೆ ಸೇರಿದೆ. ಆದರೂ, ಮೋದಿ ಸರ್ಕಾರವು ಈ ಕಾಯ್ದೆಗೆ ತಿದ್ದುಪಡಿ ಮಾಡಲು ಉದ್ದೇಶಿಸಿ ರಚಿಸಿದ ಸಮಿತಿಯಲ್ಲಿ ಆರ್‌ಬಿಐ ಕೂಡ ಸದಸ್ಯನಾಗಿತ್ತು. ಈ ಸಮಿತಿಯ ಮುಂದೆ, ಹಣ ಸಂದಾಯ/ಪಾವ್ತಿ ಮತ್ತು ಇತ್ಯರ್ಥಗಳಿಗೆ ಸಂಬಂಧಿಸಿದ ಕಾರ್ಯವನ್ನು ಆರ್‌ಬಿಐ ಈಗಾಗಲೇ ಸಮರ್ಥವಾಗಿ ನಿರ್ವಹಿಸುತ್ತಿರುವುದರಿಂದ, ಹೊಸದೊಂದು ಸ್ವತಂತ್ರ ಪೇಮೆಂಟ್ಸ್ ರೆಗ್ಯುಲೇಟರಿ ಬೋರ್ಡ್‌ನ ಸ್ಥಾಪನೆಯ ಅಗತ್ಯವಿಲ್ಲವೆಂಬ ನಿಲುವನ್ನು ಆರ್‌ಬಿಐ ಪ್ರತಿಪಾದಿಸಿತ್ತು. ಈ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಆರ್‌ಬಿಐನ ಭಿನ್ನಮತವೂ ಅಡಕವಾಗಿದೆ. ವರದಿ ಈಗ ಸಾರ್ವಜನಿಕರಿಗೆ ಲಭ್ಯವಿದೆ.

ಕೊಡು ಕೊಳ್ಳುವ ವ್ಯವಹಾರಗಳ ಇತ್ಯರ್ಥಕ್ಕಾಗಿ ನಗದು ಹಣ ಅಥವಾ ಚೆಕ್‌ಗಳಿಗೆ ಬದಲಾಗಿ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮುಂತಾದ ಇಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಈಗ ವ್ಯಾಪಕವಾಗಿದೆ ಮತ್ತು ವಾಡಿಕೆಯಾಗಿದೆ. ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮುಂತಾದ ಇಲೆಕ್ಟ್ರಾನಿಕ್ ಉಪಕರಣಗಳ ಬಳಕೆಯ ಮೂಲಕ ಜರುಗಿದ ವ್ಯವಹಾರಗಳು ಒಂದು ನಿಗದಿತ ಅವಧಿಯಲ್ಲಿ ಬ್ಯಾಂಕ್‌ಗಳ ಮೂಲಕ ಇತ್ಯರ್ಥಗೊಳ್ಳುತ್ತವೆ. ಆದ್ದರಿಂದ, ಈ ಉಪಕರಣಗಳ ಬಳಕೆಯ ಮೂಲಕ, ನಗದು ಅಥವಾ ಚೆಕ್ ಬಳಕೆಯ ಮೂಲಕ ಮಾಡುವುದಕ್ಕಿಂತಲೂ ಹೆಚ್ಚು ಮೊತ್ತದ ವ್ಯವಹಾರ ಜರುಗಿಸುವುದು ಸಾಧ್ಯವಾಗುತ್ತದೆ. ಆದ್ದರಿಂದ, ಇಂತಹ ಉಪಕರಣಗಳ ಬಳಕೆಯ ವ್ಯವಹಾರಗಳಿಂದಾಗಿ ಹಣ ಸರಬರಾಜಿನ ಪ್ರಮಾಣ ಹೆಚ್ಚುತ್ತದೆ. ಹಾಗಾಗಿ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮುಂತಾದ ಇಲೆಕ್ಟ್ರಾನಿಕ್ ಉಪಕರಣಗಳು ಕೊಡು ಕೊಳ್ಳುವ ವ್ಯವಹಾರಗಳ ಇತ್ಯರ್ಥದಲ್ಲಿ ಹಣದ ಪಾತ್ರವನ್ನೇ ನಿರ್ವಹಿಸುವುದರಿಂದಾಗಿ, ಹಣ ಸರಬರಾಜಿನ ವ್ಯಾಖ್ಯಾನದಲ್ಲಿ ಈ ಉಪಕರಣಗಳನ್ನೂ ಸೇರಿಸಬೇಕೆಂದು ಅನೇಕ ಮಂದಿ ಸೂಚಿಸಿದ್ದಾರೆ.

ಪರಿಸ್ಥಿತಿಗೆ ತಕ್ಕಂತೆ ದೇಶದ ಹಣಕಾಸು ನೀತಿಯನ್ನು ರೂಪಿಸುವುದು ರಿಸರ್ವ್ ಬ್ಯಾಂಕ್‌ನ ಕರ್ತವ್ಯ. ಹಣ ಸರಬರಾಜಿನ ನಿಯಂತ್ರಣವು ಹಣಕಾಸು ನೀತಿಯ ಜೀವಾಳ. ಆದ್ದರಿಂದ, ಪೇಮೆಂಟ್(ಪಾವ್ತಿ/ಸಂದಾಯ) ವ್ಯವಸ್ಥೆಯನ್ನು ಆರ್‌ಬಿಐನ ಅಧಿಕಾರ ವ್ಯಾಪ್ತಿಯಿಂದ ಹೊರಗಿಡುವ ಕ್ರಮವು ಆರ್‌ಬಿಐ ಹೊಂದಿರುವ ಅಧಿಕಾರವನ್ನು ತೀವ್ರವಾಗಿ ಕುಂದಿಸುತ್ತದೆ. ಆರ್‌ಬಿಐ ಹೊಂದಿರುವ ಅಧಿಕಾರವನ್ನು ಕತ್ತರಿಸಿ ಅದನ್ನು ಇನ್ನೊಂದು ಹೊಸ ಸಂಸ್ಥೆಗೆ ವಹಿಸಿದಾಗ ಗೊಂದಲಗಳು ಸೃಷ್ಠಿಯಾಗುತ್ತವೆ. ಒಂದು ಜವಾಬ್ದಾರಿಯನ್ನು ಒಬ್ಬನಿಗಿಂತ ಹೆಚ್ಚು ಮಂದಿ ನಿರ್ವಹಿಸುವಾಗ, ಒಬ್ಬ ಅದನ್ನು ಮತ್ತೊಬ್ಬನಿಗೆ ತಳ್ಳುವುದು, ಒಬ್ಬನ ಮೇಲೆ ಮತ್ತೊಬ್ಬ ದೋಷಾರೋಪಣೆ ಮಾಡುವ ಪ್ರವೃತ್ತಿಗಳು ಹೆಚ್ಚುತ್ತವೆ. ತಪ್ಪಿತಸ್ತರನ್ನು ಪತ್ತೆಮಾಡುವುದು ಕಷ್ಟವಾಗುತ್ತದೆ. ದೇಶದ ಅರ್ಥವ್ಯಸ್ಥೆಗೆ ಸಂಬಂಧಿಸಿದ ಹಣಕಾಸು ನಿರ್ವಹಣೆಯಲ್ಲಿ ಎರಡು ಸಂಸ್ಥೆಗಳು ತೊಡಗಿದ್ದರೆ ಅವುಗಳನ್ನು ಸಾಮಾಜಿಕ ನಿಯಂತ್ರಣಕ್ಕೊಳಪಡಿಸುವುದು ಕಷ್ಟವಾಗುತ್ತದೆ.

ಇನ್ನೊಂದು ತೊಡಕಿನ ಅಂಶವೂ ಇದೆ. ಪೇಮೆಂಟ್ ವ್ಯವಸ್ಥೆಯು ಸೃಷ್ಠಿಸುವ ಉಪಕರಣಗಳು(ಮುಖ್ಯವಾಗಿ, ಕ್ರೆಡಿಟ್ ಕಾರ್ಡ್) ಒಂದು ರೀತಿಯಲ್ಲಿ ಹಣದ ಬದಲಿಯಾಗಿ ಅದರ ಸ್ಥಾನ ಆಕ್ರಮಿಸಿಕೊಂಡಿದ್ದರೂ ಸಹ, ಇನ್ನೊಂದು ನಿರ್ಣಾಯಕ ರೀತಿಯಲ್ಲಿ ಭಿನ್ನವಾಗಿವೆ. ಸಣ್ಣ ಪುಟ್ಟ ವ್ಯಾಪಾರಿಗಳೂ ಸೇರಿದಂತೆ ಸರಕುಗಳನ್ನು ಮಾರುವವರ ಬಳಿ ಕ್ರೆಡಿಟ್ ಕಾರ್ಡ್ ಬಳಸಿ ವ್ಯವಹಾರಗಳನ್ನು ಚುಕ್ತಾ ಮಾಡಿಕೊಳ್ಳಬಹುದು. ಆದರೆ, ಸಂಬಳ ಮತ್ತು ಕೂಲಿ ಕೊಡಲು ಕ್ರೆಡಿಟ್ ಕಾರ್ಡ್ ಬಳಸುವಂತಿಲ್ಲ. ಆದ್ದರಿಂದ, ಕ್ರೆಡಿಟ್ ಕಾರ್ಡ್ ಮೂಲಕ ಮಾಡುವ ಪಾವತಿಗಳ ಗಾತ್ರ ಹೆಚ್ಚುತ್ತಿದ್ದಂತೆಯೇ, ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ, ಕುಟುಂಬಗಳು ವ್ಯವಹಾರ ಜಗತ್ತಿಗೆ ಕೊಡಬೇಕಾದ ನಿವ್ವಳ ಸಾಲದ ಪ್ರಮಾಣವು ದೊಡ್ಡ ಮಟ್ಟದಲ್ಲಿರುತ್ತದೆ. ಹಾಗಾಗಿ, ಕ್ರೆಡಿಟ್ ಕಾರ್ಡ್ ಹೊಂದಿರುವ ಕುಟುಂಬಗಳ ವರಮಾನಗಳಿಗಿಂತ ಆ ಕುಟುಂಬಗಳ ನಿವ್ವಳ ಸಾಲದ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿದ್ದರೆ ಅಂತಹ ಸಾಲಗಳ ಗಾತ್ರವನ್ನು ನಿಯಂತ್ರಿಸಬೇಕಾಗುತ್ತದೆ. ಏಕೆಂದರೆ. ಈ ಕ್ರೆಡಿಟ್ ಕಾರ್ಡ್ ಸಾಲಗಳಿಗೆ ಬ್ಯಾಂಕ್‌ಗಳು ಮಧ್ಯವರ್ತಿಗಳಾಗಿ ಕೆಲಸ ಮಾಡುವುದರಿಂದ ಮತ್ತು ಪೇಮೆಂಟ್ ವ್ಯವಸ್ಥೆಯಲ್ಲಿ ಬ್ಯಾಂಕ್‌ಗಳ ಪಾತ್ರ ಹಿರಿದಾಗಿರುವುದರಿಂದ, ಕ್ರೆಡಿಟ್ ಕಾರ್ಡ್ ಸಾಲಗಳು ಮರುಪಾವತಿಯಾಗದಿದ್ದರೆ, ತಾಳಲಾರದ ಒತ್ತಡಕ್ಕೆ ಒಳಗಾದ ಬ್ಯಾಂಕ್‌ಗಳು ಬದುಕಿ ಉಳಿಯುವುದೇ ದುಸ್ತರವಾಗುತ್ತದೆ. ಒಂದು ವೇಳೆ, ಈ ಕಾರಣದಿಂದ ಬ್ಯಾಂಕ್‌ಗಳು ಮುಳುಗಿದ್ದೇ ಆದರೆ, ಕ್ರೆಡಿಟ್ ಕಾರ್ಡ್ ಹೊಂದಿರದ ಬಡ ಕುಟುಂಬಗಳು ಈ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ಠೇವಣಿಗಳನ್ನು ಕಳೆದುಕೊಳ್ಳುತ್ತಾರೆ. ಅದರಿಂದಾಗಿ ಬಡ ಕುಟುಂಬಗಳು ನಷ್ಟ ಅನುಭವಿಸುತ್ತವೆ. ಅಂದರೆ, ಶ್ರೀಮಂತ ಕುಟುಂಬಗಳ ಕ್ರೆಡಿಟ್ ಕಾರ್ಡ್ ದುಂದುಗಾರಿಕೆಯಿಂದ ಉಂಟಾದ ನಷ್ಟವನ್ನು ಕ್ರೆಡಿಟ್ ಕಾರ್ಡ್ ಹೊಂದಿರದ ಬಡ ಕುಟುಂಬಗಳು ಹೊರಬೇಕಾಗುತ್ತದೆ.

ಈ ಕಾರಣದಿಂದಾಗಿ, ಬ್ಯಾಂಕ್‌ಗಳ ಮೇಲೆ ನಿಗಾ ಇಡುವುದು ಅವಶ್ಯವಾಗುತ್ತದೆ. ಕ್ರೆಡಿಟ್ ಕಾರ್ಡ್ ಹೊಂದಿರುವ ಗಿರಾಕಿಗಳಿಗೆ ಹೆಚ್ಚಿನ ಸಾಲ ಒದಗಿಸಲು ಬ್ಯಾಂಕ್‌ಗಳು ತೋರಿಸುವ ಅತಿಯಾದ ಉತ್ಸಾಹದ ಮೇಲೆ ಕಡಿವಾಣ ಹಾಕಬೇಕಾಗುತ್ತದೆ. ಕ್ರೆಡಿಟ್ ಕಾರ್ಡ್ ಹೊಂದಿರುವ ವ್ಯಕ್ತಿಯು

▷▷▷

ರಿಸರ್ವ್ ಬ್ಯಾಂಕ್ ದೇಶದ ಆಡಳಿತದಲ್ಲಿ ಮತ್ತು ಅರ್ಥವ್ಯವಸ್ಥೆಯಲ್ಲಿನ ಒಂದು ಪ್ರಧಾನ ಸಂಸ್ಥೆ, ಕರೆನ್ಸಿ ನೋಟುಗಳನ್ನು ಮುದ್ರಿಸುವ ಮತ್ತು ನೀಡಿಕೆಯ ಅಧಿಕಾರ ಹೊಂದಿರುವ ಸಂಸ್ಥೆ. ದೇಶದ ಕರೆನ್ಸಿ ವ್ಯವಸ್ಥೆಯನ್ನು ಮತ್ತು ಸಾಲದ ವ್ಯವಸ್ಥೆಯನ್ನು ಹಾಗೂ ಇಡೀ ಹಣಕಾಸು ವ್ಯವಸ್ಥೆಯನ್ನು ರಿಸರ್ವ್ ಬ್ಯಾಂಕ್ ನಿಯಂತ್ರಿಸುತ್ತದೆ. ರಿಸರ್ವ್ ಬ್ಯಾಂಕ್ ಎಂದರೆ, ಬ್ಯಾಂಕ್‌ಗಳ ಬ್ಯಾಂಕ್ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬ್ಯಾಂಕ್. ಸಾರ್ವಜನಿಕರು ಬ್ಯಾಂಕ್‌ಗಳಲ್ಲಿ ಇಡುವ ಠೇವಣಿಗಳ ಒಂದು ನಿರ್ದಿಷ್ಟ ಭಾಗವನ್ನು ಮೀಸಲಾಗಿ ಇಟ್ಟುಕೊಳ್ಳುವುದು, ವಿದೇಶಿ ವಿನಿಮಯದ ಸಂಗ್ರಹಣೆ, ಹಣದುಬ್ಬರದ ನಿಯಂತ್ರಣ, ದೇಶದ ಆರ್ಥಿಕ ಬೆಳವಣಿಗೆ ಮತ್ತು ರೂಪಾಯಿಯ ವಿನಿಮಯ ಸ್ಥಿರತೆ ಇವುಗಳಿಗೆ ಸಂಬಂಧಿಸಿದಂತೆ ದೇಶದ ಹಣಕಾಸು ನೀತಿಯನ್ನು ನಿರೂಪಿಸುವುದು ರಿಸರ್ವ್ ಬ್ಯಾಂಕ್‌ನ ಮುಖ್ಯ ಕರ್ತವ್ಯಗಳು.

ಇಂತಹ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲು ಆರ್‌ಬಿಐಗೆ ಒಂದು ಮಟ್ಟದ ಸ್ವಾತಂತ್ರ್ಯ /ಸ್ವಾಯತ್ತತೆ ಇರಬೇಕಾಗುತ್ತದೆ. ಈ ಸ್ವಾಯತ್ತತೆ ಬಗ್ಗೆ, ಹಿಂದೆ ಆರ್‌ಬಿಐನ ಗವರ್ನರ್ ಆಗಿದ್ದ ಡಾ.ವೈ.ವಿ.ರೆಡ್ಡಿ, ಹೀಗೆ ತಮಾಷೆಯಾಗಿ ಹೇಳಿದ್ದರು: "ಹೌದು ನಾನು (ಗವರ್ನರ್) ಸ್ವತಂತ್ರನು. ಭಾರತೀಯ ರಿಸರ್ವ್ ಬ್ಯಾಂಕ್ ಒಂದು ಸ್ವಾಯತ್ತ ಸಂಸ್ಥೆ. ಈ ಮಾತನ್ನು ನಾನು ಹೇಳುತ್ತಿದ್ದೇನೆ, ಹಣಕಾಸು ಸಚಿವರ ಅನುಮತಿ ಪಡೆದ ನಂತರ". ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರಗಳ ನಡುವಿನ ತಿಕ್ಕಾಟ ಇಂದು ನೆನ್ನೆಯದಲ್ಲ. ಅದಕ್ಕೆ ಹಲವಾರು ಕಾರಣಗಳಿವೆ. ಈಗ ಮುಖ್ಯವಾಗಿ, (1)ವಸೂಲಾಗದ ಸಾಲಗಳ(ಎನ್‌ಪಿಎ) ಬಗ್ಗೆ ಆರ್‌ಬಿಐ ತಳೆದಿರುವ ಬಿಗಿ ನಿಲುವು (2) ಆರ್‌ಬಿಐ ಬಳಿ ಇರುವ 3.6 ಲಕ್ಷ ಕೋಟಿ ರೂಗಳಲ್ಲಿ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸುವ ಬಗ್ಗೆ ಇರುವ ಭಿನ್ನಾಭಿಪ್ರಾಯಗಳು ಮತ್ತು (3) ಒಂದು ಸ್ವತಂತ್ರ ಪೇಮೆಂಟ್ಸ್ ರೆಗ್ಯುಲೇಟರಿ ಬೋರ್ಡ್ (ಪಾವತಿ ನಿಯಂತ್ರಣ ಮಂಡಳಿ) ಸ್ಥಾಪಿಸಿ ರಿಸರ್ವ್ ಬ್ಯಾಂಕಿನ ಅಧಿಕಾರ ಮತ್ತು ಅದರ ಕಾರ್ಯವ್ಯಾಪ್ತಿಯ ಅತಿಕ್ರಮಣ.

ಈಗ ಇಲ್ಲಿ ಆರ್‌ಬಿಐನ ಐಎಂಎಫ್ ಬಯಸುವ 'ಸ್ವಾಯತ್ತತೆ'ಯ ಪ್ರಶ್ನೆಗಿಂತ ಅದರ ಮೇಲಿನ ಸಾಮಾಜಿಕ ಹತೋಟಿಯ ಪ್ರಶ್ನೆ ಮುಖ್ಯವಾಗಿದೆ, ಬಿಜೆಪಿ ಸರ್ಕಾರವು ಐಎಂಎಫ್–ವಿಶ್ವಬ್ಯಾಂಕ್‌ನಂತೆ ಆರ್‌ಬಿಐ ಹಣಕಾಸು ಬಂಡವಾಳದ ಹಿತ ಕಾಪಾಡಬೇಕು ಎಂದು ಬಯಸುತ್ತದೆ ಎನ್ನುವ ಪ್ರೊ. ಪ್ರಭಾತ್ ಪಟ್ನಾಯಕ್ ಈ ಲೇಖನದಲ್ಲಿ ಮುಖ್ಯವಾಗಿ ಒಂದು ಸ್ವತಂತ್ರ ಪೇಮೆಂಟ್ಸ್ ರೆಗ್ಯುಲೇಟರಿ ಬೋರ್ಡ್ ಸ್ಥಾಪಿಸುವ ಬಿಜೆಪಿ ಸರಕಾರದ ಪ್ರಯತ್ನ ಎಷ್ಟು ಅಸಂಬದ್ಧ, ಮತ್ತು ಅಪಾಯಕಾರಿ ಎಂಬುದನ್ನು ವಿಶ್ಲೇಷಿಸಿದ್ದಾರೆ.

“ನ್ಯಾಯಾಂಗ, ಸಂಸತ್ತು, ಯುಜಿಸಿ, ಸಿಬಿಐ, ಇದೀಗ ಆರ್‌ಬಿಐ......”

ಕಳೆದ ವಾರ ಸಿಬಿಐ ದೊಡ್ಡ ಸುದ್ದಿ ಮಾಡಿದ್ದರೆ, ಈ ವಾರ ಆರ್‌ಬಿಐ, ಅಂದರೆ ದೇಶದ ಕೇಂದ್ರೀಯ ಬ್ಯಾಂಕ್ ಬಹಳ ಸುದ್ದಿಯಲ್ಲಿದೆ. ಮುಂದಿನ ಸಾರ್ವತ್ರಿಕ ಚುನಾವಣೆಗಳು ಸನ್ನಿಹಿತವಾಗುತ್ತಿರುವಂತೆ, ನಾಲ್ಕೂವರೆ ವರ್ಷಗಳ ಹಿಂದೆ ಅಚ್ಛೇ ದಿನ್‌ಗಳ ಬಗ್ಗೆ ಪ್ರಾಮಾಣಿಕ ನಿರೀಕ್ಷೆ ಇಟ್ಟುಕೊಂಡಿದ್ದವರೂ ಈಗ “ದೇಶದಲ್ಲಿ ಇದೇನಾಗುತ್ತಿದೆ?” ಎಂದು ಆತಂಕ ಪಡುವಂತಾಗಿದೆ.

ಅಚ್ಛೇ ದಿನ್ ಸರಕಾರ ಮತ್ತು ರಿಝರ್ವ್ ಬ್ಯಾಂಕ್(ಆರ್‌ಬಿಐ) ನಡುವೆ ಜಗ್ಗಾಟ ಹಿಂದಿನ ಗವರ್ನರ್ ಕಾಲದಲ್ಲೇ ಆರಂಭವಾಗಿತ್ತು. ಮುಖ್ಯವಾಗಿ ಹಣದುಬ್ಬರದ ಕಾರಣ ಆರ್‌ಬಿಐ ಬ್ಯಾಂಕ್ ಬಡ್ಡಿದರಗಳನ್ನು ಇಳಿಸಲು ನಿರಾಕರಿಸಿದ್ದು, ಆ ಮೂಲಕ ದೊಡ್ಡ ಕಾರ್ಪೊರೇಟ್‌ಗಳಿಗೆ ಅಗ್ಗದರದಲ್ಲಿ ಬ್ಯಾಂಕ್ ಸಾಲಗಳನ್ನು ಕೊಡಿಸುವ ಸರಕಾರದ ಆಶಯ ಈಡೇರದ್ದು ಇದಕ್ಕೆ ಮುಖ್ಯ ಕಾರಣ, ಜತೆಗೆ ಆರ್‌ಬಿಐನಿಂದ ಸರಕಾರಕ್ಕೆ ಹೆಚ್ಚಿನ ಡಿವಿಡೆಂಡ್ ನಿರೀಕ್ಷೆ ಹಾಗೂ ಒಂದು ಸ್ವತಂತ್ರ ಪಾವತಿ ನಿಯಂತ್ರಣ ಮಂಡಳಿ ರಚಿಸಲು ಆರ್‌ಬಿಐ ವಿರೋಧವೂ ಕಾರಣ ಎನ್ನಲಾಗಿತ್ತು. ಹೊಸ ‘ಜೀ ಹುಜೂರ್’ ಮುಖ್ಯಸ್ಥರು ಬಂದ ನಂತರ ಇದು ಶಮನಗೊಳ್ಳಬಹುದು ಎಂಬ ನಿರೀಕ್ಷೆ ಹುಸಿಯಾಗಿ, ಅದೀಗ ತಾರಕಕ್ಕೆ ಏರಿರುವಂತೆ ಕಾಣುತ್ತದೆ. ಡೆಪ್ಯುಟಿ ಗವರ್ನರ್ ವಿಚಾರ ಸಂಕಿರಣದಲ್ಲಿ ಸರಕಾರದ ಹಸ್ತಕ್ಷೇಪದ ಬಗ್ಗೆ ಮಾಡಿರುವ ಟಿಪ್ಪಣಿ ಇದನ್ನು ಬಹಿರಂಗಕ್ಕೆ ತಂದಿದೆ. ಅವರ ಈ ಟಿಪ್ಪಣಿಗೆ ಕಳೆದ ತಿಂಗಳು ಹಣಕಾಸು ಮಂತ್ರಾಲಯ ಆರ್‌ಬಿಐ ಗವರ್ನರ್‌ರವರಿಗೆ ಬರೆದ ಮೂರು ಪತ್ರಗಳು ಕಾರಣವಿರಬಹುದು ಎನ್ನಲಾಗಿದೆ.

ದಿವಾಳಿಯ ಅಂಚಿನಲ್ಲಿ ಬಂದು ನಿಂತಿರುವ ಐಎಲ್&ಎಫ್‌ಎಸ್‌ನಂತಹ ಬ್ಯಾಂಕ್‌ಗಳಲ್ಲದ ಹಣಕಾಸು ಸಂಸ್ಥೆಗಳ ಆಸ್ತಿ ನಗದೀಕರಣ, ದುರ್ಬಲ ಬ್ಯಾಂಕುಗಳ ಬಂಡವಾಳ ಅವಶ್ಯಕತೆ ಮತ್ತು ಸಣ್ಣ ಮತ್ತು ಮತ್ತು ಮಧ್ಯಮ ಗಾತ್ರ ಉದ್ದಿಮೆಗಳಿಗೆ ಸಾಲ ಕುರಿತಂತೆ ಈ ಪತ್ರಗಳು ಆರ್‌ಬಿಐ ಕಾಯ್ದೆಯ ಸೆಕ್ಷನ್ 7 ರ ಅಡಿ ಬರೆದ ಪತ್ರಗಳಂತೆ ಇದ್ದವು ಎನ್ನಲಾಗಿದೆ.

ಈ ಸೆಕ್ಷನ್ 7 ಸಾರ್ವಜನಿಕ ಹಿತದಲ್ಲಿ ಅಗತ್ಯವೆನಿಸುವ ವಿಷಯಗಳಲ್ಲಿ ಬ್ಯಾಂಕಿನ ಗವರ್ನರ್‌ರೊಂದಿಗೆ ಸಮಾಲೋಚನೆಯ ನಂತರ ಸರಕಾರ ನಿರ್ದೇಶನ ನೀಡಬಹುದು ಎಂದು ಹೇಳುತ್ತದೆ. ಆದರೆ ಈ ಪತ್ರಗಳ ಮೊದಲು ಗವರ್ನರ್‌ರೊಂದಿಗೆ ಸಮಾಲೋಚನೆ ನಡೆಸಿರಲಿಲ್ಲವಂತೆ. ಹಿಂದೆಂದೂ ಯಾವುದೇ ಸರಕಾರ ಈ ಸೆಕ್ಷನ್ ಬಳಸಿಲ್ಲ ಎಂಬುದು ಪ್ರಸಕ್ತ ಸರಕಾರದ ಹಸ್ತಕ್ಷೇಪದ ಮಟ್ಟವನ್ನು ತೋರಿಸುತ್ತದೆ.

ವಾಸ್ತವವಾಗಿ ಈ ಪತ್ರಗಳಲ್ಲಿ ‘ಸಾರ್ವಜನಿಕ ಹಿತ’ದ ವಿಷಯವೇನೂ ಇಲ್ಲ, ಇರುವುದು ಚಮಚಾ ಕಾರ್ಪೊರೇಟ್‌ಗಳಿಗೆ ಅಗ್ಗ ದರದಲ್ಲಿ ಇನ್ನಷ್ಟು ಸಾಲಗಳನ್ನು ಕೊಡಿಸುವ ಹುನ್ನಾರವಷ್ಟೇ ಎಂಬುದು ಪರಿಣಿತರ ಅಭಿಪ್ರಾಯ.

ಇದಲ್ಲದೆ ಆರ್‌ಬಿಐ ಆಡಳಿತ ಮಂಡಳಿಗೆ ಇತ್ತೀಚೆಗೆ ಆರೆಸ್ಸೆಸ್‌ಗೆ ಸೇರಿದ ವ್ಯಕ್ತಿಯೊಬ್ಬರ ನೇಮಕ ಮತ್ತು ಇನ್ನೂ ಕಾರ್ಯಾವಧಿ ಮುಗಿದಿರದ ಒಬ್ಬ ‘ಮಣಿಸಲಾರದ’ ಪರಿಣಿತರ ಕಾರ್ಯಾವಧಿಯನ್ನು ಮೊಟಕುಗೊಳಿಸಿದ್ದು ತಿಕ್ಕಾಟದ ಬೆಂಕಿಗೆ ತುಪ್ಪ ಸುರಿದಿದೆ.

ಈಗ ಆಳುವ ಪಕ್ಷದ ಮುಖಂಡರು ಸರಕಾರದೊಂದಿಗೆ ಕೆಲಸ ಮಾಡಲಾಗದವರು ಹುದ್ದೆ ಬಿಟ್ಟು ಹೋಗಲಿ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಆರ್‌ಬಿಐ ಗವರ್ನರ್ ರಾಜೀನಾಮೆ ಕೊಡಬಹುದು ಎಂಬ ಊಹೆ ದಟ್ಟವಾಗಿ ಹರಡಿದೆ. ಸ್ವತಃ ಹಣಕಾಸು ಮಂತ್ರಿಗಳೇ ಸುಸ್ತಿಸಾಲಗಳ ಸಮಸ್ಯೆಗೆ ಆರ್‌ಬಿಐ ಸಮಯಕ್ಕೆ ಸರಿಯಾಗಿ ನಿಯಂತ್ರಣ ಕ್ರಮ ಕೈಗೊಳ್ಳದ್ದು ಕಾರಣ ಹೊಣೆ ಜಾರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

‘ಉನ್ನತ’ ಬ್ಯಾಂಕ್ ವಂಚಕರ ‘ರಾಜನ್ ಪಟ್ಟಿ’ ಕೊಡಲು ಸರಕಾರ ನಿರಾಕರಿಸುತ್ತಿರುವುದೇಕೆ?


ಆದರೆ ಅದೇ ವೇಳೆಗೆ ಹಿಂದಿನ ಆರ್‌ಬಿಐ ಗವರ್ನರ್ ರಘುರಾಮ ರಾಜನ್ ಮೂರೂವರೆ ವರ್ಷಗಳ ಹಿಂದೆಯೇ, ಫೆಬ್ರುವರಿ 2015ರಲ್ಲಿ ಪ್ರಧಾನ ಮಂತ್ರಿ ಕಚೇರಿ(ಪಿಎಂಒ)ಗೆ ಮತ್ತು ಹಣಕಾಸು ಮಂತ್ರಿ ಕಚೇರಿಗೆ ಪ್ರಮುಖ ಬ್ಯಾಂಕ್ ವಂಚನೆಯ ಕೇಸುಗಳ ಒಂದು ಪಟ್ಟಿಯನ್ನು ಕಳಿಸಿದ್ದರು, ಈ ಬಗ್ಗೆ ಸಂಯೋಜಿತ ತನಿಖೆ ನಡೆಯಬೇಕು ಎಂದಿದ್ದರು ಎಂದು ಈಗ ಮಾಹಿತಿ ಹಕ್ಕಿನ ಅಡಿಯಲ್ಲಿನ ಉತ್ತರದಿಂದ ಬಯಲಿಗೆ ಬಂದಿದೆ. ಈ ಬಗ್ಗೆ ಮತ್ತು ಸರಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಸಂಸದೀಯ ಅಂದಾಜು ಸಮಿತಿ ಮಾಹಿತಿ ಕೇಳಿದ್ದು ಅದನ್ನು ಕೊಡಲು ಪಿಎಂಒ ಮತ್ತು ಹಣಕಾಸು ಮಂತ್ರಾಲಯ ಇವೆರಡೂ ನಿರಾಕರಿಸಿವೆ. ಅದರ ಬದಲು ಅಂದಾಜು ಸಮಿತಿಯ ಮುಖ್ಯಸ್ಥರ ಬಳಿ ಇಬ್ಬರು ಹಿರಿಯ ಮಂತ್ರಿಗಳನ್ನು ಖಾಸಗಿಯಾಗಿ ‘ಚರ್ಚಿಸಲು’ ಕಳಿಸಲಾಗಿದೆ ಎಂದು ವರದಿಯಾಗಿದೆ.

ಅಂದಾಜು ಸಮಿತಿಯ ಮುಖ್ಯಸ್ಥರು ಸ್ವತಃ ಬಿಜೆಪಿಯ ಹಿರಿಯ ಮುಖಂಡ ಮುರಳಿ ಮನೋಹರ್ ಜೋಷಿ ಎಂಬುದು ಗಮನಾರ್ಹ. ಜೋಶಿಯವರು ಇದರಿಂದ ಸಿಟ್ಟಿಗೆದ್ದು ಹಿಂದಿನ ಆರ್‌ಬಿಐ ಗವರ್ನರ್‌ರಿಂದಲೇ ಈ ಪಟ್ಟಿಯನ್ನು ಸಂಸದೀಯ ಸಮಿತಿಗೆ ಪಡೆಯಲು ಯೋಜಿಸುತ್ತಿದ್ದಾರೆ ಎಂದು ವರದಿಯಾಗಿದೆ.


ಅಚ್ಛೇ ದಿನ್ ಸರಕಾರ, ‘ಗರಿಷ್ಟ ಆಳ್ವಿಕೆಯ ಕನಿಷ್ಟ ಸರಕಾರ’ ಒಂದೋ ಯಾವುದೇ ಕ್ರಮ ಕೈಗೊಳ್ಳಲು ಮುಂದಾಗಿಲ್ಲ, ಅಥವ ಮೂರೂವರೆ ವರ್ಷಗಳು ಸಂದರೂ ಈ ಬಗ್ಗೆ ಹೇಳಿಕೊಳ್ಳಲು ಅದರ ಬಳಿ ಏನೂ ಇಲ್ಲ ಎಂದೇ ಈ ಪಟ್ಟಿಯ ಬಗ್ಗೆ ಮಾಹಿತಿಯನ್ನು ಸಂಸದೀಯ ಸಮಿತಿಗೂ ಕೊಡಲು ನಿರಾಕರಿಸುತ್ತಿರುವುದರ ಅರ್ಥವಲ್ಲವೇ ಎಂದು ಹಲವರು ಕೇಳುತ್ತಿದ್ದಾರೆ.

ಈ ಒಟ್ಟು ವಿದ್ಯಮಾನದ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ “ನ್ಯಾಯಾಂಗ, ಸಂಸತ್ತು, ಸಿಬಿಐ ಮತ್ತು ಈಗ ಆರ್‌ಬಿಐ. ಈ ಸರಕಾರ ಪ್ರತಿಯೊಂದು ಸಂಸ್ಥೆಯನ್ನೂ ಹಾಳುಗೆಡವಲು ಪ್ರಯತ್ನಿಸಿದೆ. ಈಗ ಬಯಲಾಗಿರುವ ಹೊಲಸಿಗೆ ಈ ಸಂಸ್ಥೆಗಳೇ ಕಾರಣ ಎಂದು ಹೊಣೆಯಾಗಿಸುವ ಅದರ ಪ್ರಯತ್ನ ತನ್ನ ಕಳೆದ 4.5 ವರ್ಷಗಳ ಸಂಪೂರ್ಣ ವಿಫಲತೆಯ ಹೊಣೆಯನ್ನು ವರ್ಗಾಯಿಸುವ ಒಂದು ಹತಾಶ ಪ್ರಯತ್ನ”, ಈ ಸರಕಾರ ತಾನೇ ನೇಮಕ ಮಾಡಿದವರನ್ನು, ಸಂಸ್ಥೆಗಳನ್ನು ಮತ್ತು ಮಹತ್ವದ ಪ್ರಶ್ನೆಗಳನ್ನು ನಿಭಾಯಿಸಲು ಅಸಮರ್ಥವಾಗಿದೆ. ದೈನಂದಿನ ಆಡಳಿತವೂ ಕೂಡ ಮುಗ್ಗರಿಸುತ್ತಿರುವಾಗ ಆರ್ಥಿಕ ಪರಿಸ್ಥಿತಿ ಇನ್ನಷ್ಟು ಕೆಳಕ್ಕೆ ಕುಗ್ಗುತ್ತಿದೆ. ಈ ನಾಲ್ಕೂವರೆ ವರ್ಷಗಳು ನಮ್ಮ ಇತಿಹಾಸದಲ್ಲಿ ಅತ್ಯಂತ ಕರಾಳ ವರ್ಷಗಳಾಗಿ ದಾಖಲಾಗುತ್ತಿವೆ ಎಂದಿದ್ದಾರೆ.

ಎಲ್ಲವನ್ನೂ ನಿಷ್ಕ್ರಿಯ ಪ್ರತಿಮೆಗಳಾಗಿಸುವ ಆಟ!



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ



ರಫೆಲ್ ವ್ಯವಹಾರ–ನಿಜಸಂಗತಿಗಳನ್ನು ತಿಳಿಸಲು ಸುಪ್ರಿಂ ಕೋರ್ಟ್ ಒತ್ತಾಯ

ಸಿಬಿಐ ವಿದ್ಯಮಾನಗಳು ಸತತವಾಗಿ ಸುದ್ದಿಯಲ್ಲಿ ಉಳಿದಿವೆ, ಜತೆಗೆ ಅದಕ್ಕೆ ಒಂದು ಕಾರಣವಾದ ರಫೆಲ್ ವ್ಯವಹಾರ ಕೂಡ. ಸುಪ್ರಿಂ ಕೋರ್ಟ್ ಈ ಕುರಿತ ನಾಲ್ಕು ಅರ್ಜಿಗಳನ್ನು ಕೈಗೆತ್ತಿಕೊಳ್ಳುತ್ತ 36 ರಫೆಲ್ ವಿಮಾನ ಖರೀದಿ ವ್ಯವಹಾರದ ನಿರ್ಧಾರ ಪ್ರಕ್ರಿಯೆಯ ವಿವರಗಳನ್ನು ಕೊಡಬೇಕು ಮತ್ತು ಇವುಗಳ ಬೆಲೆಗಳ ವಿವರಗಳನ್ನೂ ಕೊಡಬೇಕು ಎಂದು ಸರಕಾರವನ್ನು ಕೇಳಿತು. ಬೆಲೆಗಳ ವಿವರಗಳು ಬಹಳ ‘ಸೂಕ್ಷ್ಮ ಸಂಗತಿ’ಯಾಗಿದ್ದು ಅದನ್ನು ಸಂಸತ್ತಿಗೂ ತಿಳಿಸಿಲ್ಲ ಎಂದು ಸರಕಾರದ ಪರವಾಗಿ ಹೇಳಿದಾಗ, ಸುಪ್ರಿಂ ಕೋರ್ಟ್ ತುಸು ರಿಯಾಯ್ತಿ ನೀಡಿ “ಬೆಲೆ ವಿವರಗಳನ್ನು ಕೊಡಲಾಗುವುದಿಲ್ಲ ಎಂದು ಅಫಿಡವಿಟ್ ಸಲ್ಲಿಸಿ” ಎಂದು ಹೇಳಿದೆ. ಇವನ್ನು 10 ದಿನಗಳೊಳಗೆ ಸಲ್ಲಿಸಬೇಕು ಎಂದು ಅದು ತಾಕೀತು ಮಾಡಿದೆ. ಜತೆಗೆ ಈ ವ್ಯವಹಾರದಲ್ಲಿ ಭಾರತೀಯ ಆಫ್‌ಸೆಟ್ ಭಾಗೀದಾರರನ್ನು ಸೇರಿಸಿರುವ ಕುರಿತ ಮಾಹಿತಿಯನ್ನೂ ನ್ಯಾಯಾಲಯಕ್ಕೆ ಮತ್ತು ಅರ್ಜಿದಾರರಿಗೆ ಒದಗಿಸಬೇಕು ಎಂದು ಹೇಳಿದೆ.

ಈ ವ್ಯವಹಾರವನ್ನು ಕುರಿತಂತೆ ಮಾಹಿತಿಗಳನ್ನು ನಿರಾಕರಿಸಲು ಎಲ್ಲ ರೀತಿಯ ನೆವಗಳನ್ನು ಕೊಡುತ್ತ ಬಂದಿರುವ ಸರಕಾರದಿಂದ ಈಗ ಸರ್ವೋಚ್ಚ ನ್ಯಾಯಾಲಯವೇ ನಿಜಸಂಗತಿ ಏನೆಂದು ತಿಳಿಯಲು ಮುಂದಾಗಿದೆ.

“ಭಾಗ್ ಕ್ಯೋಂ ರಹೇ ಹ್ಯಂ ಸಂಬಿತ್ ಜೀ?”
(ಓಟ ಕೀಳುತ್ತಿರುವಿರೇಕೆ ಸಂಬಿತ್ ಪಾತ್ರ?)

ಬಿಜೆಪಿಯ ಬಹಳ ಗಟ್ಟಿ ದನಿಯ ಸಮರ್ಥ ವಕ್ತಾರ ಎನಿಸಿಕೊಂಡಿರುವ ಸಂಬಿತ್ ಪಾತ್ರ ವಿಧಾನಸಭಾ ಚುನಾವಣೆಗಳ ಪ್ರಕ್ರಿಯೆ ಆರಂಭವಾದಂದಿನಿಂದ ಎರಡೇ ವಾರಗಳಲ್ಲಿ ಎರಡು ಬಾರಿ ವರದಿಗಾರರಿಂದ ಈ ಮೇಲಿನ ಪ್ರಶ್ನೆಯನ್ನು ಕೇಳಬೇಕಾಗಿ ಬಂದಿದೆ.

ಅಕ್ಟೋಬರ್ 29ರಂದು ಮಧ್ಯಪ್ರದೇಶದ ಭೋಪಾಲದಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಪ್ರತಿಪಕ್ಷದ ಮುಖಂಡರ ‘ಭ್ರಷ್ಟಾಚಾರ’ಗಳನ್ನು ‘ಬಯಲಿಗೆಳೆಯು’ತ್ತಿದ್ದಾಗ ’ ವರದಿಗಾರರೊಬ್ಬರು ರಾಜ್ಯದ ಖಿಲ್ಚಿಪುರ್ ಕ್ಷೇತ್ರದ ಬಿಜೆಪಿ ಶಾಸಕನ ಮೇಲಿನ ಭೂಕಬಳಿಕೆಯ ಆರೋಪದ ಬಗ್ಗೆ ಕೇಳಿದರು. ತಬ್ಬಿಬ್ಬಾದ ಪಾತ್ರ ಅವರು ಎದ್ದು ನಿಂತು ಹೊರಟೇ ಬಿಟ್ಟರು, ಏಕೆ ಓಟ ಕೀಳುತ್ತಿದ್ದೀರಿ ಎಂಬ ನೆರೆದಿದ್ದ ಹಲವಾರು ಪತ್ರಕರ್ತರ ಒಕ್ಕೊರಲಿನ ಪ್ರಶ್ನೆಗಳ ನಡುವೆ.

ಇದಕ್ಕೆ ಮೊದಲು ಅಕ್ಟೋಬರ್ 16ರಂದು ಪ್ರಧಾನ ಮಂತ್ರಿ ಮೋದಿಯವರಿಗೆ ಮಹಿಳಾ ಸಬಲೀಕರಣಕ್ಕಾಗಿ ಭಾವಪೂರ್ಣ ಕೃತಜ್ಞತೆ ಸಲ್ಲಿಸುತ್ತಿದ್ದಾಗ ಒಬ್ಬ ವರದಿಗಾರರು ಆಗ ಕೇಂದ್ರ ಮಂತ್ರಿಯಾಗಿದ್ದ ಎಂ ಜೆ ಅಕ್ಬರ್ ರವರ ಲೈಂಗಿಕ ಕಿರುಕುಳದ ಬಗ್ಗೆ ಕೇಳಿದಾಗ “ ಹೋ ಗಯಾ” ಎಂದು ಕ್ಕಾಬಿಕ್ಕಿಯಾಗಿ ತಕ್ಷಣ ಕಾರು ಹೊತ್ತಿ ಹೊರಟೇ ಬಿಟ್ಟಿದ್ದರು. ಅದರ ವಿಡಿಯೋ ವೈರಲ್ ಆಗಿತ್ತು.

ತಮ್ಮ ಈ ಓಟಗಳಿಗೆ ಅವರು ಯಾರಿಗೆ ‘ಕೃತಜ್ಞತೆ’ ಅರ್ಪಿಸುತ್ತಾರೋ ಮುಂದಿನ ಪತ್ರಿಕಾ ಸಮ್ಮೇಳನದಲ್ಲಿ ತಿಳಿಯಬಹುದು!



▷▷▷ ಬಳಸಿಕೊಳ್ಳಬಹುದಾದ ಸಾಲದ ಮಿತಿ ನಿಗದಿಪಡಿಸುವಿಕೆಯ ಮೇಲೆ ಕಣ್ಗಾವಲು ಇಡಬೇಕಾಗುತ್ತದೆ. ಇಂತಹ ಸಾಲಗಳು ಎಷ್ಟು ಸುಸ್ತಿಯಾಗಿವೆ ಎಂಬುದನ್ನು ಪರಿಗಣಿಸಿ, ಸಾಲದ ಮಿತಿಯಲ್ಲಿ ಏರಿಳಿಕೆ ಮಾಡಬೇಕಾಗುತ್ತದೆ. ಉದ್ದೇಶಿತ ಪೇಮೆಂಟ್ಸ್ ನಿಯಂತ್ರಣ ಮಂಡಳಿಯು ಪರಿಣಾಮಕಾರಿಯಾಗಿ ಕೆಲಸಮಾಡಬೇಕು ಎಂದಾದರೆ, ಬ್ಯಾಂಕಿಂಗ್ ವ್ಯವಸ್ಥೆಯು ಈ ಮಂಡಳಿಯ ನಿಯಂತ್ರಣಕ್ಕೊಳಪಡಬೇಕಾಗುತ್ತದೆ. ಆದರೆ, ಬ್ಯಾಂಕ್‌ಗಳ ನಿಯಂತ್ರಣವು ಭಾರತೀಯ ರಿಸರ್ವ್ ಬ್ಯಾಂಕಿನ ಕೆಲಸ. ಆದ್ದರಿಂದ, ಪ್ರತ್ಯೇಕವಾಗಿ ಹೊಸದೊಂದು ಪೇಮೆಂಟ್ಸ್ ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿದರೆ, ಒಂದೋ ಅದು ರಿಸರ್ವ್ ಬ್ಯಾಂಕಿನ ಅಧಿಕಾರವನ್ನು ಮತ್ತು ಅದರ ಕಾರ್ಯವ್ಯಾಪ್ತಿಯನ್ನು ಅತಿಕ್ರಮಿಸುತ್ತದೆ, ಇಲ್ಲವೇ ಬ್ಯಾಂಕ್‌ಗಳನ್ನು ನಾನಾ ರೀತಿಯ ನಿಯಂತ್ರಣಗಳಿಗೆ ಒಳಪಡಿಸಿ, ಗೊಂದಲ ಸೃಷ್ಟಿಸುತ್ತದೆ.

ಆದ್ದರಿಂದ, ಯಾವ ರೀತಿಯಲ್ಲಿ ನೋಡಿದರೂ, ಹೊಸದೊಂದು ಪೇಮೆಂಟ್ಸ್ ನಿಯಂತ್ರಣ ಮಂಡಳಿ ಸ್ಥಾಪಿಸಲು ಹೊರಟಿರುವ ಬಿಜೆಪಿ ಸರ್ಕಾರದ ಕ್ರಮವು ವಿವೇಚನಾಶೂನ್ಯವಾಗಿ ಕಾಣುತ್ತದೆ. ಇದು, ರಿಸರ್ವ್ ಬ್ಯಾಂಕಿನ ಅಧಿಕಾರವನ್ನು ಮತ್ತು ಅದರ ಕಾರ್ಯವ್ಯಾಪ್ತಿಯನ್ನು ಬುಡಮೇಲುಗೊಳಿಸುತ್ತದೆ. ಹಣಕಾಸು ವಿಷಯಗಳ ನಿರ್ವಹಣೆಯಲ್ಲಿ ಗೊಂದಲ ಸೃಷ್ಟಿಸುತ್ತದೆ. ವಾಸ್ತವವಾಗಿ, ಪೇಮೆಂಟ್ಸ್ ವ್ಯವಸ್ಥೆಯು ಕೇಂದ್ರ ಬ್ಯಾಂಕಿನ (ಭಾರತೀಯ ರಿಸರ್ವ್ ಬ್ಯಾಂಕ್ – ನಮ್ಮ ದೇಶದ ಕೇಂದ್ರ ಬ್ಯಾಂಕ್) ನಿಯಂತ್ರಣಕ್ಕೊಳಪಟ್ಟಿರುವುದು ಸರ್ವೇಸಾಮಾನ್ಯ. ಇದು ಅಂತಾರಾಷ್ಟ್ರೀಯ ಮಟ್ಟದ ಮಾದರಿಯೂ ಹೌದು ಎಂಬುದನ್ನು ರಿಸರ್ವ್ ಬ್ಯಾಂಕ್ ಪ್ರತಿನಿಧಿಯು ಸಮಿತಿಯಲ್ಲಿ ಪ್ರತಿಪಾದಿಸಿದ್ದರು ಎಂಬ ಅಂಶವು ಭಿನ್ನಮತ ಟಿಪ್ಪಣಿಯಲ್ಲಿದೆ.

ಆದ್ದರಿಂದ, ಇಂತಹ ಸರ್ವಸಮ್ಮತವಾದ ಪದ್ಧತಿ ಬಿಟ್ಟು ಬೇರೆ ದಾರಿ ಹಿಡಿದಿರುವ ಬಿಜೆಪಿ ಸರ್ಕಾರದ ಕ್ರಮವನ್ನು, ರಿಸರ್ವ್ ಬ್ಯಾಂಕಿನ ರೆಕ್ಕೆ ಪುಕ್ಕ ಕತ್ತರಿಸಿ ಅದನ್ನು ಮಂಡಿಯೂರುವಂತೆ ಮಾಡುವುದನ್ನು ಬಿಟ್ಟರೆ, ಬೇರಾವ ರೀತಿಯಲ್ಲೂ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಕ್ರಮವು ಅಪಾಯಕಾರಿಯಾಗಬಲ್ಲದು. ಆದರೆ ಅಪಾಯ ಸೃಷ್ಟಿಯನ್ನು ಅಭ್ಯಾಸವಾಗಿ ಮಾಡಿಕೊಂಡಿರುವ, ನೋಟು ರದ್ದತಿ ಮತ್ತು ಜಿಎಸ್‌ಟಿಯಂತಹ ವಿವೇಚನಾಶೂನ್ಯ ಕ್ರಮಗಳೇ ತನ್ನ “ಸಾಧನೆ”ಗಳೆಂದು ತಿಳಿದಿರುವ ಈ ಸರ್ಕಾರವು ಇನ್ನೇನು ತಾನೇ ಮಾಡಬಲ್ಲದು? ●

ಹರಿಯಾಣ ರಸ್ತೆ ಸಾರಿಗೆ ಮುಷ್ಕರ: ಖಾಸಗೀಕರಣದ ವಿರುದ್ಧ ಕಾರ್ಮಿಕರ ಅತಿ ದೊಡ್ಡ ಸೌಹಾರ್ದ ಕಾರ್ಯಾಚರಣೆ

ಹರಿಯಾಣ ರೋಡ್‌ವೇಸ್ ಕಾರ್ಮಿಕರು ಖಾಸಗೀಕರಣದ ವಿರುದ್ಧ ಅಕ್ಟೋಬರ್ 16–17 ರಂದು ಎರಡು ದಿನಗಳ ಮುಷ್ಕರ ನಡೆಸಿದರು. ಹರಿಯಾಣ ಬಿಜೆಪಿ ಸರಕಾರ ಎಸ್ಮಾ ಬಳಸಿ 250 ಕಾರ್ಮಿಕರನ್ನು ಬಂಧಿಸಿತು. ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟದ ಕಚೇರಿಯನ್ನು ಸೀಲ್ ಮಾಡಿತು. ಎಐಟಿಯುಸಿ ಮತ್ತು ಐನ್‌ಟಿಯುಸಿ ಕಚೇರಿಗಳನ್ನೂ ಸೀಲ್ ಮಾಡಿತು. ಇದರಿಂದ ಕ್ರುದ್ಧರಾದ ಕಾರ್ಮಿಕರು ತಮ್ಮ ಮುಷ್ಕರವನ್ನು ಮುಂದುವರೆಸಿದರು.



ಈ ಮುಷ್ಕರದ 15ನೇ ದಿನವಾದ ಅಕ್ಟೋಬರ್ 30ರಂದು ರಾಜ್ಯದಲ್ಲಿ ವಿವಿಧ ವಲಯಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನಾ ಮತಪ್ರದರ್ಶನಗಳನ್ನು ನಡೆಸಿದರೆ, ಇನ್ನೂ 50 ಸಾವಿರ ಕಾರ್ಮಿಕರು ಕೆಲಸ ನಿರ್ವಹಿಸುತ್ತಲೇ ಪ್ರತಿಭಟನೆಗಳನ್ನು ನಡೆಸಿದರು. ಇದು ರಾಜ್ಯದಲ್ಲಿ ಖಾಸಗೀಕರಣದ ವಿರುದ್ಧ ಎಲ್ಲ ವಿಧಗಳ ಕಾರ್ಮಿಕರ ಅತಿ ದೊಡ್ಡ ಸೌಹಾರ್ದ ಕಾರ್ಯಾಚರಣೆ ಎಂದು ಸಿಪಿಐ(ಎಂ)ನ ಹಿರಿಯ ರಾಜ್ಯ ಮುಖಂಡ ಇಂದರ್ಜಿತ್ ಸಿಂಗ್ ಹೇಳಿದ್ದಾರೆ.



ಅಕ್ಟೋಬರ್ 31 ರಂದು ಮತ್ತಷ್ಟು ಕಾರ್ಮಿಕರು ಮತ್ತು ಇತರರು ಪ್ರತಿಭಟನೆಗಳಲ್ಲಿ ಪಾಲ್ಗೊಂಡರು. ಫತೇಹಬಾದ್ ಜಿಲ್ಲೆಯ ಭುನಾದಲ್ಲಿ ಮುಖ್ಯಮಂತ್ರಿ ಖಟ್ಟರ್ ಭೇಟಿ ವೇಳೆಯಲ್ಲಿ ಪ್ರತಿಭಟನಾಕಾರರ ಮೇಲೆ ಲಾಠೀ ಪ್ರಹಾರ ನಡೆದಿದೆ, ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸುರಿಂದರ್ ಮಲಿಕ್, ಕಿಸಾನ್ ಸಭಾ ಮುಖಂಡ ಸುಖ್ ಬೀರ್ ಸಿಂಗ್ ಮತ್ತಿತರ 14 ಮಂದಿಯನ್ನು ಬಂಧಿಸಲಾಗಿದೆ.

ಇದನ್ನು ಸಿಐಟಿಯು ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ, ಹರಿಯಾಣ ರೋಡ್‌ವೇಸ್ ಸಂಘಟನೆಗಳು ಮತ್ತು ಸಮನ್ವಯ ಸಮಿತಿ ಕರೆ ನೀಡುವ ಮುಂದಿನ ಎಲ್ಲ ಹೋರಾಟ ಕಾರ್ಯಕ್ಕರಮಗಳಲ್ಲೂ ಸಿಐಟಿಯುನ ಪ್ರತಿಯೊಬಬ್ ಸದಸ್ಯರು ಭಾಗವಹಿಸುತ್ತಾರೆ ಎಂದು ಅದು ಹೇಳಿದೆ.

ದಿಲ್ಲಿಯಲ್ಲೂ ಸಾರಿಗೆ ಮುಷ್ಕರ, ಯು.ಪಿ., ಹಿಮಾಚಲದಲ್ಲಿ ಹೊಸ ಪೆನ್ಶನ್ ಯೋಜನೆ ವಿರುದ್ಧ ಧರಣಿ ಮುಷ್ಕರ

ದಿಲ್ಲಿಯ ಎಎಪಿ ಸರಕಾರವೂ ಸಾರಿಗೆ ಖಾಸಗೀಕರಣದ ಪ್ರಯತ್ನ ನಡೆಸಿದೆ. ಜತೆಗೆ ಅಪಾರ ಸಂಖ್ಯೆಯಲ್ಲಿರುವ ಕಾಂಟ್ರಾಕ್ಟ್ ಡ್ರೈವರ್‌ಗಳು, ಕಂಡಕ್ಟರುಗಳ ಸಂಬಳವನ್ನು ಆಗಸ್ಟ್‌ನಿಂದ ಕಡಿತ ಮಾಡಿದೆ. ಇದನ್ನು ವಿರೋಧಿಸಿ ದಿಲ್ಲಿ ಸಾರಿಗೆ ನಿಗಮ(ಡಿಟಿಸಿ)ದ 10,000 ನೌಕರರು ಅಕ್ಟೋಬರ್ 29ರಂದು ಮುಷ್ಕರ ನಡೆಸಿದ್ದಾರೆ. 1988ರ ನಂತರ ಮೊದಲ ಬಾರಿಗೆ ಎಲ್ಲ 36 ಡಿಪೋಗಳಲ್ಲಿ ಮುಷ್ಕರ ನಡೆದಿದೆ. ಇದೊಂದು ಚಾರಿತ್ರಿಕ ಸಾಧನೆ ಎನ್ನಲಾಗಿದೆ. ವಿಶೇಷವೆಂದರೆ ಎಎಪಿ ಸರಕಾರದೊಡನೆ ಸದಾ ತಿಕ್ಕಾಟ ನಡೆಸುತ್ತಿರುವ ಉಪರಾಜ್ಯಪಾಲರೂ ಎಸ್ಮಾ ಮತ್ತು ಆರುತಿಂಗಳ ಕಾಲ ಡಿಟಿಸಿಯಲ್ಲಿ ಮುಷ್ಕರವನ್ನು ನಿಷೇಧಿಸುವ ಕ್ರಮಗಳ ಮೂಲಕ ಎಎಪಿ ಸರಕಾರಕ್ಕೆ ಬೆಮಬಲ ನೀಡಿದರು. ಸಂಘ ಪರಿವಾದ ಬಿಎಂಎಸ್ ಕೂಡ ಪರೋಕ್ಷ ನೆರವು ನೀಡಿತು! ಏಕೆಂದರೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಈ ಮುಷ್ಕರಕ್ಕೆ ಬೆಂಬಲ ನೀಡಿದರೂ ಬಿಎಂಎಸ್ ಬೆಂಬಲ ಕೊಡಲಿಲ್ಲ.

ಕೇಜ್ರಿವಾಲ್ ಸರಕಾರ ಆಗಸ್ಟ್‌ನಲ್ಲಿ ಮಾಡಿದ್ದ ಕಡಿತಗಳನ್ನು ಹಿಂತೆಗೆದುಕೊಂಡು ಖಾಸಗೀಕರಣದ ವಿರುದ್ಧ ಹೋರಾಟ ನಡೆಯುದಿರಲಿ ಎಂದು ಪ್ರಯತ್ನಿಸಿದರೂ ಮುಷ್ಕರ ನಡೆದೇ ನಡೆಯಿತು, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಎಲ್ಲರನ್ನೂ ಖಾಯಂಗೊಳಿಸಬೇಕು ಎಂಬ ಬೇಡಿಕೆಯ ಮೇಲೆ ಖಾಸಗೀಕರಣದ ಪ್ರಯತ್ನಗಳನ್ನು ನಿಲ್ಲಿಸುವಂತೆ ಸರಕಾರಕ್ಕೆ ಎಚ್ಚರಿಕೆ ನೀಡಿತು.

ಈ ಮುಷ್ಕರಕ್ಕೆ ಸಿದ್ಧತೆಯಾಗಿ ಒಂದು ವಾರದ ಮೊದಲು ಡಿಟಿಸಿ ನೌಕರರು ನಮಕ್–ಮಿರ್ಚಿ–ರೋಟಿ(ಉಪ್ಪು–ಮೆಣಸು–ರೊಟ್ಟಿ) ಧರಣಿ ನಡೆಸಿ ಕೇಜ್ರಿವಾಲ್ ಸರಕಾರ 25% ದಷ್ಟು ವೇತನ ಕಡಿತ ಮಾಡಿದ್ದನ್ನು ಪ್ರತಿಭಟಿಸಿದ್ದರು.

ಉತ್ತರ ಪ್ರದೇಶದಲ್ಲಿ ಸರಕಾರೀ ನೌಕರರು ಅಕ್ಟೋಬರ್ 28 ರಂದು ರಾಜ್ಯಾದ್ಯಂತ ಎಂ.ಪಿ. ಗಳ ನಿವಾಸಗಳ ಮುಂದೆ ಧರಣಿ ಮುಷ್ಕರ ನಡೆಸಿದರು. ಹೊಸ ಪೆನ್ಶನ್ ಯೋಜನೆಯನ್ನು ರದ್ದು ಮಾಡಿ ಹಳೆಯ ಪೆನ್ಶನ್ ಯೋಜನೆಯನ್ನೇ ಮತ್ತೆ ಜಾರಿಗೆ ತರಬೇಕು ಎಂಬುದು ಅವರ ಬೇಡಿಕೆಯಾಗಿತ್ತು.

ಉತ್ತರಪ್ರದೇಶ ರಾಜ್ಯ ಸರಕಾರೀ ನೌಕರರ ಸಂಘ(ಯುಪಿಎಸ್‌ಇಎಫ್) ಈ ಕುರಿತು ಮುಖ್ಯಮಂತ್ರಿಗಳೊಡನೆ ನಡೆಸಿದ ಮಾತುಕತೆಗಳು ವಿಫಲವಾದ ನಂತರ ನೌಕರರು ಈ ಧರಣಿ ನಡೆಸಿದ್ದಾರೆ.ಈ ಹೊಸ ಯೋಜನೆ ನೌಕರರಿಗೆ ಹಾನಿಯುಂಟು ಮಾಡಿದ್ದರೂ ಅದು ಒಳ್ಳೆಯ ಸಕೀಂ ಎಂದು ನಂಬಿಸಲು ಸರಕಾರದ ಪ್ರತಿನಿಧಿಗಳು ಪ್ರಯತ್ನಿಸುತ್ತಿದ್ದಾರೆ.

ಉತ್ತರಪ್ರದೇಶದಲ್ಲಿ ಶಿಕ್ಷಕರು, ಪೋಲೀಸರೂ ಸೇರಿದಂತೆ 16ಲಕ್ಷ ಸರಕಾರೀ ನೌಕರರರಿದ್ದಾರೆ. ಪೋಲೀಸರೂ ಈ ಹೋರಾಟಕ್ಕೆ ಬೆಂಬಲ ನೀಡಿದ್ದಾರೆ. ಅಕ್ಟೋಬರ್ 31ರಂದು ಶಿಕ್ಷಕರ ಸಂಘಟನೆಯ ಮುಖಂಡರು ಲಕ್ನೌ ಮತ್ತು ಇತರ ಜಿಲ್ಲಾ ಮುಖ್ಯಾಲಯಗಳಲ್ಲಿ ಬೈಕ್ ರ್‍ಯಾಲಿ ಆರಂಭಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲೂ ಸರಕಾರಿ ನೌಕರರು ರಾಜ್ಯದ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ ಅಕ್ಟೋಬರ್ 28ರಂದು ಹೊಸ ಪೆನ್ಶನ್ ಯೋಜನೆಯನ್ನು ರದ್ದು ಮಾಡಿ ಹಳೆಯ ಯೋಜನೆಯನ್ನೇ ಮತ್ತೆ ಜಾರಿಗೆ ತರಬೇಕು ಎಂದು ಆಗ್ರಹಿಸಿ ಉಪವಾಸ ಮುಷ್ಕರ ನಡೆಸಿದ್ದಾರೆ. ದೇಶಾದ್ಯಂತ ಇದನ್ನು ಜಾರಿಗೆ ತರುವ ಮೊದಲೇ, ಇಲ್ಲಿ ಮೇ 2003ರಲ್ಲಿ ಆಗಿನ ಬಿಜೆಪಿ ಸರಕಾರ ಹೇರಿತ್ತು.

ಪಶ್ಚಿಮ ಬಂಗಾಳ, ಇತ್ತೀಚಿನ ವರೆಗೆ ತ್ರಿಪುರಾ ಬಿಟ್ಟರೆ ಬೇರೆಲ್ಲ ರಾಜ್ಯಗಳಲ್ಲಿ ಈ ಹೊಸ ಯೋಜನೆ 2004 ರಿಂದ ಜಾರಿಗೆ ಬಂದಿದೆ. ಅದರಿಂದಾಗಿ ಅದರ ದುಷ್ಪರಿಣಾಮಗಳು ಈಗಾಗಲೇ ನೌಕರರ ಅನುಭವಕ್ಕೆ ಬಂದಿವೆ. ಪಶ್ಚಿಮ ಬಂಗಾಲದಲ್ಲಿ ಬಲಿಷ್ಟವಾಗಿರುವ ನೌಕರರ ಚಳುವಳಿಯಿಂದಾಗಿ ಇದು ಜಾರಿಗೆ ಬಂದಿಲ್ಲ. ತ್ರಿಪುರಾದಲ್ಲಿ ಇತ್ತೀಚೆಗೆ ಬಿಜೆಪಿ ಸರಕಾರ ಬಂದ ಮೇಲೆ ಅದನ್ನು ಹೇರಲಾಗಿದೆ.

ನವಂಬರ್ 26 ರೊಳಗೆ ಹಳೆ ಪೆನ್ಶನ್ ಯೋಜನೆಯನ್ನು ಮತ್ತೆ ಜಾರಿಗೆ ತರದಿದ್ದರೆ ಸಂಸದ್ ಚಲೋಗೆ ಕರೆ ನೀಡಲಾಗಿದೆ.

ಬುಲೆಟ್ ರೈಲಿನ ಗೀಳಿನಿಂದ ಪರಿಸರ ಮತ್ತು ಸಾಮಾಜಿಕ ಪರಿಗಣನೆಗಳ ಉಲ್ಲಂಘನೆ: 'ಜೆಐಸಿಎ'ಗೆ 'ಜನಮಂಚ್' ಪತ್ರ

ಪ್ರಧಾನಿಗಳ ಅಹಮದಾಬಾದ್–ಮುಂಬೈ ಬುಕೆಟ್ ರೈಲು ಗೀಳು ಜಪಾನ್ ಅಂತರ್ರಾಷ್ಟ್ರೀಯ ಸಹಕಾರ ಏಜೆನ್ಸಿ(ಜೆಐಸಿಎ) ರೂಪಿಸಿರುವ ಪರಿಸರ ಮತ್ತು ಸಾಮಾಜಿಕ ಪರಿಗಣನೆಗಳ ಮಾರ್ಗದರ್ಶಕ ಸೂತ್ರಗಳನ್ನು ಉದ್ಧಟತನದಿಂದ ಉಲ್ಲಂಘಿಸುತ್ತಿದೆ. ಈ ಅಂಶವನ್ನು ಈ ಪ್ರಾಜೆಕ್ಟ್‌ನಿಂದ ತೀವ್ರ ತೊಂದರೆಗಳಿಗೆ ಒಳಗಾಗುತ್ತಿರುವ ಮಹಾರಾಷ್ಟ್ರ ಮತ್ತು ಗುಜರಾತಿನ ರೈತರು ಮತ್ತು ಆದಿವಾಸಿಗಳ ಜಂಟಿ ಸಂಘಟನೆ 'ಜನಮಂಚ್' ಜೆಐಸಿಎ ಗಮನಕ್ಕೆ ತಂದಿದೆ.

'ಮುಂಬೈ ಅಹಮದಾಬಾದ್ ಹೈಸ್ಪೀಡ್ ರೈಲ್'(ಎಂಎಹೆಚ್‌ಎಸ್‌ಆರ್) ಎರಡೂ ರಾಜ್ಯಗಳಲ್ಲಿ ರೈತರ ಮತ್ತು ಆದಿವಾಸಿಗಳ ಲಿಖಿತ ಒಪ್ಪಿಗೆಯನ್ನು ಪಡೆಯದೆ ಅವರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವ ಉದಾಹರಣೆಗಳನ್ನು ಜೆಐಸಿಎ ಗೆ ಬರೆದ ಪತ್ರದಲ್ಲಿ ನಮೂದಿಸಲಾಗಿದೆ. ಸಾಮಾಜಿಕವಾಗಿ ಅಂಚಿಗೆ ತಳ್ಳಲ್ಪಟ್ಟಿರುವ ಹಳ್ಳಿಗಳನ್ನು ಸ್ವಾಧೀನ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲಿ ಹೊರಗಿಡಲು ಪೋಲೀಸ್ ಪಡೆಯನ್ನು ನೆಲೆಗೊಳಿಸಿ ಭೀತಿಯ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ.

ಸ್ಥಳೀಯ ಮೂಲನಿವಾಸಿಗಳ ಮುಕ್ತ ಮತ್ತು ಮಾಹಿತಿಪೂರ್ಣ ಒಪ್ಪಿಗೆಯಿಲ್ಲದೆ, ಯಾವುದೇ ಕಾರಣಕ್ಕೆ ಅವರನ್ನು ಬೇರೆಡೆಗಳಲ್ಲಿ ನೆಲೆಸುವಂತೆ ಮಾಡುವ ಕ್ರಮಗಳಿಗೆ ಕೈಹಾಕಬಾರದು ಎಂದು ಜೆಐಸಿಎ ಮಾರ್ಗದರ್ಶನ ಸೂತ್ರಗಳು ಹೇಳುತ್ತವೆ. ಆದರೆ ಈ ಬುಲೆಟ್ ರೈಲುದಾರಿಯ ಪ್ರಸ್ತಾವಿತ ಪ್ರದೇಶದಲ್ಲಿ ಇವೆಲ್ಲ ವನ್ನೂ ಉಲ್ಲಂಘಿಸಲಾಗುತ್ತಿದೆ ಎಂಬುದನ್ನು ಜನಮಂಚ್‌ನ ಈ ಪತ್ರ ಜೆಐಸಿಎ ಗಮನಕ್ಕೆ ತಂದಿದೆ.

ಅಕ್ಟೋಬರ್ 31 ರಂದು ಸಮಾವೇಶಗೊಂಡ ಜನಮಂಚ್‌ಗೆ ಸಿಪಿಐ, ಸಿಪಿಐ(ಎಂ) ಮತ್ತು ಸಿಪಿಐ(ಎಂಎಲ್) ಬೆಂಬಲ ನೀಡಿದೆ. ಕಾಂಗ್ರೆಸ್, ಜನತಾದಳ ಇತ್ಯಾದಿಗಳೂ ಬೆಂಬಲಿಸಲು ಮುಂದೆ ಬಂದಿವೆ.



ಅಲ್ಲಿ ಭಾರೀ ವೆಚ್ಚದ 'ಐಕ್ಯತೆಯ ಪ್ರತಿಮೆ'ಯ ಉದ್ಘಾಟನೆಯ ಅಬ್ಬರ –ಇಲ್ಲಿ 192 ಸಂತ್ರಸ್ತ ಮೀನುಗಾರ ಕುಟುಂಬಗಳಿಗೆ ಮರುವಸತಿ

ಅಕ್ಟೋಬರ್ 31 ರಂದು ದೇಶದ ಮೊದಲ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲರ 143ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಐಕ್ಯತೆಯ ಪ್ರತಿಮೆ' ಎಂದು ಹೆಸರಿಸಿರುವ ಅವರ ಪ್ರತಿಮೆಯನ್ನು ಉದ್ಘಾಟಿಸಿ ಪ್ರಧಾನ ಮಂತ್ರಿಗಳು ತಮ್ಮ 'ಹೆಮ್ಮೆಯ ಸಾಧನೆ'ಯ ಘೋಷಣೆ ಮಾಡುತ್ತಿರುವ ವೇಳೆಗೆ ಸುತ್ತಲಿನ 72 ಹಳ್ಳಿಗಳಲ್ಲಿ ಸುಮಾರು 75,000 ಬುಡಕಟ್ಟು ಜನಗಳು 'ಶೋಕಾಚರಣೆ ದಿನ'ವಾಗಿ ಆಚರಿಸಿದ್ದಾರೆ. ಶೋಕಾಚರಣೆಯ ಪ್ರತೀಕವಾಗಿ ಈ ಹಳ್ಳಿಗಳಲ್ಲಿ ಯಾವ ಬುಡಕಟ್ಟು ಸಮುದಾಯದ ಮನೆಯಲ್ಲೂ ಅಂದು ಒಲೆ ಹಚ್ಚುವುದಿಲ್ಲ ಎಂದು ಬುಡಕಟ್ಟು ಸಂಘಟನೆಗಳ ಮುಖಂಡರು ಹೇಳಿರುವುದಾಗಿ ವರದಿಯಾಗಿದೆ. ಬುಡಕಟ್ಟು ಕುಟುಂಬಗಳ ನೆಲ, ಜಲಕ್ಕೆ ಭಾರೀ ಹಾನಿಯುಂಟು ಮಾಡುತ್ತಿರುವ, ಪ್ರತಿಯಾಗಿ ಅವರಿಗೆ ಸೂಕ್ತ ಪರಿಹಾರಗಳನ್ನಾಗಲೀ, ಮೂಲರಚನೆಗಳನ್ನಾಗಲೀ ಒದಗಿಸುತ್ತಿಲ್ಲ ಎಂದು 2010 ರಿಂದಲೂ ಈ ಬುಡಕಟ್ಟು ಜನಗಳು ದೂರುತ್ತಿದ್ದಾರೆ.

22 ಸರಪಂಚರುಗಳು ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು, "ನಾವು ಇನ್ನೂ ಶಾಲೆಗಳು, ಆಸ್ಪತ್ರೆಗಳು ಮತ್ತು ಕುಡಿಯುವ ನೀರಿಗಾಗಿ ಕಷ್ಟಪಡುತ್ತಿರುವಾಗ ನೀವು ಒಂದು ಪ್ರತಿಮೆಗಾಗಿ ಮತ್ತು ಈಗ ಇದರ ಉದ್ಘಾಟನೆಗಾಗಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ನಿಮ್ಮನ್ನು ನಾವು ನಮ್ಮ ಜಿಲ್ಲೆಯಲ್ಲಿ ಸ್ವಾಗತಿಸಲಾರೆವು ಎಂದು ಭಾರವಾದ ಹೃದಯದಿಂದ ಹೇಳಬೇಕಾಗಿದೆ" ಎಂದಿರುವುದಾಗಿ ವರದಿಯಾಗಿದೆ (ನ್ಯೂಸ್ ಸೆಂಟ್ರಲ್24/7, ಅಕ್ಟೋಬರ್ 29).

ಉದ್ಘಾಟನೆಯ ಭಾಗವಾದ 'ಏಕತಾ ಯಾತ್ರಾ'ಗೆಂದು ಸರಕಾರೀ ವೆಚ್ಚದಲ್ಲಿ ಮುದ್ರಿಸಿದ್ದ, ಐಕ್ಯತೆಯ ಪ್ರತಿಮೆಯೊಂದಿಗೆ ಪ್ರಧಾನಿ ಮತ್ತು ಗುಜರಾತ್ ಮುಖ್ಯಮಂತ್ರಿಗಳ ದೊಡ್ಡ ಭಾವಚಿತ್ರಗಳಿದ್ದ ಪೋಸ್ಟರುಗಳನ್ನೆಲ್ಲ ಹರಿದು ಹಾಕಲಾಗಿದೆ, ಅದರಿಂದ ಕುಪಿತಗೊಂಡ ಸರಕಾರ ಪ್ರಧಾನಿ ಮತ್ತು ಮುಖ್ಯ ಮಂತ್ರಿಗಳ ಮತ್ತು ಐಕ್ಯತೆಯ ಪ್ರತಿಮೆಯ ಭಾವಚಿತ್ರಗಳನ್ನು ಸಣ್ಣದು ಮಾಡಿ ಬುಡಕಟ್ಟು ಸಮುದಾಯದ ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡ ರವರ ಚಿತ್ರವಿದ್ದ ಪೋಸ್ಟರುಗಳನ್ನು ಹಚ್ಚಿದಾಗ, ಅದರಲ್ಲಿ ಮುಂಡಾರವರ ಚಿತ್ರವನ್ನು ಬಿಟ್ಟು ಉಳಿದೆಲ್ಲಕ್ಕೂ ಮಸಿ ಬಳೆದು ಬುಡಕಟ್ಟು ಜನರು ತಮ್ಮ ಪ್ರತಿಭಟನೆ ವ್ಯಕ್ತಪಡಿಸಿರುವುದಾಗಿಯೂ ವರದಿಯಾಗಿದೆ.

ಈ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಪ್ರತಿಭಟನೆಯ ಮುಖಂಡರನ್ನೆಲ್ಲ ಬಂಧಿಸಿ, ಭಾರೀ ಪೋಲೀಸ್ ಬಂದೋಬಸ್ತಿನ ನಡುವೆ ಸುಮಾರು 3000 ಕೋಟಿ ರೂ.ಗಳ ಭಾರೀ ವೆಚ್ಚದ ಈ ಪ್ರತಿಮೆಯನ್ನು ಅನಾವರಣಗೊಳಿಸುವ ವೇಳೆಗೆ, ಅತ್ತ ಕೇರಳದಲ್ಲಿ ಕಳೆದ ವರ್ಷ ಒಖಿ ಸುಂಟರಗಾಳಿಯಿಂದ ಸಂತ್ರಸ್ತರಾದ ಮೀನುಗಾರರ ಮರುವಸತಿಗೆಂದು 20 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ ವಸತಿ ಸಮುಚ್ಚಯಗಳನ್ನು ಅಲ್ಲಿಯ ಮುಖ್ಯಮಂತ್ರಿಗಳು 192 ಮೀನುಗಾರ ಕುಟುಂಬಗಳಿಗೆ ಹಸ್ತಾಂತರಿಸಿರುವ ಸುದ್ದಿ ಗುಜರಾತ್ ಮಾದರಿ ಮತ್ತು ಎಡ ಪರ್ಯಾಯದ ನಡುವಿನ ವ್ಯತ್ಯಾಸವನ್ನು ಎತ್ತಿತೋರಿದೆ.

ಬ್ರೆಜಿಲ್ : ಆತಂಕಕಾರಿ ಬೆಳವಣಿಗೆ

ಉಗ್ರ ಬಲಪಂಥೀಯ ಬೋಲ್ಸೊನಾರೊ ವಿಜಯ

ಕಳೆದ ಅಕ್ಟೋಬರ್ 28 ರಂದು ನಡೆದ, ಬ್ರೆಜಿಲ್‌ನ ಅಧ್ಯಕ್ಷೀಯ ಚುನಾವಣೆಯ ಎರಡನೇ ಸುತ್ತಿನ ಮತದಾನದಲ್ಲಿ ಉಗ್ರ ಬಲಪಂಥೀಯ ಸೋಷಿಯಲ್ ಲಿಬರಲ್ ಪಾರ್ಟಿಯ (ಪಿ.ಎಸ್.ಎಲ್) ಹಾಗೂ ಬ್ರೆಜಿಲಿಯನ್ ಸೈನ್ಯದ ಮಾಜಿ ಮುಖ್ಯಸ್ಥ ಜಾಯರ್ ಬೋಲ್ಸೊನಾರೊ ರವರು ಶೇ.55.3 ರಷ್ಟು ಮತಗಳನ್ನು ಪಡೆದು ಬ್ರೆಜಿಲ್‌ನ ನೂತನ ಅಧ್ಯಕ್ಷ ರಾಗಿ ಆಯ್ಕೆಯಾಗಿದ್ದಾರೆ. ಇವರು ಮುಂದಿನ ವರ್ಷದ ಆರಂಭದಲ್ಲಿ ಅಧಿಕಾರವನ್ನು ಸ್ವೀಕರಿಸಲಿದ್ದಾರೆ. ಇವರ ಪ್ರತಿಸ್ಪರ್ಧಿಯಾಗಿದ್ದ ಎಡ ಪಂಥೀಯ–ವರ್ಕರ್ಸ್ ಪಾರ್ಟಿಯ ಫರ್ನಾಂಡೊ ಹಡ್ಡಾದ್ ಶೇ 44.7 ರಷ್ಟು ಎರಡನೆಯ ಸ್ಥಾನ ಪಡೆದು ಸೋತಿದ್ದಾರೆ. ಹಡ್ಡಾದ್‌ರು ಮೊದಲ ಸುತ್ತಿನ ಮತಗಳಿಕೆಗಿಂತ 1.3. ಕೋಟಿ ಹೆಚ್ಚಿನ ಮತಗಳನ್ನು ಎರಡನೇ ಸುತ್ತಿನಲ್ಲಿ ಪಡೆದರೂ ಸಹಾ ಬೋಲ್ಸೊನಾರೊರನ್ನು ಹಿಮ್ಮೆಟ್ಟಿಸುವಷ್ಟು ಮತ ಗಳಿಸಲು ಸಾಧ್ಯವಾಗಲಿಲ್ಲ. ಜೊತೆಗೆ ಬ್ರೆಜಿಲ್‌ನಲ್ಲಿ ಮತದಾನ ಕಡ್ಡಾಯವಾಗಿದ್ದರು ಸಹಾ, ಶೇ.21.17 ರಷ್ಟು ಮತದಾರರು ಗೈರು ಹಾಜರಾಗಿದ್ದರು. ಹಾಗೆಯೇ, ಶೇ.7.43 ರಷ್ಟು ಮತದಾರರು ಮತ ಕೇಂದ್ರಕ್ಕೆ ಬಂದರು ಸಹ, ಮತದಾನ ಚಲಾವಣೆ ಮಾಡದೆ ಅಂದರೆ ಗುರುತಿನ ಚೀಟಿಯನ್ನು ತೆಗೆದುಕೊಂಡು ಸ್ಟಾಂಪು ಒತ್ತದೆ ಹಿಂತಿರುಗಿದ್ದಾರೆ. ಇದು ಅವರಲ್ಲಿದ್ದ ನಿರಾಶೆ ಅಥವಾ ಬೇಸರ ಅಥವಾ ಸೊಂಬೇರಿತನವನ್ನು ಎತ್ತಿ ತೋರಿಸಿದೆ.

ದ್ವೇಷ ಮತ್ತು ಭಯ ಒಂದೆಡೆ

ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಹಕ್ಕುಗಳ ರಕ್ಷಣೆ ಮತ್ತೊಂದೆಡೆ

ಲ್ಯಾಟಿನ್ ಅಮೇರಿಕದ ಅತ್ಯಂತ ದೊಡ್ಡ ದೇಶ ಬ್ರೆಜಿಲಿನ ಈ ಬಾರಿಯ ಅಧ್ಯಕ್ಷೀಯ ಚುನಾವಣೆ ಜಗತ್ತಿನ ಗಮನ ಸೆಳೆದಿತ್ತು. ಏಕೆಂದರೆ, ಬ್ರೆಜಿಲ್‌ನ ಇತಿಹಾಸದಲ್ಲಿಯೇ ಎರಡು ವಿರೋಧಿ ಯೋಜನೆಗಳು ಮತ್ತು ರೂಪುರೇಷೆಗಳ ಆಧಾರದಲ್ಲಿ ಚುನಾವಣೆಯ ಕಣ ಅತ್ಯಂತ ಧ್ರುವೀಕರಣಕ್ಕೆ ಒಳಗಾಗಿತ್ತು. ಸೋಷಿಯಲ್ ಲಿಬರಲ್ ಪಕ್ಷದ (ಪಿ.ಎಸ್.ಎಲ್) ಉಗ್ರ ಬಲಪಂಥೀಯ ಅಭ್ಯರ್ಥಿ ಬೋಲ್ಸೊನಾರೊ ಬ್ರೆಜಿಲಿನ ಟ್ರಂಪ್ ಎಂದೇ ಅನೇಕರು ಅವರನ್ನು ಬಿಂಬಿಸಿದ್ದರು. ಇವರ ಚುನಾವಣಾ ಪ್ರಚಾರದಲ್ಲಿ ದ್ವೇಷ ಮತ್ತು ಭಯವನ್ನು ಹುಟ್ಟಿಸಲಾಗಿತ್ತು. ಇನ್ನೊಂದು ಬಣವಾದ ವರ್ಕರ್ಸ್ ಪಕ್ಷದ(ಪಿ.ಟಿ) ಅಂದರೆ, ಫರ್ನಾಂಡೊ ಹಡ್ಡಾದ್ ರು, ತಮ್ಮ ಪ್ರಚಾರದಲ್ಲಿ ಬ್ರೆಜಿಲ್‌ನ ಸಾರ್ವಭೌಮತ್ವ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಜನರ ಹಕ್ಕುಗಳ ರಕ್ಷಣೆಯನ್ನು ಪ್ರಮುಖವಾಗಿ ಬಳಸಿದ್ದರು. ಇದೀಗ ಫಲಿತಾಂಶ ಹೊರಬಂದಿದೆ. ಬೋಲ್ಸೊನಾರೊ ರವರ ವಿಜಯವು ಬ್ರೆಜಿಲ್ ಜನರನ್ನು ಹಾಗೂ ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ವಾದಿಗಳನ್ನು ಅಲುಗಾಡಿಸುವಂತಹ ಆತಂಕ ಆವರಿಸಿದೆ. ಜಗತ್ತಿನಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆಯ ದೇಶಗಳಲ್ಲಿ ಬ್ರೆಜಿಲ್ ನಂತಹ ಅತ್ಯಂತ ಉಗ್ರ–ಬಲಪಂಥೀಯ ಫ್ಯಾಸಿಸ್ಟ್ ಅಧ್ಯಕ್ಷ ರನ್ನು ಇಲ್ಲಿಯ ವರೆವಿಗೂ ಯಾವ ದೇಶವು ಹೊಂದಿರಲಾರವು. ಮುಂದಿನ ದಿನಗಳಲ್ಲಿ ಬ್ರೆಜಿಲ್ ಗೆ ಏನು ಕಾದಿದೆಯೋ ನಾವಂತು ಊಹಿಸಲು ಸಾಧ್ಯವಿಲ್ಲ ಎಂದು ವಿಶ್ಲೇಷಣೆ ಮಾಡಲಾಗಿದೆ. ಇನ್ನು ಮುಂದೆ ನಾನು ಪತ್ರಿಕೆ ಗಳೊಂದಿಗೆ ಯಾವ ರೀತಿಯ ಸಂವಾದ ಅಥವಾ ಹೇಳಿಕೆಗಳನ್ನು ನೀಡುವುದಿಲ್ಲ, ಬದಲಿಗೆ ಕೇವಲ ಸಾಮಾಜಿಕ ಜಾಲತಾಣಗಳ ಮೂಲಕ ಮಾತ್ರ ಅಧಿಕೃತ ಹೇಳಿಕೆ ಗಳನ್ನು ನೀಡುತ್ತೇನೆ ಎಂದು ಬೋಲ್ಸೊನಾರೊ ಹೇಳಿರುವುದು ಗಮನಾರ್ಹವಾಗಿದೆ.



ಅತ್ಯಂತ ತೀವ್ರ ಉಗ್ರ ಬಲಪಂಥೀಯ ಅಧಕ್ಷ

ಬೋಲ್ಸೊನಾರೊ ಅವರು ಅತ್ಯಂತ ತೀವ್ರ ಉಗ್ರ ಬಲಪಂಥೀಯರಾಗಿದ್ದು ಅವರ ಆಡಳಿತದಲ್ಲಿ, ಯು.ಎಸ್, ಫಿಲಿಪೈನ್ಸ್ ಮತ್ತು ಹಂಗೇರಿ ರಾಷ್ಟ್ರಗಳ ಹಾದಿಯಲ್ಲಿ ಹೋಗಲು ನಿರ್ಧರಿಸಿದಂತಿದೆ.

ಬೋಲ್ಸೊನಾರೊ, ಒಬ್ಬ ಮಾಜಿ ಸೈನ್ಯ ದ ಕ್ಯಾಪ್ಟನ್, 1991 ರಲ್ಲಿಯೇ ಪಾರ್ಲಿಮೆಂಟಿಗೆ ಚುನಾಯಿತರಾಗಿದ್ದರು. ಸೋಷಿಯಲ್ ಲಿಬರಲ್ ಪಕ್ಷದ ನಾಯಕರು, ಆಡಳಿತ ವಿರೋಧಿ ಗುಂಪಿನಲ್ಲಿ ಗುರುತಿಸಿಕೊಂಡು ಬಂದವರು, ಹಿಂಸಾತ್ಮಕ ಕೃತ್ಯಗಳಿಂದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಬಹುದು ಎಂಬ ನೀತಿಯಲ್ಲಿ ನಂಬಿಕೆ ಇಟ್ಟುಕೊಂಡಿರುವವರು. ಇವರು ಚುನಾವಣೆ ಯಲ್ಲಿ ಗೆದ್ದ ನಂತರ ಮೊದಲು ಮಾಡಿದ ಕೆಲಸವೆಂದರೆ, 'ಮಿಲಿಟರಿ ಪಡೆಗಳಿಂದ ಬ್ರೆಜಿಲ್‌ನ ಬೀದಿಗಳಲ್ಲಿ ಪೆರೇಡ್ ನ ರಿಹರ್ಸಲ್ ನಡೆಸಿದ್ದು. 1964–1985 ರ ಅವಧಿಯಲ್ಲಿ ಮಿಲಿಟರಿ ಸರ್ವಾಧಿಕಾರಿಗಳಾಗಿದ್ದ ಪೆರೂಸ್ ಅಲ್ಬೆರ್ಟೊ ಫ್ಯೂಜಿಮೋರಿ ಮತ್ತು ಚಿಲ್ಲೀಸ್ ಅಗಸ್ಟೊ ಪಿನೋಚೆಟ್ ರನ್ನು ಹೊಗಳಿದ್ದಾರೆ ಮಾತ್ರವಲ್ಲದೆ, ನಾನು ಸರ್ವಾಧಿಕಾರದ ಪರ ಎಂದು ಕೊಚ್ಚಿಕೊಂಡಿದ್ದಾರೆ. ಈ ಮೂಲಕ ಜಗತ್ತಿನಲ್ಲಿ ಬ್ರೆಜಿಲ್ ರಾಜಕೀಯದಲ್ಲಿ ಮಿಲಿಟರಿ ಮಹತ್ವದ ಪಾತ್ರವ ವಹಿಸಲಿದೆ ಎಂಬ ಸಂದೇಶವನ್ನು ಜಗತ್ತಿಗೆ ರವಾನಿಸಿದ್ದಾರೆ. ಹಾಗೆಯೇ ಸಾರ್ವಜನಿಕರು ಬಂದೂಕುಗಳನ್ನು ಖರೀದಿಸಲು ಪ್ರೋತ್ಸಾಹಿಸಲು ಮುಂದಾಗಿದ್ದಾರೆ

ಬೀಫ್, ಬೈಬಲ್ ಮತ್ತು ಬುಲೆಟ್

ಬೀಫ್, ಬೈಬಲ್ ಮತ್ತು ಬುಲೆಟ್ – ಈ ಮೂರು ಅಂಶಗಳು ಇವರ ಗೆಲುವಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿವೆ ಎಂಬ ಅಭಿಪ್ರಾಯಕ್ಕೆ ಕೆಲವು ರಾಜಕೀಯ ವಿಶ್ಲೇಷಕರು ಬಂದಿದ್ದಾರೆ. 'ಬೀಫ್' ನಲ್ಲಿ ಒಳಗೊಂಡಿರುವ ಅಂಶಗಳೆಂದರೆ, ಕೃಷಿ, ಜಾನುವಾರು, ಗಣಿಗಾರಿಕೆ, ಮತ್ತು ಶಕ್ತಿ ಉದ್ಯಮ ಗಳಂತಹ ವಿವಿಧ ವಾಣಿಜ್ಯ ಕ್ಷೇತ್ರಗಳು. ಈ ಉದ್ಯಮಗಳ ವಾಣಿಜ್ಯ–ವಹಿವಾಟಿನ ಅಭಿವೃದ್ಧಿಗೆ, ಪರಿಸರ ಸಂರಕ್ಷಣೆ ಮತ್ತು ಕಾರ್ಮಿಕ ಕಾನೂನಿನ ನಿರ್ಬಂಗಳು ಇವೆ. ಈ ನಿಯಮಗಳನ್ನು ಸಡಿಲಿಸುವ ಮೂಲಕ 160 ಕೋಟಿ ಎಕರೆ ಅಮೆಜಾನ್ ಮಳೆಗಾಡು ಪ್ರದೇಶದಲ್ಲಿ ಮಾರುಕಟ್ಟೆ ವಿಸ್ತರಣೆ ಮಾಡಲಾಗುವುದು ಎಂಬ ಮಾತನ್ನು ಬೋಲ್ಸೊನಾರೊ ತಮ್ಮ ಕಾರ್ಯ ಸೂಚಿಯಲ್ಲಿ ಹೊಂದಿದ್ದಾರೆ.. ಇದರಿಂದ ಕೆನಡಾ, ಸ್ವಿಡ್ಜರ್ಲ್ಯಾಂಡ್, ಅಮೇರಿಕಾ ಮತ್ತು ಆಸ್ಟ್ರೇಲಿಯಾ ವಾಣಿಜ್ಯ ಆಸಕ್ತಿಗಳಿಗೆ ಭಾರೀ ಲಾಭವಾಗಲಿವೆ. ವಿಶ್ವಸಂಸ್ಥೆಯ ನಿಯಮಗಳಿಂದಾಗಿ ಇಲ್ಲಿಯವರೆವಿಗೂ ಬ್ರೆಜಿಲ್ ಸಾರ್ವಭೌಮತ್ವ ಕ್ಕೆ ಹಿನ್ನಡೆಯುಂಟಾಗಿತ್ತು. ಅವುಗಳೆಲ್ಲವನ್ನು ಇದೀಗ ಮುಕ್ತ ಮಾರುಕಟ್ಟೆ ಗೆ ತೆರೆಯಲಾಗುವುದು. ಇದು ಬೊಲ್ಸನಾರೋ ಬೀಫ್ ನಲ್ಲಿರುವ ಅಂಶಗಳು.

ಎರಡನೇ ಅಂಶವೆಂದರೆ ಧರ್ಮ. ಬ್ರೆಜಿಲ್ ನಲ್ಲಿ ಮಹಾನ್ ಸಾಮಾಜಿಕ ಬದಲಾಣೆ ತರುವಂತದ್ದು, ಕ್ಯಾಥೊಲಿಕ್ ಸಮಾಜವಾದದ ಒಂದು ರೂಪವಾದ ಲಿಬರೇಶನ್ ಥೀಯಾಲಜಿ ಬೇರೂರಿತ್ತು. ಅಂದರೆ ಚರ್ಚ್ ಗಳು ಬಡವರನ್ನು ಆಯ್ಕೆ ಮಾಡಿಕೊಂಡಿದ್ದವು. ಆದರೆ, ಇದನ್ನು ತಿರುವು ಮುರುವಾಗಿಸಿ ಬಡವರೆ ಚರ್ಚ್ ಗಳನ್ನು ಆಯ್ಕೆಮಾಡಿಕೊಳ್ಳುತ್ತಾರೆ ಎಂದು ಮಾಡಲಾಗಿದೆ. ವಿಶೇಷವಾಗಿ ಇಲ್ಲಿ ಬಡವರು ಇವ್ಯಾಂಜೆಲಿಕ್ ವಾದದ ಕ್ರೈಸ್ತ ಧರ್ಮವನ್ನು ಅನುಸರಿಸಿ, ಕ್ಯಾಥೊಲಿಕ್ ಚಳುವಳಿಯ ಭಾಗವಾಗುತ್ತಿದ್ದಾರೆ. ಅಮೇರಿಕಾದ ಪ್ರಭಾವದಿಂದಾಗಿ ಬ್ರೆಜಿಲ್ ನಲ್ಲಿ ಹೆಚ್ಚಾಗಿ ಇವ್ಯಾಂಜೆಲಿಕ್ ಕ್ರೈಸ್ತ ಧರ್ಮಕ್ಕೆ ಪರಿವರ್ತನೆ ಗೊಂಡಿದ್ದಾರೆ. ಸುಮಾರು 100 ಕೋಟಿಗೂ ಮೀರಿದ ಸದಸ್ಯ ರನ್ನು ಈ ಚರ್ಚ್ ಜಗತ್ತಿನಾದ್ಯಂತ ಹೊಂದಿದೆ. ಅದರ ನಾಯಕ ಎಡಿರ್ ಮೆಸೆಡೊ ಅವರ, "ರೆಕಾರ್ಡ್ ಟಿವಿ" ಬ್ರೆಜಿಲಿನಲ್ಲಿ ಎರಡನೇ ದೊಡ್ಡ ದೂರದರ್ಶನ ಜಾಲವನ್ನು ಹೊಂದಿದ್ದಾರೆ, ಇವರು ಕೂಡಾ, ಬೋಲ್ಸೊನಾರೊಗೆ ಪ್ರಚಾರದಲ್ಲಿ ಪರೋಕ್ಷವಾಗಿ ಸಹಕರಿಸಿದ್ದಾರೆ ಎಂದು ಬಲ್ಲ ಮೂಲಗಳು ಪ್ರಸ್ತುತ ಪಡಿಸಿವೆ.

ಜಗದ ಸುತ್ತು

ನಾಗರಾಜ ನಂಜುಂಡಯ್ಯ

ಮೂರನೇ ಅಂಶ ಇದು ಮಿಲಿಟರಿ ಮತ್ತು ಪೋಲೀಸ್‌ರಿಗೆ ಅನ್ವಯಿಸುತ್ತದೆ. ಇವೆರಡೂ ವಿಷಯಗಳಲ್ಲಿ ಬೋಲ್ಸೊನಾರೊರನ್ನು ಜನರು ಚಾಂಪಿಯನ್ ಆಗಿ ಗುರುತಿಸಿಕೊಂಡಿದ್ದಾರೆ. ಪ್ರಮುಖವಾಗಿ 2017 ರಲ್ಲಿ ಹೆಚ್ಚಾಗಿದ್ದ ಅಪರಾಧದ ಭಾಗವಾಗಿ ದಿನಕ್ಕೆ 175 ಕೊಲೆಗಳು ನಡೆಯುತ್ತಿದ್ದವು. ಸಾಮಾನ್ಯ ಮತ್ತು ಮಧ್ಯಮ ವರ್ಗದ ಜನರು ಸಾಯುತ್ತಿದ್ದರು. ಇದಕ್ಕೆ ಸಾಮಾಜಿಕ ಚಳುವಳಿಗಳು ಕಾರಣ. ಇವರು ಭಯೋತ್ಪಾದಕ ರೆಂದು ಬೋಲ್ಸೊನಾರೊ ಜನರನ್ನು ನಂಬಿಸಿದ್ದಾರೆ. ಹಾಗೆಯೇ, ಅಪರಾಧಗಳಿಂದ ಬೇಸತ್ತು ಹೋಗಿದ್ದ ಮಧ್ಯಮ ವರ್ಗಗಳ ಭಾವನೆಗಳನ್ನು ವಾಕ್ ಚಾತುರ್ಯದಿಂದ ಕೆದಕಿ ಹೆಚ್ಚಿನ ಪೋಲೀಸರನ್ನು ಬಳಸಿಕೊಂಡು, ಇಂತಹ ಅಪರಾದದಲ್ಲಿ ಪಾಲ್ಗೊಂಡಿದ್ದ ಬಡವರನ್ನು ಬಲಿಪಶು ಮಾಡುವಲ್ಲಿ ಯಶಸ್ವಿಯಾದರು. ಬಡವರ ಬಗ್ಗೆ ಪೂರ್ವಗ್ರಹ ಪೀಡಿತರಾದ ಮಧ್ಯಮ ವರ್ಗದ ಮನಸ್ಸನ್ನು ಗೆದ್ದರು.

ಬ್ರೆಜಿಲ್ ಅಮೇರಿಕಾ ಕಡೆ ವಾಲಿಸುವ ಸಂಚು

ಚುನಾವಣಾ ಫಲಿತಾಂಶ ಬಂದ ನಂತರ ಅಮೇರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರು ಬೋಲ್ಸೊನಾರೊ ರನ್ನು ಮುಕ್ತ ಕಂಠದಿಂದ ಅಭಿನಂದಿಸಿದ್ದಾರೆ. ಬೋಲ್ಸೊನಾರೊ ರನ್ನು 'ಬ್ರಿಕ್ಸ್'ನಿಂದ ಹೊರಬರಲು ಅಥವಾ ಬ್ರೆಜಿಲ್ ಪಾತ್ರವನ್ನು ಕಡಿತಗೊಳಿಸುವ ಪ್ರಕ್ರಿಯೆಯು ಆರಂಭಗೊಳ್ಳುವ ಸಾಧ್ಯತೆಯ ಬಗ್ಗೆ ಮಾತನಾಡಿದ್ದಾರೆ ಎನ್ನಲಾಗಿದೆ. ಬ್ರೆಜಿಲ್ ತನ್ನ ಅಧೀನ ಮಿತ್ರತ್ವವನ್ನು ಅಮೇರಿಕಾ ದೊಂದಿಗೆ ಮನರಾರಂಭಿಸಬೇಕು, ಹಾಗೂ ಬ್ರೆಜಿಲಿಯನ್ ವ್ಯಾಪಾರ ವ್ಯವಹಾರದಲ್ಲಿ ತನ್ನ ಆಸಕ್ತಿಯನ್ನು ಎತ್ತಿ ಹಿಡಿಯಬೇಕು ಎಂಬುದೇ ಟ್ರಂಪ್ ಮೂಲ ಆಶ್ರಯ ವಾಗಿದೆ. ಲ್ಯಾಟಿನ್ ಅಮೇರಿಕಾದಲ್ಲಿ ಸ್ವತಂತ್ರ ಪ್ರಾದೇಶಿಕ ಶಕ್ತಿಯಾಗಿ ಬ್ರೆಜಿಲಿನ ಪಾತ್ರ ಮತ್ತು ಜಾಗತಿಕ ಬಹು–ಧ್ರುವೀಯತೆಯ ವಿರುದ್ಧ ಗಂಭೀರ ಹೊಡೆತವನ್ನು ನೀಡಲು ಹೊಸ ಸಂಚು ರೂಪಿಸಲು, ಬ್ರೆಜಿಲ್ ನ ರಾಜಕೀಯ ಬೆಳವಣಿಗೆ ಯನ್ನು ಬಳಸಿಕೊಳ್ಳುವ ಕಾತುರದಲ್ಲಿ ಅಮೇರಿಕಾ ಇದೆ.

ಎಡ–ಪ್ರಗತಿಪರ ಶಕ್ತಿಗಳಿಗೆ ಹೊಸ ಸವಾಲುಗಳು

ಬೋಲ್ಸೊನಾರೊ ತಮ್ಮ ಸಚಿವ ಸಂಪುಟದಲ್ಲಿ, ಹೆಚ್ಚು ಮಿಲಿಟರಿ ಜನರನ್ನು ತುಂಬಲು ಈಗಾಗಲೇ ಒತ್ತುಕೊಟ್ಟು, ವಿರೋಧಿ ರಾಜಕೀಯ ಗುಂಪುಗಳಾದ, ಕಮ್ಯೂನಿಸ್ಟ್, ಪಿ.ಟಿ (ವರ್ಕರ್ಸ್ ಪಾರ್ಟಿ) ಮತ್ತು ಎಮ್.ಎಸ್.ಟಿ ಮಟ್ಟ ಹಾಕಲು ಹಾಗೂ ಪ್ರಜಾಸತ್ತಾತ್ಮಕ ಸಂಘಟನೆಗಳ ಹಕ್ಕುಗಳನ್ನು ಕಡಿತಗೊಳಿಸುವ ಯೋಜನೆಗಳನ್ನು ಹೊಂದಿದ್ದಾರೆ. ಚುನಾವಣೆಯ ನಂತರ ಸಾವೋ ಪೌಲೊ ದಲ್ಲಿ ಬಹಿರಂಗವಾಗಿ ಹೇಳಿಕೆ ನೀಡಿ, ಬ್ರೆಜಿಲ್‌ನಲ್ಲಿ ಕೆಂಪಾವುಟದ ಕೆಲಸ ಮುಗಿದಂತೆ. ಬ್ರೆಜಿಲ್‌ನ ಇತಿಹಾಸದ ಪುಟಗಳಿಂದ ಅವರ ಇಲ್ಲವಾಗಿಸುವ ಕೆಲಸವನ್ನು ಮಾಡಬೇಕಾಗಿದೆ ಎಂದಿದ್ದಾರೆ.

ಎಡ–ಪ್ರಗತಿಪರ ಶಕ್ತಿಗಳು ತೀವ್ರವಾಗಿಯೇ ಉತ್ತರಿಸಿದ್ದಾರೆ. ನಾವು ಶೇ.45 ರಷ್ಟು ಮತದಾರರ ಬೆಂಬಲ ಪಡೆದಿದ್ದೇವೆ. ತಲೆ ಎತ್ತಿ ಜನರ ಮದ್ಯೆ ದುಡಿಯುತ್ತೇವೆ. ನಮ್ಮ ತಾಯ್ನಾಡು ಬ್ರೆಜಿಲ್ ನ್ನು ಯಾವುದೇ ಕಾರಣಕ್ಕೂ ಅಮೇರಿಕದ ಕೈಗೊಂಬೆ ಅಥವಾ ಅದರ ಜೂನಿಯರ್ ಪಾಲುದಾರರಾಗಲು ಬಿಡುವುದಿಲ್ಲ. 2002 ರಿಂದ 2015ರ ವರೆಗೆ, ಸುಮಾರು 13 ವರುಷಗಳ ಲೂಲಾರ ಅಧ್ಯಕ್ಷತೆಯಲ್ಲಿ ಹಾಗೂ ಇನ್ನುಳಿದ ಮೂರು ವರ್ಷಗಳಲ್ಲಿ ರೌಸೆಫ್‌ರ ಆಡಳಿತದಲ್ಲಿ ಸಾಕಷ್ಟು ಬಡತನ ವನ್ನು ಹೋಗಲಾಡಿಸಿದ್ದೇವೆ. ಬ್ರೆಜಿಲ್‌ನ ಆರ್ಥಿಕತೆಯನ್ನು ಲ್ಯಾಟಿನ್ ಅಮೇರಿಕ ದಲ್ಲಿಯೇ ಅತ್ಯಂತ ಬಲಿಷ್ಠ ಮಾಡುವಲ್ಲಿ ಕಾರ್ಯ ನಿರ್ವಹಿಸಿದ್ದೇವೆ. ಬ್ರೆಜಿಲ್ ಕಾರ್ಮಿಕರ ಹಕ್ಕುಗಳ ನ್ನು ರಕ್ಷಣೆ ಮಾಡಿದ್ದೇವೆ. ಬ್ರೆಜಿಲ್ ನಲ್ಲಿ ಸಾಮಾಜಿಕ ಹಾಗೂ ವರ್ಗ ಚಳುವಳಿಗಳನ್ನು ಮತ್ತಷ್ಟು ವಿಸ್ತರಿಸುವ ಪಣ ತೊಡುತ್ತೇವೆ. ಬ್ರೆಜಿಲ್ ನ ಪ್ರಜಾಪ್ರಭುತ್ವ, ಸಾರ್ವಭೌಮತ್ವ ವನ್ನು ರಕ್ಷಣೆ ಮಾಡೇ ಮಾಡುತ್ತೇವೆ ಎಂಬುದಾಗಿ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದಾರೆ.



ಕಟ್ಟಡ ಕಾರ್ಮಿಕರ 9ನೇ ಅಖಿಲ ಭಾರತ ಸಮ್ಮೇಳನ ನಿರ್ಧಾರ

ನಿರ್ಮಾಣ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳಿಗಾಗಿ ಹೋರಾಟ

ಕೃಷಿ ವಲಯವನ್ನು ಬಿಟ್ಟರೆ ಅತಿ ಹೆಚ್ಚು ಉದ್ಯೋಗವಕಾಶವನ್ನು ಸೃಷ್ಟಿಸುತ್ತಿರುವ ಎರಡನೇ ವಲಯ ಕಟ್ಟಡ ನಿರ್ಮಾಣ ವಲಯವಾಗಿದೆ. ಉದಾರೀಕರಣ ನೀತಿಗಳು ದೇಶದಲ್ಲಿ ಜಾರಿಯಾದ ಬಳಿಕಾ ಕೃಷಿ ಮತ್ತು ಕೈಗಾರಿಕಾ ವಲಯಗಳೆರಡು ಬಿಕ್ಕಟ್ಟಿಗೆ ಸಿಲುಕಿವೆ. ಇದರ ಪರಿಣಾಮವಾಗಿ ಕಟ್ಟಡ ನಿರ್ಮಾಣ ಕ್ಷೇತ್ರಕ್ಕೆ ಅನಿವಾರ್ಯವಾಗಿ ಉದ್ಯೋಗವನ್ನರಸಿ ಬರುತ್ತಿರುವ ಯುವಜನರ ಪ್ರಮಾಣ ಜಾಸ್ತಿಯಾಗಿದೆ. ಆದರೆ ಇಲ್ಲಿ ಉದ್ಯೋಗ ಭದ್ರತೆ, ಸುರಕ್ಷತೆ ಇಲ್ಲವಾಗಿವೆ. ಇಲ್ಲಿ ಕೆಲಸ ಮಾಡುತ್ತಿರುವ ಕೋಟ್ಯಾಂತರ ಕಾರ್ಮಿಕರು ಕನಿಷ್ಟ ಕೂಲಿ, ಸಾಮಾಜಿಕ ಭದ್ರತೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇಂತಹ ಕಟ್ಟಡ ನಿರ್ಮಾಣ ಕಾರ್ಮಿಕರ ಫೆಡರೇಶನ್ ನ (CWFI) 9ನೇ ಅಖಿಲ ಭಾರತ ಸಮ್ಮೇಳನದ ವರದಿ ಇಲ್ಲಿದೆ.

ಕೆ. ಮಹಾಂತೇಶ

ಅಖಿಲ ಭಾರತ ಕಟ್ಟಡ ನಿರ್ಮಾಣ ಕಾರ್ಮಿಕರ ಫೆಡರೇಶನ್ ನ (CWFI) 9ನೇ ಅಖಿಲ ಭಾರತ ಸಮ್ಮೇಳನವನ್ನು ಅಕ್ಟೋಬರ್ 26ರ ಬೆಳಿಗ್ಗೆ ಮಹಾರಾಷ್ಟ್ರದ ಸೊಲಾಪುರದಲ್ಲಿ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಉದ್ಘಾಟಿಸಿದರು. ಅಕ್ಟೋಬರ್ 28ರ ವರೆಗೆ ನಡೆದ ಈ ಸಮ್ಮೇಳನದಲ್ಲಿ 12 ಲಕ್ಷ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಪ್ರತಿನಿಧಿಸಿ 44 ಮಹಿಳಾ ಸಂಗಾತಿಗಳನ್ನು ಒಳಗೊಂಡು 417 ಕ್ಕೂ ಹೆಚ್ಚಿನ ಪ್ರತಿನಿಧಿಗಳು ಹಾಗೂ 150 ವೀಕ್ಷಕರು ಈ ಮೂರು ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕರ್ನಾಟದಿಂದ 30 ಸಾವಿರ ಸದಸ್ಯರನ್ನು ಪ್ರತಿನಿಧಿಸಿ ಒಟ್ಟು 17 ಜನ ಸಂಗಾತಿಗಳು ಪಾಲ್ಗೊಂಡಿದ್ದರು. ಈ ಸಮ್ಮೇಳನ ನಡೆಯುವ ಸ್ಥಳವನ್ನು ಸಿಐಟಿಯು ಮಾಜಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ 'ಮಹ್ಮದ್ ಅಮೀನ್ ನಗರ' ವೆಂದು ಹಾಗೂ ಸಿಐಟಿಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ 'ಎಸ್. ಪ್ರಸನ್ನ ಕುಮಾರ್ ವೇದಿಕೆ' ಎಂದು ಹೆಸರಿಸಲಾಗಿತ್ತು.

ಉದ್ಘಾಟನಾ ಸಮಾರಂಭ

ಸಮ್ಮೇಳವನ್ನು ಉದ್ಘಾಟಿಸಿ ಮಾತನಾಡಿದ ತಪನ್ ಸೇನ್ ದೇಶದ ಕೃಷಿ ವಲಯವನ್ನು ಬಿಟ್ಟರೆ ಅತಿ ಹೆಚ್ಚು ಉದ್ಯೋಗವಕಾಶವನ್ನು ಸೃಷ್ಟಿಸುತ್ತಿರುವ ಎರಡನೇ ವಲಯ ಕಟ್ಟಡ ನಿರ್ಮಾಣ ವಲಯವಾಗಿದೆ. ಉದಾರೀಕರಣ ನೀತಿಗಳು ದೇಶದಲ್ಲಿ ಜಾರಿಯಾದ ಬಳಿಕಾ ಕೃಷಿ ಮತ್ತು ಕೈಗಾರಿಕಾ ವಲಯಗಳೆರಡು ಬಿಕ್ಕಟ್ಟಿಗೆ ಸಿಲುಕಿವೆ. ಇದರ ಪರಿಣಾಮವಾಗಿ ಕಟ್ಟಡ ನಿರ್ಮಾಣ ಕ್ಷೇತ್ರಕ್ಕೆ ಅನಿವಾರ್ಯವಾಗಿ ಉದ್ಯೋಗವನ್ನರಸಿ ಬರುತ್ತಿರುವ ಯುವಜನರ ಪ್ರಮಾಣ ಜಾಸ್ತಿಯಾಗಿದೆ. ಆದರೆ ಇಲ್ಲಿ ಉದ್ಯೋಗ ಭದ್ರತೆ, ಸುರಕ್ಷತೆ ಇಲ್ಲವಾಗಿವೆ. ಇಲ್ಲಿ ಕೆಲಸ ಮಾಡುತ್ತಿರುವ ಕೋಟ್ಯಾಂತರ ಕಾರ್ಮಿಕರು ಕನಿಷ್ಟ ಕೂಲಿ, ಸಾಮಾಜಿಕ ಭದ್ರತೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇವರ ಬಗ್ಗೆ ಮೋದಿ ಸರಕಾರ ಯಾವುದೇ ಅಗತ್ಯ ಕ್ರಮ ವಹಿಸುತ್ತಿಲ್ಲ. ದೇಶದ ಕಟ್ಟಡ ನಿರ್ಮಾಣ ವಲಯದಲ್ಲಿ ಕೋಟ್ಯಾಂತರ ಕಾರ್ಮಿಕರು ದುಡಿಯುತ್ತಿದ್ದರೂ ಅವರ ಬಗ್ಗೆ ನಿಖರ ಮಾಹಿತಿ ಸರಕಾರದ ಬಳಿ ಇಲ್ಲ. 2006 ಮತ್ತು 2007 ರಲ್ಲಿ ಕಟ್ಟಡ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಕಾನೂನು ಮತ್ತು ಸೆಸ್ ಕಾನೂನುಗಳು ಜಾರಿಯಾದರೂ ಆ ಎರಡು ಕಾನೂನುಗಳನ್ನು ಸರಿಯಾಗಿ ಜಾರಿ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ವಿಫಲವಾಗಿವೆ. ಒಂದು ಕಡೆ ದೇಶದಲ್ಲಿ ಸುಮಾರು 40 ಸಾವಿರ ಕೋಟಿ ಸೆಸ್ ಹಣ ಸಂಗ್ರಹವಾಗಿದ್ದೂ ಕಾರ್ಮಿಕ ಕಲ್ಯಾಣಕ್ಕೆ ಸರಿಯಾಗಿ ಬಳಕೆಯಾಗುತ್ತಿಲ್ಲ. ಮತ್ತೊಂದೆಡೆ ಅಧಿಕಾರಿಗಳು ಮತ್ತು ದೊಡ್ಡ ದೊಡ್ಡ ನಿರ್ಮಾಣ ವಲಯದ ಮಾಲೀಕರು ಶಾಮೀಲಾಗಿ ಸಾವಿರಾರು ಕೋಟಿ ಸೆಸ್ ಹಣ ಸಂಗ್ರಹವಾಗದಂತೆ ನೋಡಿಕೊಂಡಿದ್ದಾರೆ. ಜೊತೆಗೆ ಮೋದಿ ಸರಕಾರ ಎಲ್ಲರಿಗೂ ಸಾಮಾಜಿಕ ಭದ್ರತೆ ನೀಡುವ ನೆಪದಲ್ಲಿ ಸಂಗ್ರಹವಾಗಿರುವ ಸೆಸ್ ಹಣವನ್ನು ತನ್ನ ಕೈಗೆ ತೆಗೆದುಕೊಳ್ಳುವ ಹುನ್ನಾರಗಳ ವಿರುದ್ದ ಕಟ್ಟಡ ನಿರ್ಮಾಣ ವಲಯದ ಕಾರ್ಮಿಕ ಸಂಘಗಳು ಈ ಪ್ರಶ್ನೆಯನ್ನು ಗಂಭೀರವಾಗಿ ಎತ್ತಿ ಹೋರಾಟಕ್ಕಿಳಿಯಬೇಕು ಅಫಊಋ ಅದರ ಮುಂಚೂಣಿ ನಾಯಕತ್ವವನ್ನು ವಹಿಸಬೇಕು ಎಂದು ಕರೆ ನೀಡಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಅಖಿಲ ಭಾರತ ಅಧ್ಯಕ್ಷರಾದ ಸಿಂಗಾರುವೇಲು ವಹಿಸಿದ್ದರು. ಉಮಾ ಮಹೇಶ್ವರರಾವ್ ಸಂಚಾಲಕರಾದ ನಿರ್ಣಯ ಸಮಿತಿ, ತಪನ್ ಶರ್ಮ ಸಂಚಾಲಕತ್ವದ ಕ್ರೆಡೆನ್ಸಿಯಲ್ ಕಮಿಟಿ ಹಾಗೂ ಅಜಿತ್ ಶರ್ಮ ಅವರ ಸಂಚಾಲಕರಾದ ದಾಖಲಾತಿ ಸಮಿತಿಗಳನ್ನು ಸಮ್ಮೇಳನ ಚುನಾಯಿಸಿತು. ಕರ್ನಾಟಕದ ಪರವಾಗಿ ಎನ್. ವೀರಸ್ವಾಮಿ ಅಧ್ಯಕ್ಷೀಯ ಸಮಿತಿಯಲ್ಲಿ ಹಾಗೂ ಕೆ. ಮಹಾಂತೇಶ್ ನಿರ್ಣಯ ಸಮಿತಿಯಲ್ಲಿ ಇದ್ದರು. ಮಧಾಹ್ನದ ಬಳಿಕಾ ಪ್ರಧಾನ ಕಾರ್ಯದರ್ಶಿ ದಿಬಂಜನ್ ಚಕ್ರವರ್ತಿ ಮಂಡಿಸಿದ ಪ್ರಧಾನ ಕಾರ್ಯದರ್ಶಿ ವರದಿ ಹಾಗೂ ಖಜಾಂಚಿ ಕರ್ಮಕಾರ್ ಮಂಡಿಸಿದ ಲೆಕ್ಕಪತ್ರದ ಮೇಲೆ ಚರ್ಚೆಗಳು ಆರಂಭಗೊಂಡವು ಸುಮಾರು 7.45 ನಿಮಿಷಗಳನ್ನು ಪ್ರತಿನಿಧಿಗಳ ಚರ್ಚೆಗೆ ಮೀಸಲಿಡಲಾಗಿತ್ತು ಸುಮಾರು 45 ಕ್ಕೂ ಹೆಚ್ಚಿನ ಸಂಗಾತಿಗಳು ಈ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ಕರ್ನಾಟಕದ ಕಟ್ಟಡ ಕಾರ್ಮಿಕರ ಪರಿಸ್ಥಿತಿ ಹಾಗೂ ಸರಕಾರ ಮರ್ತು ಕಲ್ಯಾಣ ಮಂಡಳಿ ಪರಿಸ್ಥಿತಿ ಹಾಗೂ ಕಾರ್ಮಿಕರು ಸ್ವತಂತ್ರವಾಗಿ ಮತ್ತು ಜಂಟಿಯಾಗಿ ನಡೆಸುತ್ತಿರುವ ಹೋರಾಟಗಳ ಕುರಿತು, ಜೊತೆಗೆ ಮರಳು ಸಮಸ್ಯೆ, ವಲಸೆ ಕಾರ್ಮಿಕರ ಸಮಸ್ಯೆ ಹಾಗೂ ಮಂಡಳಿಯಲ್ಲಿ ನೊಂದಣಿಯಾಗಿರುವ ಫಲಾನುಭವಿಗಳು ಸೌಲಭ್ಯಗಳನ್ನು ಪಡೆಯಲು ನಡೆಸುತ್ತಿರುವ ಹೋರಾಟಗಳ ಕುರಿತು ರಾಜ್ಯ ಉಪಾಧ್ಯಕ್ಷರಾದ ಹರೀಶ್ ನಾಯ್ಕ ಮತ್ತು ರಾಜ್ಯ ಖಜಾಂಚಿ ಸುರೇಶ ಕಲ್ಲಾಗಾರ್ ರಾಜ್ಯದ ಪರವಾಗಿ ಮಾತನಾಡಿದರು



ಮಹಿಳಾ ಅಧಿವೇಶನ

9ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಎರಡನೇ ದಿನ ಕಟ್ಟಡ ಉಧ್ಯಮದಲ್ಲಿ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅರ್ಧ ದಿನದ ಅಧಿವೇಶನವನ್ನು ಮೀಸಲಿಡಲಾಗಿತ್ತು. ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿಗಳು ಹಾಗೂ CWFI ರಾಷ್ಟ್ರೀಯ ಉಪಾಧ್ಯಕ್ಷ ರಾದ ಮಾಲತಿ ಚಿಟ್ಟಿಬಾಬು ಕಟ್ಟಡ ನಿರ್ಮಾಣ ವಲಯದಲ್ಲಿ ಮಹಿಳೆಯರಿಗೆ ಆಗುತ್ತಿರುವ ವೇತನ ತಾರತಮ್ಯ, ದೌರ್ಜನ್ಯ, ಲೈಂಗಿಕ ಹಿಂಸಾಚಾರ ಮತ್ತು ಕೆಲಸದ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳ ನಿರಾಕರಣೆ, ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಹಲವು ಆರೋಗ್ಯ ಸಮಸ್ಯೆಗಳು, ಸಂಘಟನೆಯಲ್ಲಿ ಮಹಿಳಾ ವಿಭಾಗದ ನಿರ್ಲಕ್ಷ್ಯ, ನಾಯಕತ್ವಕ್ಕೆ ತರುವಲ್ಲಿ, ಅವರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಉದಾಸೀನತೆ, ಮಹಿಳಾ ಕಾರ್ಮಿಕರು ಮತ್ತು ಕಾರ್ಯಕರ್ತರ ಕುರಿತಾಗಿ ಇರುವ ಧೋರಣೆಯನ್ನು ಕುರಿತು ಬೆಳಕು ಚೆಲ್ಲುವ ವರದಿಯನ್ನು ಸಮ್ಮೇಳನದಲ್ಲಿ ಮಂಡಿಸಿದರು.

CWFI ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ದೇಬಂಜನ್ ಕಳೆದ ನಾಲ್ಕು ವರ್ಷಗಳಲ್ಲಿ ಮಹಿಳಾ ಕಾರ್ಮಿಕರನ್ನು ಸಂಘಟಿಸುವಲ್ಲಿ ನಾವು ನಡೆಸಿರುವ ಪ್ರಯತ್ನಗಳ ಬಗ್ಗೆ ಮತ್ತು ಭವಿಷ್ಯದಲ್ಲಿ ಸಂಘಟನೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾತನಾಡಿದರು. ಬಳಿಕ ರಾಜ್ಯಗಳಿಂದ ಹಾಜರಿದ್ದ ಮಹಿಳಾ ಪ್ರತಿನಿಧಿಗಳು ತಮ್ಮ ರಾಜ್ಯಗಳ ಪರಿಸ್ಥಿತಿಯನ್ನು ವರದಿ ಮಾಡಿದರು. ಕರ್ನಾಟಕದ ಮಹಿಳಾ ಉಪ ಸಮಿತಿ ಸಂಚಾಲಕಿ ಕುಮಾರಿ ಮಾತನಾಡಿದರು.

ರಾಷ್ಟ್ರವ್ಯಾಪಿ ಮುಷ್ಕರ ಯಶಸ್ವಿಗೆ ನಿರ್ಣಯ

ಸೋಲಾಪುರದಲ್ಲಿ ನಡೆದ ಕಟ್ಟಡ ಕಾರ್ಮಿಕರ 9ನೇ ರಾಷ್ಟ್ರ ಸಮ್ಮೇಳನವು ಮುಂಬರುವ ಜನವರಿ 8 ಹಾಗೂ 9ರಂದು ಎರಡು ದಿನಗಳ ಸಾರ್ವತ್ರಿಕ

ಪುಟ 10 ಕ್ಕೆ

ನೂತನ ಯುವ ನಾಯಕತ್ವ ಆಯ್ಕೆ

ಸೋಲಾಪುರ ದಲ್ಲಿ ನಡೆದ ಕಟ್ಟಡ ಕಾರ್ಮಿಕರ 9ನೇ ರಾಷ್ಟ ಸಮ್ಮೇಳನವು ಹರಿಯಾಣದ ಸುಖ್ ಬೀರ್ ಸಿಂಗ್ ಅವರನ್ನು ಅಧ್ಯಕ್ಷರನ್ನಾಗಿ ಹಾಗೂ ಕೇರಳದ ಶಶಿಕುಮಾರ್ ಅವರನ್ನು ಪ್ರಧಾನ ಕಾರ್ಯದರ್ಶಿ ಹಾಗೂ ಕೇರಳದ ಕೆ.ವಿ. ಜೋಸ್ ಅವರನ್ನು ಖಜಾಂಚಿಯನ್ನಾಗಿ ಸರ್ವಾನುಮತದಿಂದ ಆಯ್ಕೆಮಾಡಿತು.

ಸಮ್ಮೇಳನವು 48 ಜನರ ಕಾರ್ಯದರ್ಶಿ ಮಂಡಳಿಯನ್ನು 140 (6 ಸ್ಥಾನ ಖಾಲಿ ಇರುವ) ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಿತು.

ಕರ್ನಾಟಕದಿಂದ ಅಖಿಲ ಭಾರತ ಉಪಾಧ್ಯಕ್ಷರಾಗಿ ಎನ್.ವೀರಸ್ವಾಮಿ, ರಾಷ್ಟ್ರೀಯ ಕಾರ್ಯದರ್ಶಿ ಯಾಗಿ ಕೆ.ಮಹಾಂತೇಶ ಆಯ್ಕೆಯಾದರು.

ವರ್ಕಿಂಗ್ ಕಮಿಟಿ ಸದಸ್ಯರಾಗಿ ಬಿ.ಉಮೇಶ, ಹರೀಶ್ ನಾಯ್ಕ, ಸುರೇಶ್ ಕಲ್ಲಾಗಾರ, ಆಶಾ ಮತ್ತು ಯೋಗಿಶ್ ಜಪ್ಪಿನ ಮೊಗರು ಆಯ್ಕೆಯಾದರು.



ಅಧ್ಯಕ್ಷರು: **ಸುಖ್ ಬೀರ್ ಸಿಂಗ್**



ಪ್ರಧಾನ ಕಾರ್ಯದರ್ಶಿ: **ಶಶಿಕುಮಾರ್**



ಕೆ.ಮಹಾಂತೇಶ



ಸುರೇಶ್ ಕಲ್ಲಾಗಾರ



ಹರೀಶ್ ನಾಯ್ಕ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**